1. 8.

N12<518567736 021

ubTÜBINGEN

Fr. Keuler.

BY M

ENGI

I

BY T

PRINTED

# DIALOGUES

IN

# CANARESE,

BY MUNSHI SHRINIVASIAH.

WITH AN

# ENGLISH TRANSLATION,

BY

## RICHARD G. HODSON.

REVISED

## BY THE REV. D. SANDERSON.

---

BANGALORE:

PRINTED AND PUBLISHED AT THE WESLEYAN MISSION PRESS.

BY B. RUNGIAH, *Printer*.

1857.

Page.
16
34
58
106
178

Ci XIV 122a.

# ERRATA.

| *Page.* | *Line.* | *For* | *Read.* |
|---|---|---|---|
| 16 | Note | a khanduga | two khandugas. |
| 34 | Note 4 | ಗುರುತ | ಗರುಡ. |
| 58 | 12 | ತಕ್ಕವೂಗಳು | ತಕ್ಕವುಗಳು. |
| 106 | 23 | bread | beard. |
| 178 | 15 | ಊರಿನ ಬಳಿಯ | ಊರಿನ ಕೆರೆಯ ಬಳಿಯ. |

THE
munshi,
perience
a specime
classes of
purity of
colloquia
combine
*a useful*
with the
difficult,
one who
repaid.

In t
the conv
mixture
The des
versation
the Mer
sation

# PREFACE.

The following Dialogues were written by an able munshì, unacquainted with English, but of long experience in teaching Europeans Canarese. They are a specimen of the *daily spoken language* of the several classes of persons introduced. The variety of subject, purity of idiom, the vast number of words, and the colloquial differences of pronunciation and expression, combine to make it *the best work extant for acquiring a useful knowledge of the language.* Commencing with the simplest sentences, it becomes gradually more difficult, and requires close application. But any one who thoroughly masters the whole, will be well repaid.

In the intercourse of the cutcherry people, and in the conversation with the Amildar, there is a large admixture of Hindustani words, as is usual with them. The descriptions of the Shepherd,—the Feast, in conversation with him,—Evening, in the conversation with the Merchant,—Tanks, and the Ghost Story, in conversation with the Amildar,—and other parts, are very

graphic. A vein of good humour, characteristic of the author, runs through the whole book; and much light is thrown upon the habits, opinions, the modes of thought, feeling and expression of the people. As might be expected, the gentleman cuts a poor figure among the brahmans!

The translation is made for the help of students. It is neither slavishly literal nor vaguely free; but such as to afford every needful aid to the student. The notes are a further help.

D. S.

BANGALORE,
*August* 7, 1857.

# CONTENTS.


| Dialogue. | | | Page. |
|---|---|---|---|
| I. | Between an English Gentleman and his Servant | | 1 |
| II. | With a | Horsekeeper | 5 |
| III. | ,, | Gardener | 9 |
| IV. | ,, | Bandyman | 12 |
| V. | ,, | Ryot | 14 |
| VI. | ,, | Shepherd | 21 |
| VII. | ,, | Merchant | 46 |
| VIII. | ,, | Amildar | 96 |
| IX. | ,, | Brahmans | 178 |
| X. | ,, | An Old Man | 206 |

## ಮೊದಲನೇ ಸಂಭಾಷಣೆ.

### ಧೊರೆಗೂ ಆಳಿಗೂ ನಡೆದದ್ದು.

ಧೊ. ನೀನು ಯಾರು? [1]

ಆ. ನಾನು ಆಳುತನಾ ಮಾಡುವವನು.

ಧೊ. ಎಲ್ಲಿಂದ ಬಂದೆ? [2]

ಆ. ಹಳ್ಳಿಯಿಂದ ಬಂದೆನು.

ಧೊ. ನೀನು ಯಾವ ಬಗೆಯವನು? [3]

ಆ. ಒಕ್ಕಲ ಮಗನು.

ಧೊ. ನಿನಗೆ ತಾಯಿ, ತಂದೆ, ಅಣ್ಣ, ತಮ್ಮಂದಿರು ಉಂಟೋ?

## DIALOGUE I.

### *Between an English Gentleman and his Servant.*

G. Who are you?

S. I am a servant.

G. Where have you come from?

S. I came from the village.

G. Of what caste are you?

S. A cultivator.

G. Have you mother, father, and brothers?

1. In Canarese the verb is not required.
2. For ಬಂದಿ, 2nd pers. sing. past tense of ಬಾ.
3. More respectful than ಜಾತಿಯವನು.

ಆ. ತಾಯಿ ತಂದೆಗಳು ಮುದುಕರು, ಮನೆಯಲ್ಲಿ ಇದ್ಧಾರೆ. ಅಣ್ಣ ತಮ್ಮಂದಿರಲ್ಲಿ ಅಣ್ಣಂದಿರು ಇಬ್ಬರು ಬೇರೆ ಮನೆ ಮಾಡಿ ಕೊಂಡು ಇದ್ಧಾರೆ. ತಮ್ಮಂದಿರು ಇಬ್ಬರು ಇನ್ನೂ ಚಿಕ್ಕವರು; ಮನೆ ಮರೆಯಲ್ಲಿ ದನ ಕರುಗಳಿಗೆ[4] ಹುಲ್ಲು ಹೊಟ್ಟು ತಂದು ಕೊಂಡು, ಮುದುಕರಾದ ತಾಯಿ ತಂದೆಗಳ ಹತ್ರ ಇದ್ಧಾರೆ.

ಧೊ. ಆದರೆ ನೀನು ಒಬ್ಬನೇನೋ[5] ಕೂಲಿ ಮಾಡ ತಕ್ಕವನು?

ಆ. ಹೌದು, ಸಾಮೀ,[6] ನಾನು ಒಬ್ಬನೇ ಕೂಲಿ ಮಾಡಿ, ಸಂಸಾರ ನೀಚ ಬೇಕು.

ಧೊ. ನಿನಗೆ ಮದಿವೆ ಆಗಿ ಇದೆಯೋ?

ಆ. ಮದಿವೆ ಆಗಿ ಇದೆ.

ಧೊ. ಮಕ್ಕಳು ಎಷ್ಟು ಜನ?

S. My mother and father are old, and at home Of my brothers, the two elder keep separate house. My two younger brothers are still little ones, they bring grass and husks for the cattle about the house, and stay with our aged parents

G. Then are you the only one that can earn anything?

S. Yes, Sir, I alone must work and maintain the family.

G. Are you married?

S. I am married.

G. How many children (have you)?

4. Cattle and Calves. 5. A form of interrogation.
6. *Vulg.* for ಸ್ವಾಮಿ.

ಆ. ಒಂದು ಗಂಡು, ಒಂದು ಹೆಣ್ಣು.

ಧೊ. ನಿನ್ನ ಮಗನಿಗೆ ಎಷ್ಟು ವರುಷ?

ಆ. ನಾಲ್ಕು ವರುಷದವನು, ಸಾಮಿ.

ಧೊ. ಮಗಳು ಎಷ್ಟು ವರುಷದವಳು?

ಆ. ಅವಳಿಗೂ ಎರಡು ವರುಷ ತುಂಬಿತು, ಮೂರ ನೇ ವರುಷ ನಡಿಯುತ್ತೆ.[7]

ಧೊ. ನಿನಗೆ ಎಷ್ಟು ವರುಷ?

ಆ. ನನಗೆ ಎಷ್ಟು ವರುಷವ್ರೋ, ಲೆಕ್ಕವಿಲ್ಲ ಸಾಮಿ; ಆದರೆ ಒಂದು ಗುರುತು ಉಂಟು,— ಶ್ರೀರಂಗಪಟ್ಣದ ಕೋಟೆ ಹೋದಾಗ, ನಾನು ತಾಯೀ[8] ಗಬ್ಬದಲ್ಲಿ ಇದ್ದೆ ನಂತೆ.[9]

ಧೊ. ಆದರೆ ನಿನಗೂ ನಲವತ್ತು ವರುಷದ ಮೇಲೆ ಆಗಿರ ಬಹುದು.

ಆ. ಇದ್ದೀತು, ಸಾಮಿ, ನನಗೇನು[1] ತಿಳಿಯುವದು?

S. One boy and one girl.

G. How old is your son?

S. Four years old, Sir.

G. How old is your daughter?

S. She is full two years, and going on to three.

G. How old are you?

S (I can't say) how old I am; there is no account, Sir. But there is a mark: They say that Seringapatam fell just before I was born.

G. Then you may be over forty?

S. May be, sir; what do I know?

7 for ನಡೆಯುತ್ತದೆ.
8. for ತಾಯಿಯ.
9. ಇದ್ದೆನು ಅಂತೆ.
1. ನನಗೆ ಏನು.

ಧೊ. ನೀನು ಯಾವ ಕೆಲಸಾ ಮಾಡೀ? [2]

ಆ. ನಾನು ಆರಂಬದ ಕೆಲಸಾ ಮಾಡೇನು,[3] ತೋಟದ ಕೆಲಸಾ ಮಾಡೇನು.

ಧೊ. ಇನ್ನೂ ಏನು ಕೆಲಸಾ ಮಾಡೀ?

ಆ. ಬಂಡೀ[4] ಹೊಡೆಯುವ ಕೆಲಸಾ, ಕುದುರೇ[5] ಚಾಕಿರಿಯೂ ಮಾಡ ಬಲ್ಲೆನು.

ಧೊ. ನಮ್ಮಲ್ಲಿ ಕುದುರೇ ಚಾಕರಿ ಮಾಡ ಬೇಕು.

ಆ. ಮಾಡೇನು; ಏನು ಸಂಬಳಾ ಕೊಡುತ್ತೀರಿ,[6] ಸಾಮಿ?

ಧೊ. ನಾಲ್ಕು ರೂಪಾಯಿ ಸಂಬಳಾ ಕೊಡುತ್ತೇವೆ.[7]

ಆ. ನನ್ನ ಹೊಟ್ಟೇ ತುಂಬದು, ಸಾಮಿ.

ಧೊ. ಆದರೆ ನಿನ್ನ ಹೊಟ್ಟೆ ಬಹು ದೊಡ್ಡದು; ಐದು ರೂಪಾಯಿ ಕೊಡುತ್ತೇವೆ; ಇರುತ್ತೀಯೋ? ಇಲ್ಲವೋ? ಹೇಳು.

G. What work can you do?

S. I can do farming, and I can do gardening.

G. What else can you do?

S. I can drive a carriage, and look after a horse.

G. Then you must be my horsekeeper.

S. I will. What pay will you give, Sir?

G. I'll give you four rupees.

S. My belly, won't fill (with that) Sir.

G. Then your belly is a very big one. I'll give you five rupees. Will you stay or not? Say!

2. 2nd per. sing. con. fut.
3. 1st per. sing. con. fut.
4. For ಬಂಡಿಯನ್ನು.
5. For ಕುದುರೆಯ.
6. Pres for fut in constant use.
7. In speaking of onesself or to another respectfully, the plural is used.

ಆ. ಇರುತ್ತೇನೆ, ಸ್ವಾಮಿ.

ಧೊ. ಆದರೆ ಹಿಡಿ; ನಿನಗೆ ಭತ್ಯಕ್ಕೆ ಒಂದು ರೂಪಾಯಿ ಮುಂಗೋಳು ಕೊಡುತ್ತೇನೆ; ತೆಕ್ಕೊ?[8]

ಆ. ಒಳ್ಳೇತು, ಸ್ವಾಮಿ, ಕೊಡಿ.[9]

S. I'll stay, Sir.

G. Here then. I give you a rupee in advance for your food. Take.

S. Very well, Sir; give.

---

## ಎರಡನೇ ಸಂಭಾಷಣೆ.

### ಕುದುರೆಯವನ ಸಂಗಡ.

ಧೊ. ಲಾಯಕ್ಕೆ ಹೋಗಿ, ಕುದುರೆಗೆ ಲಗಾಂ ಕೊಟ್ಟು,[1] ತೆಗೆದು ಕೊಂಡು ಬಾ.

ಕು. ಬರುತ್ತೇನೆ. . . . .ಇಗೋ, ತಂದೆನು.

## DIALOGUE II.

### *With a Horsekeeper.*

G. Go to the stable, put on the bridle, and bring the horse.

H. I'll bring it. . . . . .See, I have brought it.

8. for ತೆಗೆದು ಕೊಳ್ಳು. 9. 2nd per. pl. imp.
1. ಕೊಡು is used for any thing *put into the mouth*, as bits, medicine, &c.

ಧೊ. ಕುದುರೆಗೆ ಖೋಗೀರು ಮಾಡಿದ್ಯಾ?[2]

ಕು. ಮಾಡುತ್ತೇನೆ. . . . .ಮಾಡಿದೆನು, ದ್ಯಾವರು.[3]

ಧೊ. ಯಾಕೆ ಅಂಕೋಲೆಗಳು ಹೆಚ್ಚು ಕಡಿಮೆ ಆಯಿತು?

ಕು. ಸರಿ ಮಾಡಿದ್ಧೇನೆ.

ಧೊ. ಇಲ್ಲಿಂದಾ ಮುಂದೆ ಇರುವ ಹಳ್ಳಿ ಎಷ್ಟು ದೂರ ಉಂಟು?

ಕು. ಒಂದು ಹರಿದಾರಿಗೆ ರವೆಷ್ಟು ಹೆಚ್ಚು ಕಡಿಮೆ[4] ಇದ್ದೀತು.

ಧೊ. ನಡಿವೆ ದಾರಿಯಲ್ಲಿ ಮರಗಳು ಉಂಟೋ?

ಕು. ದೊಡ್ಡ ತೋಪು ಒಂದು ಇದೆ.

ಧೊ. ಅದರಲ್ಲಿ ಎಷ್ಟು ಮರಗಳು ಇದ್ದೀತು?[5]

ಕು. ಅಗೊಳ್ಳಿ, ಸಾಮಿ, ಕಾಣಿಸುತ್ತೆ.

G. Have you saddled the horse?
H. I'll do so. . . . . .I've done it, Sir.
G. Why are the stirrups uneven?
H. I have made them right (or equal.)
G. How far is it from here to the next village?
H. Perhaps about a *haridàri.*
G. Are there any trees midway?
H. There is a large grove.
G. How many trees may there be in it?
H. Look Sir! It is in sight.

2. for ಮಾಡಿದಿಯಾ, 2nd per. sing. past. with interrogative ಆ.
3. for ದೇವರು. 4. A little more or less.
5. A sing. verb often follows a pl. noun of the neut. gen.

ಧೊ. ಆ, ಹೌದು, ದೊಡ್ಡ ತೋಪು, ಮರಗಳು ಬಹಳವಾಗಿವೆ.

ಕು. ಶಾನೆ ಮರಗಳು ಇವೆ, ಸ್ವಾಮಿ.

ಧೊ. ನಾವು ಈ ತೋಪಿನಲ್ಲಿ ರವೆಷ್ಟು ಹೊತ್ತು ಇದ್ದು, ಬರುತ್ತೇವೆ; ನೀನು ಮುಂದೆ ನಡಿ.

ಕು. ಹಾಗೆ ಆಗಲಿ.

ಧೊ. ಹುರಳೀ ಹಾಕು.[6]

ಕು. ಎಷ್ಟು ಸೇರು ಹುರಳೀ ಹಾಕ ಬೇಕು, ಸ್ವಾಮಿ?

ಧೊ. ಐದು ಸೇರು ಹುರಳೀ ಹಾಕು.

ಕು. ಹಾಕಿದೆನು. . . . .ಹುರಳೀ ಬೆಂದು, ತಯಾರಾಗಿದೆ.

ಧೊ. ಚನ್ನಾಗಿ ಆರಿಸಿ, ತೋಬರೆಗೆ ತುಂಬು.

G. O yes! It is a large grove; there are a great many trees.

H. There are many trees, sir.

G. I will stay a little while in this grove, and then come on. Do you go forward.

H. Very well. (So let it be.)

G. Put out the gram.

H. How many seers of gram must I put out, Sir?

G. Put out five seers of gram.

H. I have put it out. . . . . .The gram is boiled and ready.

G. Cool it well, and put it into the gram bag.

6. *i. e.* give out raw gram.

ಹು. ಆರಿಸಿ ಇದ್ದೇನೆ. . . . .ಆರುತ್ತೆ.

ಧೊ. ಅಷ್ಟರಲ್ಲಿ ಕುದುರೆಗೆ ಚನ್ನಾಗಿ ಮಾಲೀಸು ಮಾಡು.

ಹು. ಮಾಡುತ್ತೇನೆ.

ಧೊ. ತೋಬರೆ ಕಟ್ಟು.

ಹು. ಕಟ್ಟಿದೆನು.

ಧೊ. ಹುಲ್ಲು ಚನ್ನಾಗಿ ಮಣ್ಣು ಇಲ್ಲದೆ ಒದರಿ, ಹಾಕು.[7]

ಹು. ಹಾಕಿದೆನು.

ಧೊ. ನಾಳೆ ಬೆಳಗ್ಗೆ ಮಸಾಲೆ ಕೊಡ ಬೇಕು; ಮಸಾಲೇ ಸಾಮಾನು ತೆಗೆದು ಕೊಂಡು ಬಾ.

ಹು. ಒಂದು ಪಟ್ಟಿ ಬರೆದು ಕೊಟ್ಟರೆ, ಆ ಮೇರಿಗೆ ತೆಗೆದು ಕೊಂಡು ಬರುತ್ತೇನೆ. . . . .ತೆಗೆದು ಕೊಂಡು ಬಂದೆನು.

H. I have set it to cool. . . . . .It is cooling.

G. In the meantime rub down the horse well.

H. I'll do so.

G. Tie on the bag.

H. I've tied it.

G. Shake the grass well, free from dirt, and give it.

H. I have given it.

G. To morrow morning you must give some-medicine (to the horse.) Fetch the ingredients.

H. If you write and give me a list, I will bring according to it. . . . . .I have brought it.

7. *lit.* put it (before the horse.)

ಧೊ. ಮಸಾಲೆ ಚನ್ನಾಗಿ ಕುಟ್ಟು, ಸರಿಯಾಗಿ ಉಂಡೆಗಳು ಕಟ್ಟು, ಎಲ್ಲಾ ಉಂಡೆಗಳನ್ನು ಭದ್ರವಾಗಿ ಒಂದು ಕಡೆ ಇಡು. ಹೊತಾರೆಗೆ ಒಂದು ಉಂಡೆ, ಸಂಜೆಗೆ ಒಂದು ಉಂಡೆ, ಈ ಮೇರಿಗೆ ಕೊಡುತ್ತಾ ಬಾ. ಕುದುರೆಯನ್ನು ಚನ್ನಾಗಿ ಆರೈಕೆ ಮಾಡ ಬೇಕು.

G. Pound the medicine well, make it properly into balls, keep all the balls carefully in some place; a ball in the morning, and one in the evening, thus continue to give, and take good care of the horse.

---

## ಮೂರನೇ ಸಂಭಾಷಣೆ.

### ತೋಟದವನ ಸಂಗಡ.

ಧೊ. ಎಲಾ, ತೋಟದವನೇ, ಬಾ.

ತೋ. ಇಗೋ, ಬಂದೆನು.

ಧೊ. ಈ ಹೊತ್ತು ಹೊತಾರೆಯಿಂದ ಏನು ಕೆಲಸ ಮಾಡಿದೆ? ಅವರು ಇನ್ನಿಬ್ಬರು ಆಳುಗಳು ಬಂದು ಇದ್ದಾರೋ?

## DIALOGUE III.

### *With a Gardener.*

G. Ho! Gardener, come here.

Ga. See, I have come.

G. What work have you done to day since morning? Have those other two labourers come?

ತೋ. ಆ ಇಬ್ಬರೂ ಬಂದು ಇದ್ಧಾರೆ; ನಾನೂ, ಅವರೂ, ಮೂರು ಜನವೂ, ತೋಟದಲ್ಲಿ ಒಂದು ಮಾರು ಅಗತೆ ಮಾಡಿದೆವು.[8]

ಧೊ. ಹೊಸದಾಗಿ ಹಾಕಿದ ಸಸಿಗಳಿಗೆ ನೀರು ಹಾಕಿದಿರಾ?

ತೋ. ಆ ಸಸಿಗಳಿಗೆ ಸುತ್ತೂ ಗೋಡೆ ನಡು ಉದ್ದ ಹಾಕಿ, ನೀರು ಹಾಕುವದಕ್ಕೆ ಬಚ್ಚಲು ಕಟ್ಟಿ, ತಲಾ[9] ನಾಲ್ಕು ನಾಲ್ಕು ಗಡಿಗೆ ನೀರು ಹಾಕಿದೆವು.

ಧೊ. ಮೊದಲಿನ ಸಸಿಗಳು ಚನ್ನಾಗಿ ಚಿಗರಿ ಇಧೆಯೋ?

ತೋ. ಎಲ್ಲಾ ಸಸಿಗಳು ಚನ್ನಾಗಿ ಒಡದು, ದೊಡ್ಡ ದೊಡ್ಡ ಎಲೆಗಳು ಬಿಟ್ಟು ಕೊಂಡು ಇಧೆ. ಅದರಲ್ಲಿ ಒಂ

Ga. They have both come. I and they, three persons, have dug the (length of the) garden a fathom (broad.)

G. Did you water the young trees that were lately planted?

Ga. We built a wall breast high round the plants, made a channel (under the wall) to water them, and put four chatties of water to each.

G. Have the first plants sprouted well?

Ga. All the plants have burst nicely, and put

8. A labourer's fathom is the space that a man can dig on both sides, he keeping in a straight line. A plough-fathom is the space gone over by the plough's turning at the end of the furrow. Each had dug a fathom.

9. Per head.

ದು ಹಿಪ್ಪೇ ಸೊಶೀ ಮಾತ್ರ ಯಾಕೋ ನರತು ಕೊಂಡು ಇಧೆ.

ಧೊ. ಆದರೆ ಆ ಸಶಿಗೆ ಹುಳುವಾಡಿರ[1] ಬೇಕು. ಅದರ ಎಲೆಗಳ ಚನ್ನಾಗಿ ನೋಡಿ, ಹುಳುವು ಇದ್ದರೆ, ತೆಗೆದು ಹಾಕಿ, ಚನ್ನಾಗಿ ಕೊತ್ತನೆ ಮಾಡಿ, ಕೆಮ್ಮಣ್ಣೂ ಗೊಬ್ಬರವೂ ಬೆರಸಿ, ಪಾತಿ ತುಂಬಕ್ಕೊ ಹಾಕಿ, ಒಣಗದ ಹಾಗೆ ನೀರು ಹಾಕಿ, ಜೋಪಾನ ಮಾಡಿ, ನಿಂತ ಮರಗಳಿಗೂ ಚನ್ನಾಗಿ ಅಗತೆ ಕೊಟ್ಟು, ನೀರು ಹಾಕಿರಿ. ನಾವ್ರನ್ನೂ[2] ಸಾಯಂಕಾಲಕ್ಕೆ ಬರುತ್ತೇನೆ.

forth large leaves. One only of them, an olive tree, (I don't know why) is stunted.

G. Then that tree must be infeste l by insects. Examine its leaves well, and if there be any insects, pick them off, loosen the earth well, mix red earth and manure, make a basin for watering, water it to prevent its withering, and carefully protect it; dig well about the other trees, and water them. I shall come myself in the evening.

1. ಹುಳುವು ಆಡಿ ಇರ. 2. For ನಾನೂ.

## ನಾಲ್ಕನೇ ಸಂಭಾಷಣೆ.

### ಭಂಡಿಯವನ ಸಂಗಡ.

ಧೊ. ಭಂಡಿಯವನೇ, ಭಂಡಿ ತೆಗೆದು ಕೊಂಡು ಬಾ. ಎತ್ತುಗಳು ನೀರು ಕುಡೀತೋ?[3]

ಭ. ನೀರು ಕುಡಿಸಿದೆನು.

ಧೊ. ನೀರು ಈ ಕುಂಟೆಯಲ್ಲಿ ಕುಡಿಸಿದ್ಯೋ?[4] ಕೆರೆಯಲ್ಲಿ ಕುಡಿಸಿದ್ಯೋ?

ಭ. ಈ ಕುಂಟೇ ನೀರೇ ಕುಡಿಸಿದೆನು.

ಧೊ. ಕುಂಟೇ ನೀರು ಬದಿ ನೀರು; ಆ ನೀರು ಯಾಕೆ ಕುಡಿಸಿದೆ? ಕೆರೇ ನೀರು ಕುಡಿಸ ಬೇಕಾಗಿತ್ತು.

## DIALOGUE IV.

### *With a Bandy man.*

G. Bandy man, bring the cart. Have the bullocks had water?

B. I have watered them.

G. Did you water them at this pond, or at the tank?

B. I watered them at this pond.

G. The pond water is muddy; why did you make them drink that water? You should have given them tank water.

3. For ಕುಡಿಯಿತೋ; sing. verb. with pl. noun.
4. For ಕುಡಿಸಿದಿಯೋ.

ಭ. ಇಲ್ಲನ್ವೈಯ್ಯಾ,[5] ಕುಂಟೇ ನೀರು ಚನ್ನಾಗಿ ಇದೆ; ಹೂಳೆಲ್ಲಾ ಎತ್ತಿ ಹಾಕಿಸಿದರು; ಹೊಸ ನೀರು ಊರಿ ಇದೆ; ನೀರು ತಿಳಿಯಾಗಿ ಚನ್ನಾಗಿ ಇದೆ.

ಧೊ. ಹಾಗೋ? ಆದರೆ ಸರಿ; ಭಂಡಿಗೆ ಎತ್ತುಗಳು ಕಟ್ಟು; ಕೋಚಿಮಾನಗೆ[6] ಹೇಳು—ಕುದುರೇ ಭಂಡಿಯೂ ಕಟ್ಟಿ, ತೆಗೆದು ಕೊಂಡು ಬರಲಿ.

ಭ. ಅಯ್ಯಾ, ಕೋಚಿಮಾರ್ನ್, ಕುದುರೆ ಕಟ್ಟಿ, ಭಂಡಿ ತೆಕ್ಕೊಂಡು ಬಾ.

ಕೋ. ಬಂದೆನು.

ಧೊ. ಭಂಡಿಯುವನೇ, ಪೆಟ್ಟಿಗೆಯನ್ನು ಚನ್ನಾಗಿ ಧೂಳು ಒರಸಿ, ಗವಸಣಿಗೆ[7] ಹಾಕು; ಆ ಭಂಡಿಯಲ್ಲಿ ಇಡತಕ್ಕ ಸಾಮಾನು ಯಾವತ್ತು ಸೇವಕರ ಕೈಲಿ[8] ತರಿಸಿ,

B. No, Sir; the pond water is good. They have had all the sediment taken out; fresh water has sprung up. The water is clear and good.

G. Is it so? then that's right. Put the bullocks in the cart, and tell the coachman that he may put the horse in the carriage and bring it.

B. Ho! Sir, Coachman, yoke the horse and bring the carriage.

C. I have brought it.

G. Bandyman, dust the box well, and put on the cover. Get the servants to bring all the lug-

5. ಇಲ್ಲ, ಅಯ್ಯಾ. 6. Eng: Coachman.
7. For ಗೌಸಣಿಗೆ. The spelling of many words varies thus.
8. For ಕೈಯಲ್ಲಿ.

ಭಂಡಿಯಲ್ಲಿ ಇರಿಸಿ, ಭದ್ರ ಪಡಿಸು; ಸಾಮಾನು ಇಳಿಸಿದಾಗ, ಆಚೆ ಕೊಠಡಿಯಲ್ಲಿ ದೊಡ್ಡ ಪೆಟ್ಟಿಗೆಯೊಳಗೆ ಇಡ ತಕ್ಕ ಸಾಮಾನು ಇಡಲಿ; ನಿಂತ ಸಾಮಾನು ಕೆಲವು ಗೋಡೇ ವಾರೆಯಲ್ಲಿಯೂ, ಚಿಕ್ಕ ಪೆಟ್ಟಿಗೆಗಳಲ್ಲಿಯೂ, ಇಡಲಿ, ಎಂದು ಹೇಳಿ, ಹೊರಟು, ಮಾರ್ಗದಲ್ಲಿ ಹೋಗುತ್ತಾ ಇರುವಾಗ, ಒಬ್ಬ ರೈತನು ಬಂದು, ಸಲಾಂ ಮಾಡಿದನು. ಆ ರೈತನನ್ನು ಕಂಡು,

gage that is to be put into the cart, put it into the cart, and make it secure. When you take out the luggage, put by all the luggage that is to go into the large box in the far room. Of the remaining luggage put some against the wall, and some in small boxes.

Having said thus, he set out, and as he went along the road, a Ryot came up and made *Salaam*. Seeing whom, (the gentleman addressed him,)

---

ಐದನೇ ಸಂಭಾಷಣೆ.

ರೈತನ ಸಂಗಡ.

ಧೊ. ನೀನು ಯಾವ ಊರಯ್ಯಾ, ಗೌಡಾ?

## DIALOGUE V.

### *With a Ryot.*

G. Of what town are you, *Gowda?*

ರೈ. ಸಾಮಿ, ನಾನು ಇಗೋ, ಈ ಹಳ್ಳಿ.

ಧೊ. ಆ ಹಳ್ಳಿಯಲ್ಲಿ ನೀನು ಒಕ್ಕಲುತನಾ ಮಾಡುತ್ತೀಯೋ? ಗೌಡನೋ?

ರೈ. ನಾನು ಮೊದಲಿಗೆ ಕೂಲಿ ಮಾಡಿ ಕೊಂಡು ಇದ್ದೆನು. ಈಗ ನಾಲ್ಕೈದು ವರುಷದಿಂದ ಒಕ್ಕಲತನಾ ಮಾಡುತ್ತೇನೆ.

ಧೊ. ಆದರೆ ನೀನು ಆರಂಬ ಮಾಡಿ ಇದ್ಧೀಯೋ? ತೋಟ ಮಾಡಿ ಇದ್ಧೀಯೋ?

ರೈ. ರವೆಷ್ಟು ಹೊಲ, ಗದ್ದೆ, ಆರಂಬವೂ ಮಾಡಿ ಇದ್ಧೇನೆ; ತೋಟವೂ ಮಾಡಿ ಇದ್ಧೇನೆ, ಸಾಮಿ.

ಧೊ. ಒಳ್ಳೇದು, ಹೊಲಾ ಎಷ್ಟು ಮಾಡಿದ್ಧೀ? ತೋಟ ಎಷ್ಟು ಮಾಡಿದ್ಧೀ? ಗದ್ದೆ ಎಷ್ಟು ಮಾಡಿದ್ಧೀ?

R. See, Sir, I am from this village.

G. Are you a farmer in that village, or the *Gowda?*

R. At first I was a day labourer, but now for four or five years I have cultivated

G. Well then, do you cultivate *(fields)* or keep a garden?

R. I cultivate a little of both dry and wet land, and keep a garden too, Sir.

G. Very good. How much dry land do you cultivate? How much garden? and how much wet land?

ರೈ. ಅಯ್ಯಾ, ಹೊಲ ಕಂದಾಯಕ್ಕೆ ಮಾಡಿ ಇದ್ದೇನೆ; ಹತ್ತು ವರಹಾ ಕಂದಾಯಾ ಕೊಡುತ್ತೇನೆ. ಗದ್ದೇ, ಎರಡು ಖಂಡುಗ ಗದ್ದೆ[9] ವಾರಕ್ಕೆ ಉಳುತ್ತೇನೆ. ತೋಟಗಳು, ಒಂದು ತೋಟ ವಾರವಾಗಿ ಮಾಡಿದ್ದೇನೆ; ಒಂದು ತೋಟಕ್ಕೆ ಕಬ್ಬು ಹಾಕಿ, ಮುಕ್ಕುಪ್ಪೆ ಕವುಲು ಮೇರಿಗೆ ಅರಮನೆಗೆ ಮೂರಲ್ಲಿ ಒಂದು ಪಾಲು ಕೊಟ್ಟು, ಎರಡು ಪಾಲು ನಾನು ತೆಗೆದು ಕೊಳ್ಳುತ್ತೇನೆ.

ಧೊ. ಆ ಹಾ! ಆ ಹೊಲ ಎಷ್ಟು ಬೀಜ ಬಿತ್ತನೆ ಬೀಳುತ್ತೆ?

ರೈ. ಒಂದು ಖಂಡುಗ ರಾಗಿ ಬಿತ್ತನೆ ಬೀಳುತ್ತೆ, ಸ್ವಾಮಿ.

ಧೊ. ಆದರೆ ಒಳ್ಳೇ ಹೊಲವೋ?

ರೈ. ಏನು ಒಳ್ಳೆ ಹೊಲವೇಳಿ? ಇದ್ದ ಮಟ್ಟಿಗೆ ಇದೆ.

R. Sir, I have the dry land on rent; I pay ten pagodas rent. As for the wet land, I plough two *khandugas* of wet land on *wára*. The gardens, I have one garden on *wára*, in the other I plant sugarcane, and according to *muk kup-pè* agreement, give one third (of the produce) to Government, and take two thirds myself.

G. Aha! How much seed does the field take?

R. It takes a *khanduga* of rági, Sir.

G. Well, but is it a good field?

R. What can one say of its being a good field? It is as it is.

9. *i. e.* as much land as requires a *khanduga* of seed.

ಧೊ. ಆದರೆ ವರುಷಕ್ಕೆ ಹತ್ತು ಖಂಡುಗ ರಾಗಿ ಬೆಳೆಯುತ್ತೀಯೋ?

ರೈ. ಚನ್ನಾಯಿತು, ಸಾಮಿ. ಹತ್ತು ಖಂಡುಗ ರಾಗಿ ಬೆಳದರೆ, ಅರಮನೇ ಕಂದಾಯಕ್ಕೇ ಸಾಲದು; ವರಸವೂ[1] ಸಾವೂ ಮಕ್ಕಳೂ ಮರೀ[2] ಹ್ಯಾಗೆ ಬದಿಕೇವು, ಸಾಮೀ?

ಧೊ. ಆದರೆ ಇನ್ನೆಷ್ಟು[3] ಖಂಡುಗ ಬೆಳೆ ಮಾಡುತ್ತೀ?

ರೈ. ಐವತ್ತು ಅರವತ್ತು ಖಂಡುಗ ದವಸಾ ಬೆಳೆಯುತ್ತೆ, ಸಾಮೀ.

ಧೊ. ಶಾಬಾಸು! ನಮಗೆ ಸಂತೋಷ. ಗದ್ದೆಯಲ್ಲಿ ನೆಲ್ಲೆಷ್ಟು ಖಂಡುಗ ಬೆಳೆಯುತ್ತೀ?

G. Well, do you grow ten *khandugas* of *rági* a year?

R. That's good, Sir. If I grow ten *khandugas* of *rági*, it is not enough for the Government rent. And how are we, bairns and all, to live the whole year, Sir?

G. Then how many *khandugas* more do you grow?

R. It produces fifty or sixty *khandugas* of grain, Sir.

G. Well done! I'm glad (to hear it.) How many *khandugas* of paddy do you grow in the wet land?

1. ವರುಷವೂ for ವರುಷಕ್ಕೆ.

2. ಮರಿ the young of an animal, but used by ryots, &c. as a colloquial expletive with ಮಕ್ಕಳು.

3. ಇನ್ನು ಎಷ್ಟು.

ರೈ. ಗದ್ದೆಯಲ್ಲಿಯೂ ಚನ್ನಾಗಿ ಬೆಳದರೆ, ನಲವ
ತ್ತೈವತ್ತು ಖಂಡುಗ ನೆಲ್ಲು ಆಗುತ್ತೆ; ನನಿಗೂ ವಾರಕ್ಕೆ
ಇಪ್ಪತ್ತು ಖಂಡುಗ ದವಸಾ ಬರುತ್ತೆ.

ಧೊ. ತೋಟದ ವಿದ್ಯಮಾನವೇನು ?

ರೈ. ವಾರದ ತೋಟದಲ್ಲಿ ತೆಂಗು, ಅಡಿಕೆ, ಇದು ಹೊ
ತರ್ಗ, ಚಿಲ್ಲರೇ ಹಣ್ಣು ಹಂಪಲು,[4] ಜೋಳ, ಕಡ್ಲೆ, ಮುಂ
ತಾದ್ದು ಬೆಳೆ ಆದದರಲ್ಲಿ ಅರಮನೆಗೆ ಸರಿಯಾಗಿ ಅರ್ಧ
ಹೋಗುತ್ತೆ; ನಿಂತ ಅರವಾಶಿ ನನ್ನ ಮೇಣಿ ಪಾಲಿಗೆ[5] ಬ
ರುತ್ತೆ. ಕಂದಾಯದ ಹಣ, ತೋಟದಲ್ಲಿ ಆದ ಪೈರು
ಮಾರಿ, ಕಟ್ಟ ಬೇಕು. ಹೊಲ, ಗದ್ದೆಯಲ್ಲಿ ಬೆಳೆದ ದವ
ಸದಿಂದ ಹೊಟ್ಟೇ ಕಾಲಕ್ಷೇಪ[6] ಆಗ ಬೇಕು. ಕಬ್ಬಿನ

R. If the wet crop be a good one, it produces forty or fifty *khandugas* of paddy; twenty *khandugas* come to me for my share.

G. What do you do with the garden? (*lit.* what are the circumstances (or state) of the garden?)

R. Exactly half of the produce of the *wàra* Garden — cocoanuts, areka nuts, and besides these, small things, such as fruits, millet, Bengal gram, &c. goes to government; the remaining half comes to my share. The rent in money must be paid by selling the produce of the (rented) garden. We must live on the produce of the dry and wet

4. a pleonasm, without signification. Such words are much used, by the common people especially, and in many instances answers to the English "and all that," "etcetera," and the like.

5. *lit.* to my plough's share.

6. for ಕಾಲಕ್ಷೇಪ.

ತೋಟದಲ್ಲಿ ಎಲ್ಯಾದರೂ ನಾಲ್ಕು ವರಹಾ ಬಂದರೆ, ಎತ್ತು ಮುಂತಾದವುಗಳು ಕೊಂಡು, ಆರಂಬದ ಕೆಲಸಾ ಸರಿಯಾಗಿ ಮಾಡ ಬೇಕು. ಈ ಮೇರಿಗೆ ಆ ದವಸ ಬೆಳೆಯದೆ ಹೋದರೆ, ಬಹಳ ಕಷ್ಟ ಪಟ್ಟು, ಸಾಲ ಸೋಲಗಳು[7] ಬಹಳವಾಗಿ ಮಾಡಿ, ಆರಂಬ ಬಿಡದೆ ಮಾಡುತ್ತಾ ಇದ್ದರೆ, ದೇವರ ದಯ ಚನ್ನಾಗಿ ಇದ್ದರೆ, ಬೆಳೆ ಚನ್ನಾಗಿ ಬೆಳೆಯುತ್ತೆ; ಬೆಳೆ ಚನ್ನಾಗಿ ಬೆಳೆದ ವರುಷವೇ, ಹಿಂದಿನ ಸಾಲಗಳ ಹರಿಸಿ, ಸಾಲಗಾರರ ಮಕ್ಕಳಾಗದೆ,[8] ನಮ್ಮ ತಾಯಿ ತಂದೆಗಳ ಮಕ್ಕಳು ನಾವಾಗಿ,[9] ಜೀವನಾ ಮಾಡುತ್ತೇವೆ, ಸಾಮಿ. ಒಕ್ಕಲಿಗರ ಕೆಲಸ ಏನು ಕೆಲಸ? ನಿಮ್ಮಂತಾ ಸತ್ಯವಂತ ಧೊರೆಗಳು ಬಂದು, ಶೀ

land. If by any means I get four pagodas from the sugarcane garden, I must buy bullocks and other things, so as to cultivate properly. If the grain does not produce in this way, I must work very hard, get deeply in debt, and if I keep at work without ceasing, and if God's favour be good (towards me,) the crop grows well. In the year in which the crop grows well, we clear off past debts, and, no longer the creditors' children, we become our mother and fathers' children, and make a living, Sir. What business is ryots' busisiness! If such upright gentlemen as you come,

7. ಸೋಲ is a pleonasm added to ಸಾಲ.
8. ಮಕ್ಕಳು ಆಗದೆ. 9. ನಾವು ಆಗಿ.

ಮೆ ಇಸಾರಣೆ[1] ಚನ್ನಾಗಿ ಮಾಡಿದರೆ, ಒಕ್ಕಲು[2] ಹ್ಯಾ
ಗಾದರೂ ಮುಂದಕ್ಕೆ ಬಂದಾರು. ಇಸಾರಣೆ ಇಲ್ಲದ ಧೊ
ರೆತನವಾದರೆ, ದಂಡ ದೋಸಗಳು[3] ತೆತ್ತು, ಒಕ್ಕಲಿಗನು
ನಾದಾರೀ ಕೆಳಗೆ ಬರುತ್ತಾನೆ. ನೀವು ದೊರೆಗಳು, ಎ
ಲ್ಲಾ ಕಂಡೋರು.[4] ನಾವು ಒಕ್ಕಲಿಗರು; ಹುರುಳಿಗೆ
ಮೂರು ಸಾಲು ಹೊಡೆಯುವರು.[5] ನಾವೇನು ಬಲ್ಲೆವು,
ಸಾಮೀ? ಅಪ್ಪಣೆ ಆದರೆ, ದನಗಳು ತೋಟಕ್ಕೆ ಹೋ
ಗುತ್ತವೆ; ಪಯಿರುಗಾರ್ರು ಜಗಳ ಮಾಡುತ್ತಾರೆ, ಅರ
ಮನಿಗೆ ಜುಲುಮಾನೆ ಕೊಡ ಬೇಕಾಗುತ್ತೆ, ಸಾಮೀ; ಸ
ಲಾಂ ಬರುತ್ತೆ ಎಂದು ಹೇಳಿ, ಹೊರಟು ಹೋದನು.

and look well to the affairs of the country, the ryots will prosper somehow or another. But if we have a government that does not look after things, the ryot has to pay fines and extortions, and comes to (under) poverty. You are gentlemen, you know every thing. We are ryots. We (just know how to) plough (a field) three times over for gram. What do we know, Sir? Give me leave to go, please. The cattle are going to the gardens. The owners will quarrel with me, and I shall have to pay a fine to Government, Sir. Salaam!

Saying which, he went away.

1. for ವಿಚಾರಣೆ. 2. used as a noun of multitude.
3. a pleonasm, yet properly rendered with ದಂಡ as in the translation.
4. ಕಂಡವರು. 5. ಹೊಡೆಯುವವರು.

## ಆರನೇ ಸಂಭಾಷಣೆ.

### ಕುರುಬನ ಸಂಗಡ.

ಮತ್ತು ಆ ಮಾರ್ಗದಲ್ಲಿ ಒಬ್ಬ ಕುರುಬ ಬಂದನು. ಅವನು ತಲೆಗೆ ಒಂದು ತಲೆಗುಡ್ಡೆ[6] ಸುತ್ತಿ ಕೊಂಡಿದ್ದನು; ನೆರೆ ಗಂಬಳಿ[7] ಕೊಪ್ಪೆ ಹಾಕಿ ಕೊಂಡು ಇದ್ದನು; ನಡುವಿಗೆ ಆರು ಮೊಳದ ದುಪ್ಪಟೀ ತುಂಡು ಸುತ್ತಿ ಕೊಂಡು ಇದ್ದನು; ಕಚ್ಚೀ ಅರಿವಿಯೂ ಕಟ್ಟಿ ಕೊಂಡು ಇದ್ದನು. ಹಿಂದೆ ಕುರಿ ಹಿಂಡು ಬರುತ್ತಾ ಇತ್ತು. ಅದರ ಹಿಂದೆ, ಮುಂದೆ, ಎರಡು ಕಡೆ ಪಕ್ಕೆಗಳಲ್ಲಿ,[8] ನಾಯಿಗಳು, ಳೊಳ್ಳೊಳ್ಳೆಂದು ಬಗುಳುತ್ತಾ, ಬರುತ್ತಾ ಇದ್ದವು. ಇವನು ಒಂದು ಕೋಲು ಎಡ ಕೈಯಲ್ಲಿ ಹಿಡಿ ಕೊಂಡು,

## DIALOGUE VI.

### *With a Shepherd.*

Afterwards a Shepherd came that way. He had a handkerchief round his head, a grey *kambly* tied like a hood, a six-cubit piece of cloth round his loins, and a *kachchè arivi* on. Behind him came a flock of sheep. Behind it, (the flock,) in front, and on both sides, dogs came along, barking "bow-wow-wow." He had a stick in his left hand, which

6. a square head-cloth about the size of a handkerchief.
7. ಕಂಬಳಿ. In union with a preceding word, ಕ often becomes ಗ.
8. ಪಕ್ಕೆ is added because ಕಡೆ applies to either side, front, or behind.

ಆ ಕೋಲನ್ನು ಎಡದ ಹೆಗಲ ಮೇಲೆ ಇಟ್ಟು ಕೊಂಡು, ಬಲಗೈಲಿ ಒಂದು ಉದ್ದವಾದ ಬರಲು ಹಿಡಿ ಕೊಂಡು, ಕಂಕುಳಲ್ಲಿ ಒಂದು ಚೀಲವನ್ನು ಚಿಕ್ಕದಾಗಿ ಹೆಣದಿರುವ ಮಂಜೇ ನಾರಿನ ಕಲ್ಲಿಯಲ್ಲಿ ಇಟ್ಟು ಕೊಂಡು, ಆ ಕಲ್ಲಿಯನ್ನು ಹೆಗಲಿಗೆ ಎಡಗಡೆಗೆ ತಗಲಿಸಿ ಕೊಂಡು, ನಾಲ್ಕು ಕಡೆಯೂ ಅಡರಿ ಹೋಗುವ ಕುರಿಗಳನ್ನು, ಹುಸ್ಸಿ, ಹುಸ್ಸಿ, ಕಿಯ್ಯೋ, ಎಂಬದಾಗಿ ಕೂಗುತ್ತಾ, ಎಲ್ಲಾ ಕುರಿಗಳನ್ನು ಕೂಡಿಸಿ, ಹೊಡೆದು ಕೊಂಡು, ಕೆಲವು ವೇಳೆ ಮುಂದುಗಡೆಯಾಗಿಯೂ, ಕೆಲವು ಹೊತ್ತು ಹಿಂದಾಗಿಯೂ ಬರುತ್ತಾ, ಬರುತ್ತಾ, ಹಿಂದೆ ಬರುವ ಹೊತ್ತಿನಲ್ಲಿ ಈ ಬರುವ ದೊಡ್ಡ ಮನುಷ್ಯನನ್ನೂ ಕುದುರೇ ಭಂಡಿಯನ್ನೂ ಕಂಡು, ಇದ್ಯಾರೋ?[9] ದೊರೆಗೋಳು[1] ಬರುತ್ತಾ

he laid upon his left shoulder; in the right hand he had a long switch, and under the armpit a bag in a small net of hemp-cord network, the net hung from the shoulder on the left side. Calling "hus-si, hus-si, kiy-yo" to the sheep that were straggling on (all) four sides, he brought them all together, and drove them along, going sometimes before, and sometimes behind. Whilst he was going behind, he saw this great man, who was coming along, and the horse carriage, and said to himself, "Who in the world is this? A gentleman

9. ಇದು ಯಾರು, with interrogative ಓ.
1. ದೊರೆಗಳು the pl. used for sing. honorifically.

ರಪ್ಪಾ;[2] ನಾನು ಅವರ ಎದುರಿಗೆ ಯಾಕೆ ನಿಲ್ಲ ಬೇಕು? ರೋಟು[3] ಮರೆಯಾಗಿದ್ದರೆ, ಒಳ್ಳೇದೆಂದು, ತನ್ನೊಳಗೆ ತಾನೇ ಮಾತನಾಡಿ ಕೊಂಡು, ಒಂದು ಕಳ್ಳೀ ಬೇಲೀ[4] ಮರೆಗೆ ಹೋಗುತ್ತಾ, ಕುರಿಗಳು ಚದರಿ ಹೋದೀತೆಂದು, ಆಗಾಗ್ಯೆ ಹಣಕಿ, ಹಣಕಿ, ನೋಡುತ್ತಾ, ಹುಸ್ಸಿ, ಹುಸ್ಸಿ, ಎಂದು ಅದಲಿಸುತ್ತಾ ಇರುವ ಸಮಯದಲ್ಲಿ, ಈ ದೊಡ್ಡ ಮನುಷ್ಯನು ಆ ಮನುಷ್ಯನನ್ನು ಕಂಡು, ಅಯ್ಯಾ, ಗೌಡಾ, ಇಲ್ಲಿ ಬಾ, ಎಂದು ಕೂಗಲು; ಆ ಮಾತು ಕೇಳಿ, ಆ ಕುರುಬನು—ಇದೇನು ಪೀಕುಲಾಟ ಬಂತು? ನನ್ನ ಬಾ ಅಂತಾ,[5] ಕೂಗುತ್ತಾನೆ. ಇವನ ಹತ್ತರಕ್ಕೆ ಹೋದರೆ, ಏನು ಪೀಕುಲಾಟವೋ? ಹೋಗದೆ ಇದ್ದರೆ, ಏನು ಪೀಕುಲಾಟವೋ? ಆದರೆ ಪರಂಗೀ ಧೊರೆಗಳು ಯಾರ

coming, as I'm alive! Why should I stay in his way? I'd better hide myself a bit." So, getting behind a milk-hedge, and fearing lest the sheep should stray, as he kept peeping and looking out every now and then, and huffing them with his cry "hus-si, hus-si," this gentleman saw him, and called out, "Ho Sir, *Gowda*, come here." Hearing which, the shepherd said to himself, "what trouble is come now? He's calling me to come to him. If I go to him, (I cannot tell) what trouble (may happen.) And if I don't go, I cannot tell what trouble. But they say that English gentlemen never

2. ಬರುತ್ತಾರೆ ಅಪ್ಪಾ.
3. ರವೆಷ್ಟು.
4. gen. case.
5. ನನ್ನನ್ನು ಬಾ ಎಂದು.

ನೇನು[6] ಮಾಡೋದಿಲ್ಲವಂತೆ[7]; ನಾನು ಸುಂಮನೇ, ಕೇಳಿದರೂ, ಕೇಳದ ಹಾಗೆ ಇರುತ್ತೇನೆ; ತಿರಿಗಿ ಕೂಗಿದರೆ, ಹೋಗೋನಾ[8] ಎಂದು, ಬಹಳ ಅನುಮಾನ ಪಟ್ಟು ಕೊಂಡು ಇರುವ ಕುರುಬನ ರೀತಿಯನ್ನು ಕಂಡು, ಇವನು ಭಯದಿಂದ ಬಾರದೆ ಇದ್ದಾನೆಂದು, ಮನಸ್ಸಿನಲ್ಲಿ ತಿಳಿದು, ಆ ದೊಡ್ಡ ಮನುಷ್ಯನು ಪುನಃ—ಅಯ್ಯಾ, ಗೌಡಾ, ಗೌಡಾ, ಬಾ; ಅಂಜಿ ಕೋ ಬ್ಯಾಡ;[9] ನಾವು ನಿನ್ನ[1] ಏನೂ ಮಾಡುವದಿಲ್ಲ; ನಮಗೇನು ಕೊಡ ಬೇಡ; ಇಲ್ಲಿ ಬಾ; ಬಂದು, ಮಾತನಾಡು, ಎಂಬದಾಗಿ ಕೂಗಲು; ಇನ್ನು ಮೇಲೆ ಹತ್ತರಕ್ಕೆ ಹೋಗದೆ ಇದ್ದರೆ, ಅವನಿಗೆ ಕೋಪಾ ಬಂದು, ಏನು ಮಾಡುವನೋ, ತಿಳಿಯ ಕೂಡದೆಂದು, ಕುರಿಗಳ ಹೊಡೆಯುವ ಹಾಗೆ ರವೆಷ್ಟು ಹೊತ್ತು

do any thing to any body. Though I hear him, I'll just keep quiet as though I didn't hear, and if he calls again, I'll go." The gentleman, seeing the shepherd's great perplexity, and knowing that it was through fear that he did not come, again called out, "Ho Sir, *Gowda, Gowda*, come (here;) don't be afraid; I won't do any thing to you; you needn't give me any thing; come here, come and talk." On which the shepherd thinking within himself, "If I don't go to him after this, he may get angry, and I can't tell what he'll do," delayed a little as

6. ಯರನ್ನು (for ಯಾರಿಗೆ) ಏನು. 7. ಮಾಡುವದಿಲ್ಲ ಲಂತೆ.
8. ಹೋಗೋಣ imp. mood. 1st per. 9. ಅಂಜಿ ಕೊಳ್ಳ ಬೇಡ. 1. acc.

ಸಾವಕಾಶಾ ಮಾಡಲು, ತಿರಿಗಿ—ಬಾ ಎಂದು ಕೂಗಲು, ಇದು ಬಿಟ್ಟದ್ದಲ್ಲ, ಹೋಗೇ[2] ತೀರ ಬೇಕು ಎಂದು, ಸಮೀಪಕ್ಕೆ ಬಂದು, ಹೆಗಲಿನ ಮೇಲೆ ಕೋಲು ಅಡ್ಡವಾಗಿ ಇಟ್ಟು ಕೊಂಡು, ಎರಡು ಕಡೆ ಕೋಲಿನ ಕೊನೇಲಿ[3] ಎರಡು ಕೈಗಳು ಇಟ್ಟು ಕೊಂಡು, ಬಲಗೈಲಿದ್ದ[4] ಚುಳಿಕಿ ಮಿಲಾಡಿಸಿ ಕೊಂಡು, ಬೆನ್ನು ಬೊಗ್ಗಿಸಿ ಕೊಂಡು, ತಲೆ ಅದರಿಸಿ ಕೊಂಡು, ಕಾಲಿನಲ್ಲಿ ತಪ್ಪು ಹೆಜ್ಜೆಗಳು ಹಾಕುತ್ತಾ, ನಿಂತನು. ಈ ಮೋರಿಗೆ ಬಂದು ನಿಂತ ಕುರುಬನನ್ನು ನೋಡಿ, ಈ ದೊಡ್ಡ ಮನುಷ್ಯನು ಮಾತಾಡಿಸುವದೇನಂದರೆ—

ಧೊ. ಅಯ್ಯಾ, ಗೌಡಾ, ನೀನ್ಯಾರು?[5]

though driving his sheep; when (the gentleman) again called, "come." "There's no getting out of it, I must go," said the shepherd to himself, and came near, and stood with the stick across his shoulders, holding the ends of the stick on both sides with his hands, swinging the switch that he held in his right hand, stooping, moving his head from side to side, and shuffling his feet. Seeing the shepherd, who thus came and stood, the gentleman thus entered into conversation (with him.)

G. Well Sir, *Gowda*, who are you?

2. ಹೋಗಿ with em. ಏ. 3. ಕೊನೆಯಲ್ಲಿ. 4. ಬಲ ಕೈಯಲ್ಲಿ ಇದ್ದ.
5. ನೀನು ಯಾರು? It is scarcely possible to give, in English, the play upon words in the following sentences.

ಕು. ನಾನು ಕುರುಬ, ದ್ಯಾವರು.

ಧೊ. ನೀನು ಕುರುಬ ದ್ಯಾವರೋ? ನಿನ್ನ ಹೆಸರೇನು?

ಕು. ನನ್ನ ಹೆಸರು ಬಿಟ್ಟರೆ ಶಿಕ್ಕನು, ಸೋಮಿ.

ಧೊ. ಶಾಬಾಸು, ನಿನ್ನ ಹೆಸರು ಬಿಟ್ಟರೆ, ಶಿಕ್ಕಿಯೋ? ಆಗಲಿ. ನಿನ್ನ ದೇವರ ಹೆಸರೇನು?

ಕು. ನಮ್ಮ ದೇವರು ಬೀರಪ್ಪನು, ಬುದ್ದಿ.[6]

ಧೊ. ಎಲ, ಎಲ, ಬೀರಪ್ಪನ ಬುದ್ಧಿಯೇ? ಅವನು ಹ್ಯಾಗಿರುವನು?

ಕು. ಚನ್ನಾಯಿತು, ಸೋಮಿ; ದೇವರ್ಹ್ಯಾಗಿದ್ದೀತು? ಅದೂ ಇದೇ ಗುಡಿಗಳಲ್ಲಿ.[7]

S. I am a shepherd, (my) Lord.

G. Lord Shepherd are you? What is your name?

S. My name (is) Bit-tarè Shik-kanu, Sir. (The words mean, "if you let him go, you won't catch him again.")

G. Bravo! If one let go your name, he won't catch it again, eh? Well! what is your god's name?

S. Sir, Bír-ap-pa is our god.

G. Ha, ha! Sir Bír-appa, eh? What is he like?

S. That's good, Sir. What should God be like? It is in this temple.

6. for ಬುದ್ಧಿ wisdom, a title used in addressing superiors. Sir.
7. pl. for sing.

ಧೊ. ಅದು ಗುಡಿಗಳಲ್ಲೇನೋ ಇರುವದು? ನಿಮ್ಮ ಮನೆಗಳಲ್ಲಿ ಇರುವದಿಲ್ಲವೋ?

ಕು. ಮನೆಗಳಲ್ಲಿ ಎಲ್ಯಾದರೂ ದ್ಯಾವರು ಇರುವದುಂಟೋ, ಸೋಮಿ?

ಧೊ. ಅದೇಕ್ಕೈಯಾ?[8] ಮನೆಗಳಲ್ಲಿ ದ್ಯಾವರು ಇರಬಾರದೇ? ಬಣಜಿಗರ ಎದೆಯ ಮೇಲೆ ದ್ಯಾವರು ಇರಬಹುದಂತೆ. ನಿಮ್ಮ ಮನೆಗಳಲ್ಲಿ ಇರುವದಕ್ಕೆ ಏನು ಅಡ್ಡಿ?

ಕು. ಅಂದರೆ, ಸೋಮಿ?[9] ಅವರು ಶಿವಾಚಾರದವರು; ಯಾವಾಗಲೂ ದ್ಯಾವರ[1] ಕೊರಳಿಗೆ ಕಟ್ಟಿ ಕೊಂಡೇ ಇದ್ದಾರೆ. ಇಟ್ಟು[2] ತಿಂದರೆ, ಅದಕ್ಕೂ ತಿನ್ನಿಸುತ್ತಾರೆ; ಅಂ

G. Is it in the temple only? Is it never in your houses?

S. Now Sir, did you ever hear of God's being in houses?

G. Why not, Sir? May not God be in houses? They say that God may be on the breasts of the *Banajigars*. What should hinder his being in your houses?

S. Yes, Sir, but they are *Shivites;* they always have God tied to their necks. People say that when they eat their *rāgi* pudding, they feed the god too with it; and when they drink their gruel,

8. Sir, why (do you ask) that, ಅದು ಯಾಕೆ ಅಯ್ಯಾ?
9. ಸ್ವಾಮಿ. 1. for ದೇವರನ್ನು. 2. ಹಿಟ್ಟು.

ಬಲಿ ಕುಡಿದರೆ, ಅದಕ್ಕೊ ತೋರಿಸಿ, ಕುಡಿಯುತ್ತಾರಂ
ತೆ. ಅವರಿಗೆಲ್ಲಾ ಸರಿಯೋ. ನಮ್ಮ ದ್ಯಾವರಿಗೆ ಹಾಗೆ ಸ
ರಿ ಬೀಳುವದಿಲ್ಲ. ನಮ್ಮ ದ್ಯಾವರಿಗೆ ವರಸಕ್ಕೋ,[3] ಎರ
ಡು ವರಸಕ್ಕೋ, ತಪ್ಪಿದರೆ, ಮೂರು ವರಸಕ್ಕೋ
ಆಗಲಿ, ಒಂದು ಸಾರಿ ಪೂಜೆ ಮಾಡಿಸುತ್ತೇವೆ. ಆ ಪೂ
ಜೆ ಮಾಡುವಾಗ, ಅಪಾರ ಪರಿಶೆ ಕೂಡುತ್ತೆ; ಶಾನೆ ಜನ
ಗಳು ಬರುತಾರೆ;[4] ಮೇಳಾ, ತಾಳಾ, ತಪ್ಪಟೆಗಳು, ನ
ಗಾರಗಳು, ನಿಸಾನಿಗಳು,[5] ದಾಸೈಯಗಳು, ಜಂಗಮ
ಯ್ಯಗಳು, ಇದಲ್ಲದೆ ಪಕೀರರು, ತಿರಕೊಂಬೋರು,
ಜೋಗಿಗಳು, ಬೈರಾಗಿಗಳು, ಕಾಡುಸಿದ್ದರು, ಲಿಂಗದೀ
ರರು,[6] ಗೊರವೈಯಗಳು, ಹಾರೋರಾದರೆ[7] ಸರಿಯೋ

they shew it to the god, and then drink it. Every thing's right for them; but that won't do for our god. We worship our god once a year, or once in two years, or if we miss that, once in three years. When that worship is made, there is a great gathering; numbers of people come,—wind instruments, cymbals, tambourines, drums, flags, Vishnuite mendicants, *lingāit* priests, and *fakirs*, beggars, devotees, stoics, *Shivite* beggars with wooden bells, *lingāit* dancing mendicants, bear-skin-capped shepherd-priests,—and as for brahmans, they are without number; they abound

3. ವರುಷಕ್ಕೋ. 4. ಬರುತ್ತಾರೆ. 5. ನಿಶಾನಿಗಳು.
6. ಲಿಂಗಧೀರರು. 7. ಹಾರವರು ಆದರೆ.

ಸರಿ. ಎಲ್ಲಿ ನೋಡಿದರೂ, ಅವರದೇ ಪಬಲ.[8] ಇದಲ್ಲದೆ ಅಂಗಡಿಗಳು, ತೆಂಗಿನ ಕಾಯಿಗಳು, ಬಾಳೇ ಹಂಣಿನ ಗೊನೆಗಳು, ವೀಳೇದೆಲೆ ಪೆಂಡೆಗಳಾದರೆ, ಲೆಕ್ಕವೇ ಇಲ್ಲ. ಆಟಗಾರರು, ಪಾಟಗಾರರು, ದೊಂಬರ ಗಡೆಗಳು,[9] ದೊಂಬಿ ದಾಸರ ಗುಂಪು; ಇವರೆಲ್ಲಾ, ಶಾನೆ ಪರಶೆ ಕೂಡುತ್ತೆ, ದ್ಯಾವರು. ಆಗ ದ್ಯಾವರಿಗೆ ಪೂಜೆ, ಪುಷ್ಪ,[1] ಆರತಿಗಳು,[2] ಕಾಣಿಕೆಗಳು, ಕಪ್ಪಗಳು,[3] ಮುಡುಪುಗಳು,[4] ಮುದ್ರೆಗಳು,[5] ಕುರುಳು ಕೊಡೋರು,[6] ಬಾಯಿ ಬೀಗ

wherever you look. Besides these, shops, cocoanuts, plantain bunches, and bundles of betel leaves —innumerable. Mountebanks, ballad singers, tumblers, companies of stage players; all these, a great gathering, Sir. Then worshipping god, presenting flowers, lighted wave offerings, offerings of money, of ornaments, votive offerings, and consecrated cattle, persons who give their hair, mouth-

8. ಪ್ರಬಲ. The construction is, ಪ್ರಬಲತ್ವ prevalence, is theirs.

9. *lit.* tumblers' poles.

1. ಪುಷ್ಪ.

2. Buns or cakes of rice flour, milk, sugar, &c. with a lighted wick in a hole in the centre filled with liquid butter.

3. In sickness or distress, it is common to vow to present silver anklets, bracelets, &c. to an idol, on condition of recovery or deliverance.

4. Sums of money that have been previously set apart by vow to be presented to the idol at such a time.

5. Cattle are often dedicated to the idol, *sealed*, and formally presented at the festival.

6. One of the commonest vows is that of shaving the head and presenting the hair to an idol.

ದವರು,[7] ಸೂರುಗಾಯಿಗಳವರು,[8] ದೀಪಗಳು ಹೊರುವರು,[9] ಹಂಣುವ್ವುಗಳು[1] ತಂದು, ಒಪ್ಪಿಸೋರು,[2] ಶಾನೇ ಜನ ಕೂಡಿ, ನಮ್ಮ ಬೀರಪ್ಪನ ಪೂಜೆ ಮಾಡುತ್ತೇವೆ. ಅಂತಾ ದ್ಯಾವರನ[3] ಮನೇಗೆ[4] ಮಡಿಕ್ಕೊಂಡರೆ,[5] ಮನೆಗಳು ಉಳಿದಾವೇಸು,[9] ದ್ಯಾವರು? ಕೂಡದು, ಕೂಡದು.

ಧೊ. ಅದೇಕೆ[7] ಕೂಡದು? ಆ ದೇವರನ ಮನೆ ವೊಳಗೆ ಮಡಗಿದರೆ, ಏನು?

ಕು. ಮನ್ಯಾಗ[8] ಮಡಗ ಕೂಡದು, ದ್ಯಾವರು.

lockers, cocoanut scramblers, lamp-bearers, offerers of fruits and flowers,—many people come together, and we worship our *Bírappa.* If one keep such a god in the house, how can the houses stand, Sir? Impossible! Impossible.

G. Why impossible? What if you do keep the god in the house?

S. Cannot keep him in the house, Sir. What-

7. Persons vowing abstinence from solid food for a certain period, have a wire thrust through both cheeks, and locked at one end.

8. Persons who purchase an ox-load of cocoanuts, dedicate them to the idol, and throw them to the people, that those who are unable to purchase may have the means of offering one or more to the idol.

9. ಹೊರುವವರು; who carry lamps on their heads.

1. ಹಣ್ಣು ಹುವ್ವುಗಳು. 2. ಒಪ್ಪಿಸುವವರು.

3. ದೇವರನ್ನು. 4. ಮನೆಯೊಳಗೆ. 5. ಮಡಗಿ ಕೊಂಡರೆ.

6. *i. e.* the families would be ruined; it being impossible, (as afterwards explained,) to avoid provoking him by ceremonial defilement.

7. ಅದು ಯಾಕೆ? 8. ಮನೆಯೊಳಗೆ.

ನಾವೇಸಾದರೂ[9] ಕುರುಬರು. ದನಗಳು, ಕರುಗಳು, ಕುರಿ, ಮೇಕೆ, ಎಂಮೆ, ಕೋಣ, ಕತ್ತೆ, ಕಂದು, ಹೆಂಗಸರು, ಮಕ್ಕಳು, ಚಿಳ್ಳೆ, ಪಿಳ್ಳೆ, ಪಿಡಿತೆ—ಶೇನೆ[1] ಜೆಂದಿಗಾನೆ ಉಂಟಾದೋರು.[2] ಎಂಜಲು,[3] ಮಂಗಲ,[4] ನೆರಳು, ತರಳು ತಗಲಿದರೆ, ನಮ್ಮ ದ್ಯಾವರಿಗೆ ಸರಿ ಬೀಳದು.[5]

ಧೊ. ಆದರೆ ನಿಮ್ಮ ದ್ಯಾವರು ಇರುವ ಕಡೆ ಶ್ಯಾನೆ[6] ಚೊಕ್ಕಟವಾಗಿಧೆಯೋ?

ಕು. ಅವ್ರುದು,[7] ಸಾಮಿ. ದ್ಯಾವರು ಇರುವ ಕಡೆ ಚೊಕ್ಕಟಲ್ಲದೆ ಏನು? ಕಲ್ಲು ಗುಡಿ ವ್ರೊಳಗೆ ದ್ಯಾವರನ ನಿಲಿಸಿ ಇಧೆ. ಒಂದು ವರಸಕ್ಕ್ಯಾಗಲಿ, ಆರು ತಿಂಗಳ

ever we are, we are (only) shepherds. Cows, calves, sheep, goats, milch buffaloes, bull-buffaloes, asses, foals, wives, bairns, brats and babbies —we have multitudes of things. Leavings, unclean things, shadows, &c. if they touch him, it won't suit our god.

G. Then is the place where your god is very clean?

S. Yes, Sir. If God's place isn't clean, what is? God is set up in a stone temple. Once a year, or once in six months, if we open the door, we

9. ನಾವು ಎಷ್ಟು ಆದರೂ. 1. ಶಾನೆ. 2. ಉಂಟಾದವರು.
3. The leavings after a meal are considered unclean.
4. for ಅಮಂಗಲ.
5. The shadow of an unclean person or thing falling upon the god would defile him.
6. ಶಾನೆ. 7. ಹೌದು.

ಗಾಗಲಿ, ಹಾಕಿದ ಬಾಗಲು ತೆಗದರೆ, ತೆಗದೆವು; ಇಲ್ಲದಿದ್ದರೆ, ಇಲ್ಲವೇ ಇಲ್ಲ. ಅಲ್ಲಿ ಮನಸರ[8] ಸಂಚರಣೆ ಅಂತು ಪರಶೆ ಆಗುವಾಗ ಹೊರತು,[9] ಮಿಕ್ಕ್ಯಾದಾಗಿನಲ್ಲಿ[1] ಇಲ್ಲವೇ ಇಲ್ಲ. ಇಂತಾ ಗುಡಿ ಚೊಕ್ಕಟವಲ್ಲದೆ ಏನು, ಸಾಮಿ?

ಧೊ. ಆದರೆ ನಿತ್ಯಾ ಗುಡಿಸುವದೂ, ಸಾರಿಸುವದೂ, ನೀರು ಚಿಮಿಕಿಸುವದೂ ಏನು ಇಲ್ಲವೋ?

ಕು. ನಿತ್ಯಾ ಯಾರು ಸಾರಿಸುತ್ತಾರೇಳಿ? ಆರು ತಿಂಗಳಿಗೋ, ಮೂರು ತಿಂಗಳಿಗೋ, ವರಸಕೋ,[2] ಒಂದು ಸರತಿ ಆ ಪೂಜಾರಿಗಳು[3] ಬಾಗಲು ತೆಗದು, ಅಬ್ಬ,[4] ಉಂಣಿಮೆ[5] ಆದರೆ, ರೋಟು ಸ್ವಾರಿಸಿ, ಗುಡಿಸಿ, ಕೆಂಮಂಣು, ಸುದ್ದೇ[6] ಮಂಣು ಬಳದು,[7] ರಂಗೋಲೆಗಳು ಬರೆದು,

open it ; if we don't, we don't. Nobody goes there at all except at the feast ; at other times not at all. If a temple like this isn't clean, what is, Sir?

G. But don't you sweep, and smear, and sprinkle (the floor) with water every day?

S. Who is to smear it every day, eh? Once in six months, once in three months, or once a year, the priest opens the door, and if there be a feast or full moon, smears and sweeps a little, colours and whitewashes with red and white carth, streaks

8. ಮನುಷ್ಯರ.
9. ಹೊರ್ತು.
1. ಮಿಕ್ಕ ಆದಾಗಿನಲ್ಲಿ.
2. ವರುಷಕ್ಕೋ.
3. pl. honorific.
4. ಹಬ್ಬ.
5. ಹುಣ್ಣಿಮೆ
6. ಶುದ್ಧ.
7. ಬೋಳದು.

ಮಾವಿನೆಲೆ[8] ತಂದು, ತೋರಣಗಳು ಕಟ್ಟಿ, ಪೂಜೆ ಪುಷ್ಪ ಮಾಡಿದರೆ, ಉಂಟು; ಇಲ್ಲದಿದ್ದರೆ, ಇಲ್ಲವೇ ಇಲ್ಲ. ಇಂತಾ ದೇವರು, ಸಾಮೀ, ನಮ್ಮ ದ್ಯಾವರು.

ಧೊ. ಆಹಾ, ಶಾಬಾಸು! ಒಳ್ಳೇ ದೇವರೇ! ಈ ದೇವರಿಗೆ ಪರಷೆಯೊಳಗೆ ಮಾಡುವ ಪದ್ಧತಿ ಏನು?

ಕು. ಪರಶೆವಳಗೆ[9] ಮಾಡುವ ಪಬ್ಬತಿ[1] ಏನಂತಾ ಕೇಳುತ್ತೀರೋ? ಶಾನೆ ಶಾನೆ ಸತ್ಯ ಉಂಟು.

ಧೊ. ಅದೇನಯ್ಯಾ?[2] ರವೆಷ್ಟು ಹೇಳು, ಕೇಳೋಣ.

ಕು. ಏನು, ಸಾಮೀ, ಏಳೋದು?[3] ನಾವು ಉಚ್ಚು[4] ಕುರುಬರು; ನಮ್ಮ ಮಾತೆಲ್ಲಾ ನಿಮಗೆ ಸೊಟ್ಟೆಯಾಗಿ ಕಾಣುತ್ತೆ.

it, brings mango leaves and makes them into festoons (over the door,) and if we worship and bring flowers, we do; and if we don't, we don't. Such a god is our god, Sir.

G. Aha! Bravo! A very fine god indeed! What do you do to this god at the feast?

S. Do you ask what we do at the feast? It's a very glorious affair.

G. What is it, Sir? Tell us a bit, and let us hear.

S. What can I tell you, Sir? We are silly shepherds; all our language seems queer to you.

8. ಮಾವಿನ ಎಲೆ.
9. ಪರಿಷೆಯೊಳಗೆ.
1. ಪದ್ಧತಿ.
2. ಅದು ಏನು ಅಯ್ಯಾ.
3. ಹೇಳುವದು.
4. ಹುಚ್ಚು.

ಧೊ. ಆದರೆ ಆಗಲಿ, ಹೇಳಯ್ಯಾ, ಗೌಡಾ.

ಕು. ಆ ಪರಶೆ ಇನ್ನು ಎಂಟು ದಿನ ಇರುತಾಲೆ,[5] ಪೂಜಾರ್ಯೆಯುನು ತಲೆ ಬೋಳಿಸಿ ಕೊಂಡು, ನೀರಾಗ[6] ಮುಳಿಗಿ,[7] ದಿನಾ ಒಂದೊತ್ತು[8] ಮಾಡ ಬೇಕು. ಈ ಪಕಾರ[9] ಒಂದೊತ್ತುಗಳು ಮಾಡಿ, ಆ ಪರಶೇ ದಿನ ಗುಡೀಲಿ[1] ದೇವರ ಪೂಜೆ ಮಾಡಿ, ತೋತ್ರಿಸಿ,[2] ಅಡ್ಡ ಬಿದ್ದು, ನಮಗೆಲ್ಲರಿಗೂ ಒಳ್ಳೇದು ಮಾಡೆಂದು, ಬೇಡಿ ಕೊಂಡು, ಅಲ್ಲಿಂದಾ ಬಂದು, ಪಕಾರದಲ್ಲಿ[3] ಒಂದು ಗಳಡ ಗಂಬದಾಗೆ[4] ಒಂದು ಕಲ್ಲು ಕಂಬ ಇದೆ. ಆ ಕಂಬದತ್ತರ[5] ಬಂದು, ದ್ಯಾವರಿಗೆದುರಾಗಿ[6] ಮಂಡಿಗಾಲಾಕ್ಕೊಂಡು,[7]

G. Never mind, tell me, *Gowda*.

S. Eight days before the feast, the priest must get his head shaved, bathe himself in water, and take but one meal a day. Having thus taken but one meal a day (for eight days,) on the feast day, he worships the god in the temple, praises it, prostrates himself, and begs it to do us all good. He then comes out. In the court (of the temple) there is a stone pillar like a temple lamp-post. Coming to this pillar, he kneels down before the

5. ಇರುತ್ತಲೇ.
6. ನೀರಿನಲ್ಲಿ.
7. ಮುಣುಗಿ.
8. ಒಂದು ಹೊತ್ತು.
9. ಪ್ರಕಾರ.
1. ಗುಡಿಯಲ್ಲಿ.
2. ಸ್ತೋತ್ರಿಸಿ.
3. ಪ್ರಾಕಾರದಲ್ಲಿ.
4. ಗರುಡ ಕಂಭದ ಹಾಗೆ.
5. ಕಂಭದ ಹತ್ತರ.
6. ದೇವರಿಗೆ ಎದುರಾಗಿ.
7. ಮಂಡಿ ಕಾಲು ಹಾಕಿ ಕೊಂಡು.

ಕಣ್ಣು ಮುಚ್ಚಿ ಕೊಂಡು, ಕೂತು ಕೊಪ್ತಾನೆ.[8] ಕೂತ್ರು ಕೊಂಡ ಮೇಲೆ, ಆ ಪರಶೆಗೆ ಬಂದಿರುವ ಈ ಬೀರಪ್ಪನ ವಕ್ಕಲು ಯಾವತ್ತುಂನೂ[9]—ಸೂರುಗಾಯಿಗಳವರು, ಹಾರುಗಾಯಿಗಳವರು,[1] ಇಡಿಗಾಯಿಗಳವರು,[2] ಬಿಡಿಗಾಯಿಗಳವರು,[3] ಇವರೆಲ್ಲಾ ತೆಂಕಾಯಿಗಳು ತೆಕ್ಕೊಂಡು ಬಂದು, ಪೂಜಾರಯ್ಯನು ಕೂತು ಕೊಂಡಿರುವ ಕಂಬದತ್ತರಕ್ಕೆ ಬಂದು, ಕಾಯಿಗಳು ಕೈಯಲ್ಲಿ ಹಿಡಕೊಂಡು, ನಾನು ಮುಂದು, ತಾನು ಮುಂದು ಎಂದು ನುಗ್ಗುತ್ತಾರೆ. ಆಗ ಯಜಮಾಣ್ರಾದೋರು[4] ಹತ್ತು ಮಂದಿ ಇಂಗಡಿಸಿ[5] ಕೊಂಡು, ನಿಂತು ಕೊಂಡು, ಮೇಲೆ

idol, shuts his eyes, and rests on his hands and knees. When he has taken this position, all this Bīrappa's ryots who have come to the festival,—cocoanut scramblers, throwers, breakers, whole-offerers,—these all bring cocoanuts, and going up to the pillar where the priest is kneeling, they take the cocoanuts in their hands, and press upon one another, each crying, "I am first, I am first." Then ten of the most respectable people come out, stand apart from the rest, make the people stand

8. ಕೂತು ಕೊಳ್ಳುತ್ತಾನೆ. 9. ಯಾವತ್ತು.

1. Persons who, in offering cocoanuts, throw them high in the air to be scrambled for.

2. Persons who break their own cocoanuts by dashing them on a stone, (properly the work of the priest,) and thus offer the fragments.

3. Persons who offer single whole cocoanuts at the temple.

4. ಯಜಮಾನರು ಆದವರು. 5. ವಿಂಗಡಿಸಿ.

ನುಗ್ಗುವ ಜನಗಳನ್ನು ಹಿಂದಕ್ಕೆ ತಾಳ[6] ಹಿಡಿದು, ಅವರು ತಂದು ಇರುವ ತೆಂಗಿನ ಕಾಯಿಗಳನ್ನು ತಾವು ಕೈಗೆ ತೆಕ್ಕೊಂಡು, ಈ ಪೂಜಾರಯ್ಯನ ಹತ್ತ್ರ ಇನ್ನು ನಾಲ್ಕು ಮಂದಿ ಗಟ್ಟ್ಯಾಳುಗಳು[7] ನಿಂತು ಕೊಂಡು ಇರುತ್ತಾರೆ. ಅವರ ಕೈಗೆ ಈ ಯಜಮಾನರು ತೆಂಗಿನ ಕಾಯಿಗಳ[8] ಕೊಡುತ್ತಾ ಬಂದರೆ, ಆಗ ಅವರು ಆ ಬೀರಪ್ಪನೆದುರಿಗೆ ಕಣ್ಣು ಮುಚ್ಚಿ ಕೊಂಡು, ಬೋಳು ತಲೆ ಬಿಟ್ಟು ಕೊಂಡು, ಮೈ ಬೆತ್ತಲೆಯಾಗಿ, ನಡುವಿಗೆ ಮಾತ್ರ ಒಂದು ಜೋತ್ರ[9] ಸುತ್ತಿ ಕೊಂಡು, ಮಂಡಿಗಾಲೂರಿ ಕೊಂಡು,[1] ಕೂತು ಇರುವ ಪೂಜಾರ್ಯೆಯನ ತಲೇ ಮೇಲೆ ಈ ತೆಂಗಿನ ಕಾಯಿಗಳನ್ನು ಒಡೆಯುತ್ತಾ, ಒಡೆಯುತ್ತಾ, ಆ ಪೂಜಾರ್ಯೆಯನ ಈ ಕಡೆ ಆ ಕಡೆ ಅಪಾರವಾಗಿ ಆನೆ ಆನೆ ಉದ್ದ ತೆಂಗಿನ ಕಾಯಿ ಒಪ್ಪುಗಳ ರಾಶಿಗಳು

back who are pressing forward, and take the cocoanuts which the people have brought, into their own hands. Four others, strong men, stand near the priest; the elders hand the cocoanuts to them; and they keep on breaking them on the priest's head, (who sits on his hands and knees before Bīr-appa, with his eyes shut, holding out his shaven head, and his body naked, except a cloth round the waist,) until great heaps of cocoanut fragments are piled up as high as an elephant on both

6. inf. of ತಾಳು. 7. ಘಟ್ಟಿ ಆಳುಗಳು. 8. acc. 9. ಧೋತ್ರ. 1. ಮಂಡಿ ಕಾಲು ಊರಿ ಕೊಂಡು.

ಬೀಳುವ ಹಾಗೆ ಮಾಡುತ್ತಾರೆ. ಇಷ್ಟು ಕಾಯಿಗಳು ಜೋಳು ತಲೇ ಮೇಲೆ ಒಯಿದಾಗ್ಯೂ,[2] ನೋವು ಇಲ್ಲದೆ, ಕೂಗದೆ, ಅಪ್ಪಪ್ಪಾ! ಅಯ್ಯೋ! ಕುಯ್ಯೋ! ಮೊರ್ರೋ! ಅನ್ನದೆ, ಪೂಜಾರಯ್ಯನು ಮಂಡಿಕಾಲಾಕಿ ಕೊಂಡು, ಕೈಗಳು ಮುಂದಕ್ಕೆ ಊರಿ ಕೊಂಡು, ಒಡಿಯುವ ಕಾಯಿಗಳಿಗೆ ತಲೇ ಕೊಡುತ್ತಾ, ಕೂತು ಇರುತ್ತಾನೆ. ಇಂತಾ ಸತ್ಯವಾದ ದ್ಯಾವರು, ಸಾಮಿ, ನಮ್ಮ ದ್ಯಾವರು. ನಮಗೆ ಏನೂ ಕಷ್ಟ ಬಂದಾಗ್ಯೂ, ಪಾರೆ ಮಾಡುತ್ತಾನೆ. ನಮ್ಮನ್ನು ಕಾಪಾಡಿ ಕೊಂಡು ಬರುತ್ತಾನೆ, ಸಾಮಿ. ಕೇಳಿದಿರಾ?

ಧೊ. ಏನಯ್ಯಾ, ಕುರುಬ ಗವುಡಾ,[3] ಇಂತಾ ಬುದ್ಧಿ ಇಲ್ಲದ ಕೆಲಸ ಮಾಡುತ್ತೀರಿ? ತಲೇ ಮೇಲೆ ತೆಂಗಿನ ಕಾ

sides of him. And though so many nuts are dashed against his bare skull, the priest feels no pain, does not utter a sound, never cries "ap-pap-pa! ay-yo! kuy-yo! mor-ro!" but sits kneeling with his hands set out before him, and holds out his head for the nuts to be broken upon. Such a glorious god, Sir, is our god! No matter what trouble happens to us, he wards it off. He always takes care of us, Sir. Did you hear?

G. How is it, master-shepherd, that you do such a silly thing as this? If the priest has co-

2. ಹೊಯಿದಾಗ್ಯೂ. 3. ಗೌಡಾ,

ಯಿಗಳು ಪೂಜಾರಿ ಒಡಸಿ ಕೊಂಡರೆ, ದೇವರ ಸತ್ಯವೋ? ಅಲ್ಲ. ಅವನು ಚಿಕ್ಕಂದಿನಿಂದ ಕಲ್ಲಿಗೆ, ಗೋಡೆಗೆ, ತಲೆ ತಗಲಿಸುತ್ತಾ, ತಗಲಿಸುತ್ತಾ, ಕಾಯಿ ಕಟ್ಟಿ ಇರುವ ತಲೇ ಮೇಲೆ ತೆಂಗಿನ ಕಾಯಿ ಒಡದರೆ, ನೋಯದೆ ಇದ್ದರೆ, ಅದು ದೇವರ ಸತ್ಯವಲ್ಲ. ಅಂಗೈಗಳಲ್ಲಿ ಕೆಲವು ಜನಗಳು ಲಘುವಿನಿಂದ ತೆಂಗಿನ ಕಾಯಿಗಳು ಒಡಿಯುತ್ತಾರೆ. ಅದರ ಹಾಗೆ ಇದು ಒಡಿಯುವವರ ಲಘುವಿನಿಂದಲೂ ಒಡಸಿ ಕೊಂಬುವವನ ಅಭ್ಯಾಸದಿಂದಲೂ ನಡೆಯುವ ಕೆಲಸ. ಇದು ದೇವರ ಕೆಲಸವಲ್ಲ.

ಕು. ಅದು ಏನೋ, ಸಾಮಿ, ನಮಗೆ ತಿಳಿಯದು. ನೀವು ದೊರೆಗಳು; ನಿಮಿಗೆ ತಿಳಿದು ಇರುವದು. ಓಸಾಳು ಏಳಿದ ಮಾತು ನಾನೇಳಿದೆನು,[4] ಸೋಮಿ.

coanuts broken on his head, is that the glory of God? Not at all. If the priest feels no pain at the breaking of cocoanuts on his head, that is hardened by continually knocking it against stones and walls ever since he was a child, that isn't the glory of God. Some people have the knack of breaking cocoanuts in the palms of their hands. Just so this is done by the knack of the breakers and the practice of him who has them broken. This is not God's doing at all.

S. How it is, Sir, I don't know. You are a gentleman; you understand it. I only said what every body says, Sir.

4. ಅಷ್ಟು ಆಳು ಹೇಳಿದ ಮಾತು ನಾನು ಹೇಳಿದೆನು.

ಧೊ. ಆದರೆ ನೀನು ಯಾವಾಗಲೂ ಕುರಿಗಳ ಮೇಯಿಸುವವನೋ?

ಕು. ಅವುದು, ಸಾಮಿ; ನಾನು ಚಿಕ್ಕಂದಿನಿಂದ ಕುರಿಗಳೇ ಮೇಯಿಸುತ್ತೇನೆ.

ಧೊ. ನಿನಗೆ ಆರಂಬದ ಕೆಲಸ ಬಾರದೋ?

ಕು. ಎಲ್ಲಾ ತಿಳೋದು,[5] ಸಾಮಿ; ನಾನೆಂದೂ[6] ಆರಂಬ ಮಾಡಲಿಲ್ಲ. ಈ ಕುರಿಗಳನೇ[7] ಮೇಯಿಸಿ ಕೊಂಡು ಇದ್ದೇನೆ.

ಧೊ. ಈ ಕುರಿಗಳ ಮಂದೆಯನ್ನು ಈ ಮೇರಿಗೆ ಅಡವಿಯಲ್ಲಿ ಮೇಯಿಸುತ್ತೀಯಲ್ಲಾ? ತೋಳನು ಬಂದರೆ, ಏನು ಮಾಡುತ್ತೀ?

ಕು. ಮಾಡುವದೇನು, ದ್ಯಾವರು? ನಾಯಿಗಳು ಕಂಡು ಕೊಂಡರೆ, ತೋಳನು ಓಡೋಗುತ್ತೆ.[8] ನಾಯಿಗಳು ಕಾಣದೆ ಇದ್ದರೆ, ಹಿಂಡಿನಲ್ಲಿ ಬಂದು, ಬೀಳುತ್ತೆ.

G. But have you always been a feeder of sheep?

S. Yes, Sir; I have fed sheep from my youth.

G. Don't you understand farming?

S. I know every thing, Sir; but I never did farmer's work. I only feed these sheep.

G. So you feed this flock of sheep in this way in the jungle? If a wolf comes, what do you do?

S. What can I do, Sir? If the dogs see the wolf, it runs away. If the dogs don't see it, it comes and falls upon the flock. And when once it falls

5. ತಿಳಿಯುವದು.
6. ನಾನು ಎಂದೂ.
7. ಕುರಿಗಳನ್ನೇ.
8. ಓಡಿ ಹೋಗುತ್ತದೆ.

ಬಿದ್ದ ಮೇಲೆ, ಒಂದೆರಡು ಕುರಿಗಳ ಎತ್ತಿ ಕೊಂಡು ಹೋಗದೆ, ಬಿಡೋದಿಲ್ಲ,[9] ಸಾಮಿ.

ಧೊ. ಆದರೆ ಈ ಕತ್ತೆಗಳ ಕೂಡಿ[1] ಮೇಯಿಸುತ್ತೀ. ಈ ಕತ್ತೆಗಳು ಏನು ಮಾಡುತ್ತವೆ?

ಕು. ಆ ಕತ್ತೆಗಳು ಇರೋದರಿಂದ[2] ಶ್ಯಾನೆ ವಾಶಿ, ಸಾಮಿ.

ಧೊ. ಅದು ಹ್ಯಾಗಯ್ಯಾ?

ಕು. ತೋಳನು ದೂರದಲ್ಲಿ ಬರುವಾಗ್ಯೆ, ನಾಯಿಗಿಂತ ಮುಂಚಿತವಾಗಿ ಕತ್ತೆಗೆ ತೋಳನ ಗಮುಲು ತಿಳಿಯುತ್ತೆ; ತಿಳಿದು, ಕೂಗುತ್ತೆ. ಆ ಕೂಗುವ ಸೈಗೆ ನಾಯಿ ತಿಳ ಕೊಂಡು, ನಾಲ್ಕು ಕಡೆಯೂ ನೋಡುತ್ತೆ. ನೋಡುವಾಗ, ತೋಳನು ಓಡಿ ಹೋಗುತ್ತೆ, ಸಾಮಿ.

upon it, it will not leave without carrying off one or two sheep, Sir.

G. But you feed these donkeys too. What do the donkeys do?

S. It is much better to have the donkeys, Sir.

G. How is that, Sir?

S. When the wolf is coming in the distance, the donkey scents the wolf before the dog; and when it scents it, brays. The dog understands the signal, and looks all around. And when it looks around, the wolf runs away, Sir.

9. ಬಿಡುವದಿಲ್ಲ.
1. ಕತ್ತೆಗಳನ್ನು ಕೂಡಿಸಿ.
2. ಇರುವದರಿಂದ.

ಧೊ. ಆದರೆ ಕತ್ತೆ ಕೂಗುವಾಗೆಲ್ಲಾ ತೋೞನು ಬರುತ್ತ್ರೋ?[3]

ಕು. ತೋೞನು ಬರಲಿ, ಬಾರದೆ ಹೋಗಲಿ; ಯಾವಾಗ ಕತ್ತೆ ಕೂಗಿದಾಗ್ಯೂ, ನಾಯಿ ಎಚ್ಚತ್ತು ಕೊಂಡು, ನಾಲ್ಕು ಕಡೆಗಳೂ ನೋಡುತ್ತೆ. ಆದದರಿಂದ ತೋೞಗಳು ಬರುವದಕ್ಕೆ ರೋಟು ಭಯವೇ, ಸಾವಿಾ.

ಧೊ. ಆಹಾ! ಹಾಗೋ?

ಕು. ಈ ಕತ್ತೆಗಳಿಂದ ಶಾನೆ ಉಪಕಾರ, ಸಾವಿಾ.

ಧೊ. ಇನ್ನೇನು?

ಕು. ಈ ಕುರೀ ಗೊಬ್ಬರ ಹತ್ತು ಭಂಡಿ ಹೊಡೆಯುವ ಹೊಲಕ್ಕೆ ಕತ್ತೇ ಗೊಬ್ಬರ ಅಯಿದು ಭಂಡಿಯೇ ಸಾಕು. ಕತ್ತೇ ಗೊಬ್ಬರ ಬಿದ್ದ ಹೊಲ ಚನ್ನಾಗಿ ಬೆಳಿಯು

G. But does the wolf come whenever the donkey brays?

S. Let the wolf come or not come; whenever the donkey brays, the dog is on his guard, and looks about on all sides; so that the wolves are a little afraid to come, Sir.

G. Aha! that's it, is it?

S. These donkeys are very useful, Sir.

G. What else?

S. For a field that takes ten cart loads of these sheep's dung, five cart loads of asses' dung are enough. A field manured with asses' dung grows

3. ಬರುತ್ತದೋ.

ವದು. ಇದಲ್ಲದೆ ಕಾಳು ಕಡಿ[4] ಹೊರುವದಕ್ಕೂ ಸರಿ, ಕುರಿಗಳ ಕಾವಲಿಗೂ ಸರಿ. ಈ ಕೆಲಸಗಳಿಗೆಲ್ಲಾ ಬರುತ್ತೆ, ಸಾಮಿ.

ಧೊ. ನೀನು ಹಗಲೆಲ್ಲಾ ಕುರಿ ಮೇಯಿಸುತ್ತಾ, ಗಿಡಗಳಲ್ಲಿ ಇದ್ದೀಯಲ್ಲಾ? ಮಳೆ ಬಂದರೆ, ಏನು ಮಾಡುತ್ತೀ?

ಕು. ಮಳೆ ಬಂದರೆ ಏನು ಮಾಡುವದು, ದ್ಯಾವರು? ನೆನದು ಹೋಗುತ್ತೇನೆ. ಕಂಬಳಿ ಬೊಂತೆ ಒಂದದೆ; ಅದು ನೆನದರೆ, ನಾನೂ ನೆನೆಯುತ್ತೇನೆ.

ಧೊ. ಆದರೆ ಒಂದು ಗೊರಸು ಹವಣಿಸಿಕೋ ಬಾರದೋ?

ಕು. ಗೊರಸು ಮನೆಯಲ್ಲಿ ಇಧೆ, ಸಾಮಿ. ಮ

well. Besides, they are useful for carrying grain, and for guarding sheep too. They answer all these purposes, Sir.

G. You are all day in the jungle feeding sheep? If it rains, what do you do?

S. If it rains, what can I do, Sir? I get wet. I have an old cambly, and if that gets wet, I get wet too.

G. But cannot you provide yourself with a reed covering?

S. I have a reed covering at home, Sir. In the

4. a pleonasm.

ಳೆಗಾಲದಲ್ಲಿ ಕೈಲಿ ತರುತ್ತೇನೆ; ಬೇಸಿಗೆಯಲ್ಲಿ ತರುವದಿಲ್ಲ.

ಧೊ. ಈಗ ಮಳೆಗಾಲವೋ? ಬೇಸಿಗೆಯೋ?

ಕು. ಉಗಾದಿ ಹೋಗಿ, ಮೂರು ತಿಂಗಳಾಯಿತು. ಇನ್ನು ಮೇಲೆ ಮಳೆಗಾಲವೇ. ಈಗ ಅಷ್ಟು ಮಳೆ ಇಲ್ಲವೇಳಿ. ಎಂದಾದರೂ ಒಂದು ಮಳೆ ಬಂದರೆ, ಬರಲೇಳಿ, ಸಾಮಿ. ನಮಗೇನು? ಗಿಡದಲ್ಲಿ ಇರೋರಿಗೆ ಒಂದು ದಿನ ಮಳೆಗೆ ನೆನೆದರೂ, ಪರವೇ ಇಲ್ಲ.

ಧೊ. ಆದರೆ ಈಗ ನಿನಗೆ ಎಷ್ಟು ವರುಷಗಳುಂಟು, ಗೌಡಾ?

ಕು. ನನಗೆ ಈಗ ಎಂಭತ್ತರ ಮೇಲೆ ಒಂಭತ್ತು ವರುಷವಾಯಿತು, ದ್ಯಾವರು.

ಧೊ. ತೊಂಭತ್ತು ವರುಷಕ್ಕೆ ಒಂದು ವರುಷ ಕಡಿ

rainy season I bring it in my hand, but do not bring it in the hot season.

G. Is this the rainy season, or the hot season?

S. It is now three months past new year's day. After this will be the wet season. There isn't so much rain now, you know. If a shower comes at any time, why let it come, Sir. What is it to us? It doesn't matter to people who are always out in the jungle, if they are exposed to the rain for one day.

G. Well *Gowda*, how old are you now?

S. I am now nine years over eighty, Sir.

G. One year short of ninety? You are a very

ಮೆಯೋ? ನೀನು ಬಹಳ ದಿವಸದ ಮುದುಕನು; ಘಟ್ಟಿ
ಮುದಕನು. ದಿನವೂ ಈ ಕುರಿಗಳ ಸಂಗಡ ಬೆನ್ನು
ಬಿಡದೆ ಮೇಯಿಸುತ್ತಾ, ತಿರುಗುತ್ತೀಯಲ್ಲಾ? ಒಂದು ದಿ
ನಕ್ಕೆ ಎಷ್ಟು ದೂರಾ ತಿರುಗುತ್ತೀ? ಹೇಳು, ಮತ್ತೆ ನೋ
ಡೋಣ.

ಕು. ಆ ಲೆಕ್ಕ[5] ಎಂಗೆ,[6] ಸಾಮಿ, ಏಳೋದು?[7] ಆದ
ರೆ ಒಂದು ಆಳು ಒಂದು ದಿನಕ್ಕೆ ನಿಲ್ಲದೆ ದಾರೀ ನಡದರೆ,
ನಾಲ್ಕೈದು ಗಾವದ ನೆಲ ನಡದಾನೋ? ಅಷ್ಟು ಬೇಡ.
ಮೂಗಾವದವೆಂತು ಸುಳುವಾಗಿ[8] ನಡಿಯುತ್ತಾನೆ. ನಾ
ನು ತಿರುಗುವ ಲೆಕ್ಕ ನೋಡಿದರೆ, ಆಸಾಗುವದು.[9] ಇ
ನ್ನು ಒಂದೆರಡು ಅರಿದಾರಿ[1] ಕಡಿಮೆ ಮಾಡಿ ಕೊಳ್ಳಿ. ಆ
ಲೆಕ್ಕದಷ್ಟು ನಡಿಯುತ್ತೇನೆ.

old man; a hale old man! Well now, you walk about all day after these sheep, feeding them. How far do you go in a day? Say, and we'll see.

S. How can I tell that, Sir? But suppose a man were to travel a whole day without stopping, could he get over four or five *gāvadas* of ground? We need not say so much as that. Three *gāvadas* he would walk easily. If you reckon the distance I walk, it will amount to that. Take off one or two *haridāris* more, and that's the amount I walk.

5. ಲೆಖ್ಖ.
6. ಹ್ಯಾಗೆ.
7. ಹೇಳುವದು.
8. ಸುಲಭವಾಗಿ.
9. ಅಷ್ಟು ಆಗುವದು.
1. ಹರಿದಾರಿ.

ಧೊ. ಎಲಾ, ಎಲಾ, ಮುದುಕಾ, ಒಳ್ಳೇ ಲೆಕ್ಕಾ ತೆಗದನಲ್ಲಾ?[2] ಸರಿಯೋ. ಒಂದು ದಿನಕ್ಕೆ ಹತ್ತು ಹರಿದಾರಿಗೆ ಕಡಿಮೆ ಆಗುವದಿಲ್ಲ. ತೊಂಭತ್ತು ವರುಷದ ಮುದುಕನು, ಈ ಮೋರಿಗೆ ತಿರುಗುತ್ತೀ; ಘಟ್ಟಿಗನು. ಶಾಬಾಸು!

ಕು. ಏನೋ, ಸಾಮಿ, ನಿಮ್ಮ ದಯ. ಸಬಾರ[3] ಒತ್ತ್ರೋಯಿತು.[4] ಕುರಿಗಳು ದೂರ ಓದವು.[5] ಅಪ್ಪಣೆ ಕೊಡಿ, ಸಾಮಿ. ನಾನು ಓಗಿ[9] ಬರುತ್ತೇನೆ, ಸಾಮಿ. ಸರಣು ಮಾಡಿದೆನು, ಕೈ ಮುಗಿದೆನು, ಸಾಮಿ.

ಧೊ. ಒಳ್ಳೇದೈಯಾ, ಗೌಡಾ; ಹೋಗಿ ಬಾ.[7] ನಾವು ಹೋಗಿ ಬರುತ್ತೇವೆ. ದಯವಿರಲೈಯಾ, ಗೌಡಾ.

G. Well, well, old man! He has made a fine reckoning. Well done! Not less than ten *haridāris* a day! You, an old man of ninety, walk about at this rate! A strong man! Well done!

S. What matters it, Sir? Your favour. It's very late. The sheep have gone far away. Give me leave, please, Sir. I'm going, Sir. Your servant, Sir. Homage to you, Sir.

G. Very well, *Gowda*, Good bye! I'm going too. Let your favour rest upon me, *Gowda*.

2. The gentleman says this to himself.
3. A corruption of ಅಪಾರ.
4. ಹೊತ್ತು ಹೋಯಿತು.
5. ಹೋದವು.
6. ಹೋಗಿ.
7. "Go and come," the usual mode of wishing good bye.

ಕು. ನಮ್ಮ ದಯವೇನು, ಸಾಮೀ? ಧೊರೆಗಳ ದಯವಿದ್ದರೆ, ನಮ್ಮಂತಾ ಬಡವರು ಬದಿಕೇವು,[8] ಎಂದು, ಹೇಳಿ ಹೊರಟು ಹೋದನು.

S. What is our favour, Sir? If we have the gentleman's favour, we poor people shall prosper.

So saying, he took his departure.

---

## ಏಳನೇ ಸಂಭಾಷಣೆ.

### ವರ್ತಕನ ಸಂಗಡ.

ಇನ್ನೂ ಮುಂದೆ ಈ ದೊಡ್ಡ ಮನುಷ್ಯನು ಹೋಗುತ್ತಾ ಇರುವಲ್ಲಿ, ಮತ್ತೊಬ್ಬ ಮನುಷ್ಯನು ಎದುರಾಗಿ ಬಂದನು. ಅವನ ತಲೆಗೆ ಒಂದು ಹರುಕು ಪಾಗು ಸುತ್ತಿಕೊಂಡು, ತೊಡೆಗಳ ಮಟ್ಟಿಗೂ ಒಂದು ಹರುಕು ಜೊ

## DIALOGUE VII.

### *With a Merchant.*

As this gentleman proceeded further, another man met him. He had a ragged turban round his head, a tattered jacket that hung down to his

8. con. fut. of ಬದುಕು.

ಗೆ ತಗಲ ಹಾಕಿ ಕೊಂಡು, ಒಂದು ಹಳೇ ಪಂಚೆ ಉಟ್ಟು ಕೊಂಡು, ಒಂದು ಮಾಸಲು ದುಪ್ಪಟೀ ಹೊದ್ದು ಕೊಂಡು, ಒಂದು ಹಸಿಬೀ ಚೀಲ ಹೆಗಲ ಮೇಲೆ ಹಾಕಿ ಕೊಂಡು, ನಡುವಿನ ಮೇಲೆ ಹಿಂದಕ್ಕೆ ಎಡಗೈ ಇಟ್ಟು ಕೊಂಡು, ಬಲಗೈ ಬೀಸಿ ಕೊಂಡು, ಬೇಗ ಬೇಗ ಅಲ್ಲಾಡಿ ಕೊಂಡು, ಬರುವವನ[9] ನೋಡಿ, ಈ ದೊಡ್ಡ ಮನುಷ್ಯನು ನಕ್ಕು,[1] ಆ ಮನುಷ್ಯನನ್ನು ಕುರಿತು—

ಧೊ. ನೀನ್ಯಾರು? ನಿನ್ನ ಹೆಸರೇನು? ನಿನ್ನ ವರ್ತಮಾನವೇನ್ನೈಯ್ಯಾ? ಎಂದು ಕೇಳಲೂ;

ಆ ಮನುಷ್ಯನು ಈತನ ಒಂದು ಪಾರ್ಶ್ವಕ್ಕೆ ನಿಂತು, ಸಲಾಂ ಮಾಡಿ,

ವ. ಅಯ್ಯಾ, ನಾನು ಬಡವನು, ವರ್ತಕನು; ನನ್ನ

thighs, an old body-cloth wrapped round him, a dirty cloth thrown over him, and a wallet over his shoulder. With his left hand placed on his hip behind, and swinging his right hand, he came bustling along. The gentleman laughed when he saw him, and asked him:—

G. Who are you? What's your name? What are you, Sir?

The man stood to one side of him, made salaam, and replied:—

M. Sir, I am a poor man, a tradesman; my

9. acc. 1. From ನಗು.

ಹೆಸರು ಯೆಂಗಿ ಶೆಟ್ಟಿ; ನನ್ನ ವರ್ತಮಾನ ಇನ್ನೇನು ಹೆ
ಚ್ಛಾಗಿದ್ಧೀತ್ರೈಯ್ಯಾ! ಎನ್ನಲೂ;

ಧೊ. ನೀನು ವರ್ತಕನೋ? ನೀನು ಮಾಡುವ ಕೆ
ಲಸ ವ್ಯಾಪಾರವ್ರೋ? ನೀನು ಜಾತಿ ವ್ರೊಳಗೆ ಯಾರು?

ವ. ನಾವು ಕುಲದಲ್ಲಿ ಕೋಮಟಿಗರೆಂದು ಹೇಳು
ತ್ತಾರೆ.

ಧೊ. ಆದರೆ ಕೋಮಟಿಗರೋ? ಕೋಮಟಿಗರು
ವ್ಯಾಪಾರದಲ್ಲಿ ಬಹಳ ಬುದ್ಧಿವಂತರೆಂದುನ್ನೂ[2] ಕೋ
ಮಟಿಗರಲ್ಲಿ ಬಡವರು ಸ್ವಲ್ಪ ಜನವೇ ಎಂದೂ, ಹೇಳು
ತ್ತಾರೆ. ನೀನು ಬಡವನೋ? ಉಂಟಾದವನೋ?

ವ. ನನಗೆ ಉಂಟಾದತನ ಎಲ್ಲಿ ಬಂದೀತು? ನನ್ನ
ವೇಷ ನೋಡಿದರೆ, ಬಡವನೆಂದು ಹೇಳದೆ ಇರುವವರು

name is Yengi Shet-ti. What can there be special in my circumstances, Sir?

G. A merchant, are you? Your business is trading, is it? Of what caste are you?

M. They call as *Kômatis* by caste.

G. *Kômatis*, are you? They say that *Kômatis* are very clever in trading, and that there are very few poor people amongst the *Kômatis*. Are you a poor man, or a man of property?

M. Where should I get property? There is nobody, Sir, who looks at my appearance, that won't

2. For ಎಂದೂ.

ಒಬ್ಬರೂ ಇಲ್ಲವೈಯ್ಯಾ. ನಿಮಗೆ, ನನ್ನನ್ನ ನೋಡಿದರೆ,
ಬಡವನಾಗಿ ತೋರದೆ, ಉಂಟಾದವನೋ? ಎಂದು ಸಹ
ಜವಾಗಿ ಕೇಳುತ್ತೀರೋ, ಇಲ್ಲದೆ ಗಾರಡ ಮಾಡುತ್ತೀ
ರೋ, ತಿಳಿಯಲಿಲ್ಲ. ಅದು ಹ್ಯಾಗೆ ಎಣಿಸಿ ಕೊಂಡಾ
ಗ್ಯೂ, ನೀವು ದೊಡ್ಡ ಮನುಷ್ಯರು, ನಾನಂತೂ[3] ಬಡವ
ರಿಗೆಲ್ಲಾ ಬಡವ ನಿರ್ಬಡವನೈಯ್ಯಾ.

ಧೊ. ಆದರೆ ನೀನು ಬಹಳ ಬಡವನೋ? ಆದದ
ರಿಂದ ಇಂಥಾ ವಸ್ತ್ರಗಳು ಧರಿಸಿಕೊಂಡು ಇದ್ದೀಯೋ?
ನಿನ್ನ ಬಟ್ಟೆಗಳು, ನಿನ್ನ ವೇಷವನ್ನೇ ನೋಡಿ, ಬಡವನೆಂ
ದೆಣಿಸ ಬೇಕು. ಇಷ್ಟೇ ಹೊರ್ತು, ನಿನ್ನ ಬಡತನವೂ
ಉಂಟಾದತನವೂ ನಮಗೆ ಹ್ಯಾಗೆ ತಿಳಿಯುವದು? ಆಗ
ಲಿ, ಚಿಂತೆ ಇಲ್ಲ. ನೀನು ಮಾಡುವ ವ್ಯಾಪಾರವೇನು?
ಹ್ಯಾಗೆ ಜೀವನ ಮಾಡುತ್ತೀ?

say that I am a poor man. Whether, you ask me seriously if I be a man of property, because after seeing me, I don't seem to you poor, or whether you are humbugging me, I don't know. However that be, you are a great man, and I am the poorest of all the poor, Sir.

G. Are you very poor, then? Is that the reason you wear such clothes? From your clothes and your appearance one must infer that you are a poor man. Beyond this, how can I know your poverty or wealth? However, never mind. What is your trade? How do you make a living?

3. ನಾನು ಉಂತು.

ವ. ಏನು ಜೀವನವಯ್ಯಾ? ಬಹಳ ಕಷ್ಟ ಜೀವನ.

ಧೊ. ಕಷ್ಟ ಜೀವನವೆಂದರೆ,[4] ಗುದ್ದಲೀ ಹಿಡಿದು, ಅಗಿಯುತ್ತೀಯೋ? ಇಲ್ಲ. ಪಾಲಖೀ ಹೊರುತ್ತೀಯೋ? ಇನ್ನು ಯಾರಲ್ಲಿ ಆಗಲಿ ಆಳಾಗಿ,[5] ಹೇಳಿದ ಕೆಲಸಗಳನ್ನೆಲ್ಲಾ ಮಾಡುತ್ತೀಯೋ? ಇಲ್ಲ. ಇದು ಏನೂ ಇಲ್ಲದೆ, ಕಷ್ಟ ಜೀವನ, ಕಷ್ಟ ಜೀವನವೆಂದು ಹೇಳುತ್ತೀ. ಅದು ಹ್ಯಾಗೆ ಕಷ್ಟ ಜೀವನ? ಹೇಳು.

ವ. ಏನಯ್ಯಾ, ಕಷ್ಟ ಜೀವನವಲ್ಲದೆ? ಹೊತ್ತಾರೆ ಏಳುವದುನ್ನು, ಹಶಿಬೀ ಚೀಲ ಹೆಗಲಿಗೆ ಹಾಕಿ ಕೊಂಡು, ಹಳ್ಳಿ ಪಳ್ಳಿಗಳು[6] ಬಹಳವಾಗಿ ತಿರುಗ ಬೇಕು. ತಿರುಗುತ್ತಾ, ತಿರುಗುತ್ತಾ, ಯಾವ ಹಳ್ಳಿಯಲ್ಲಿ ಆಗಲಿ, ರಾಗಿಯಾದರೂ, ಜೋಳವಾದರೂ, ನೆಲ್ಲು, ಅವರೆ, ತೊಗ

M. What living, Sir? It's a very hard living.

G. What do you mean by a hard living? Do you take a spade and dig? No. Do you carry a palankeen? Or are you servant to any one, and do whatever you are bid? No. Nothing of all this, yet your cry is, "a hard living, a hard living." How is it a hard living? Tell me.

M. What is it but a hard living, Sir? As soon as I get up in the morning, with my wallet on my shoulder I must go about a great deal amongst the villages. Walking, walking, if in any village I met with any *rāgì*, or millet, paddy, beans, peas,

4. *lit.* a hard living, if you say? 5. ಆಳು ಆಗಿ. 6. a pleonasm.

ರಿ, ಎಳ್ಳು, ಹೆಸರು, ಉದ್ದು, ಗೋಧಿ, ಕಡಲೆ, ಗಸಗಸೆ, ಹುರುಳಿ, ನವಣೆ, ಸಾಮೆ, ಹಾರಕ, ಇನ್ನು ತುಪ್ಪ, ಬೆಂಣ್ಣೆ, ಬೆಲ್ಲ, ಹೊಗೇ ಸೊಪ್ಪು, ಮೆಣಸಿನ ಕಾಯಿ, ಕೊತ್ತುಂಬರೀ ಬೀಜ, ಈರುಳ್ಳಿ, ಬೆಳ್ಳುಳ್ಳೀ, ಈ ಮುಂತಾದ ದಿನುಸುಗಳು ಅಗ್ಗವಾಗಿ ಏನು ಶಿಕ್ಕಿದಾಗ್ಯೂ, ತೆಗದು, ಚೀಲಾ ತುಂಬುವದುನ್ನೂ, ಇನ್ನು ಇರ ತಕ್ಕ ದಿನುಸುಗಳಿಗೆ ಸಂಚಕಾರ ಮುಂಗಡವಾಗಿ ಹಣಗಳು ಕೊಟ್ಟು, ಬಹಳವಾಗಿ ದೊರಕಿದ ನೆಲ್ಲು, ರಾಗಿ, ಮುಂತಾದ ದವಸಗಳಿಗೆ ಬಾಡಿಗೆ ಭಂಡಿಗಳು ಮಾಡಿ, ಅವರಿಗೆ ಬಾಡಿಗೆ ಹಣಗಳು ಕೊಟ್ಟು, ಆ ದಿವಸ ಆಯಾ[7] ಊರುಗಳಲ್ಲಿ ಇದ್ದು, ದವಸಗಳ ಯಾವತ್ತೂ ಭಂಡಿಗಳಿಗೆ ತುಂಬಿಸಿ, ಇಷ್ಟು ಭಂಡಿಗಳೆಂದು, ಲೆಖ್ಖಾ ನೋಡಿ ಕೊಂಡು, ಆ ಬಾಡಿಗೆ ಭಂಡಿಯುವರಲ್ಲಿ ಒಬ್ಬ ಬುದ್ಧಿವಂತನಾಗಿ, ಗೃಹ

oil seed, green gram, pulse, wheat, Bengal gram, opium seed, horse gram, panic seed, *sámè*, *háraka*, or ghee, butter, jaggory, tobacco, chilies, coriander seed, onions, garlic, and such things, at a cheap rate, I buy them, and fill my wallet. For other things I advance money, hire carts for paddy, *rāgi*, and other grain that I have got in large quantities, pay them their hire, stay that day in such and such villages, fill all the grain into the carts, reckon the number of the carts, choose from amongst the hired carters a clever, honest and intelligent man,

7. ಆ ಆ.

ಸ್ತನಾಗಿ, ನ್ಯಾಯುವರಿತವನಾಗಿ ಇರುವವನ್ನ ಎಲ್ಲಾ ಭಂಡಿಗಳಿಗೂ ಗೊತ್ತುಗಾರನಾಗಿ ಏರ್ಪಡಿಸಿ, ಈ ಭಂಡಿಗಳ ಯಾವತ್ತುನ್ನು ಅವನ ಜಿಂಮೆಗೆ ಕೊಟ್ಟು, ಆ ಭಂಡಿಗಳವರಿಗೂ[8] ಅವನಿಗೂ ಮೊಖ್ತಾ ಹೇಳಿಸಿ, ಈ ಗೊತ್ತುಗಾರನ ಕಡೆಯಿಂದ ಭರವಸಾ ತೆಗದು ಕೊಂಡು, ನಾನು ಮುಂಚಿತವಾಗಿ ಊರಿಗೆ ಹೋಗಿ, ಅಲ್ಲಿ ಇರುವ ವ್ಯಾಪಾರಸ್ತರಿಗೆ, ಇಂಥಾ ಜಿನಸು ತರುತ್ತೇನೆ; ನಿಮಗೆ ಬೇಕಾಗಿ ಇದ್ದರೆ, ಸಂಚಕಾರಗಳು ಕೊಡಿ ಎಂಬದಾಗಿ ಹೇಳಿ, ಹಳ್ಳಿಗಳಲ್ಲಿ ಖಂಡುಗ ಒಂದಕ್ಕೆ ಮೂರು ರೂಪಾಯಿ ಧಾರಣೆ ಇದ್ದರೆ, ಪ್ಯಾಟೆ[9] ಧಾರಣೆ ನಾಲ್ಕು ರೂಪಾಯಿ ನಿಷ್ಕರ್ಷೆ ಮಾಡಿ, ಅವರಿಗೆಲ್ಲಾ ಒಪ್ಪಿಸಿ, ಒಂದೆರಡು ದಿವಸಗಳು ಸುಮ್ಮನೆ ಇದ್ದರೆ, ಮೂರನೇ ದಿವಸ ಭಂಡಿಗಳು ಬರುವದುನ್ನೂ, ರಾಗೀ ಬೇಕಾದವರಿಗೆ ರಾಗಿ, ನೆಲ್ಲು

and appoint him over all the carts, give all these carts into his charge, settle all arrangements before them and him, and take security from the overseer. This done, I go first to the town, and tell the merchants there, "I am bringing such and such things; if you want them, give me a deposit." If the price in the villages be three rupees a *khanduga*, I fix the town price at four rupees, agree with them all, and if I wait one or two days, when the carts come on the third day, I measure out

8. ಭಂಡಿಯವರಿಗೂ. 9. ಪೇಟೆ.

ಬೇಕಾದವರಿಗೆ ನೆಲ್ಲು, ಈ ಮೇರಿಗೆ ಅವರವರಿಗೆ ಬೇಕಾದ ದಿನಸುಗಳು ಅಳೆಸಿ ಕೊಟ್ಟು, ತಂದ ದವಸವೆಲ್ಲಾ ಖರೀದಿ ಆದ ಮೇಲೆ, ಮೊದಲಾಗಿ ವ್ಯಾಪಾರಕ್ಕೆ ತೆಗದು ಕೊಂಡು ಹೋದ ಅಯಿವಜು[1] ಎಷ್ಟು? ಅದಕ್ಕೆ ತಂದ ವ್ಯಾಪಾರವೆಷ್ಟು? ಅಲ್ಲಿ ಸ್ಥಳದ ಖರೀದಿಗೆ ಜಾಸ್ತಿಯಾಗಿ ಕೂಡಿ ಬಂದ ಅಯಿವಜು ಎಷ್ಟು? ಇದರಲ್ಲಿ ಬಾಡಿಗೆ, ಸುಂಕ, ಮುಂತಾದ ಮಾರ್ಗ ವೆಚ್ಚವೇನು? ಇಷ್ಟು ಕಳೆದು, ಏನಾದರೂ ನಾಲ್ಕು ರೂಪಾಯಿಗಳು ಮಿಕ್ಕರೆ,[2] ಅದರಲ್ಲಿ ಮನೇ ಗೃಹಕೃತ್ಯವೂ ತೀರಿಸಿ ಕೊಂಡು, ಸಾಲಗಾರ್ರಿಗೂ ಒಡಂಬಡಿಕೆ ಹೇಳಿ, ಪ್ರಸ್ತಗಳು ಪ್ರಯೋಜನಗಳು ಮಾಡಿ ಕೊಂಡು, ಯಾಚಕಸ್ತರು ಬಂದರೆ, ಅ

*rāgi* to those who want *rāgi*, and paddy to those who want paddy, thus giving to each of them the things that he wants. When all the grain that I brought is sold, I reckon up how much money I took with me at first to trade with; how much merchandise I brought for it; how much I have gained above the price at the place (where I bought it;) what of this has gone for cart hire, duty, and other road expenses. Deducting this, if four rupees or so remain, I pay my household expenses out of it, quiet my creditors, perform any marriage or funeral ceremonies; and if beggars come, in order

1. ಐವಜು.

2. subj. of ಮಿಗು.

ವರಿಗೆ—ಏನೂ ಇಲ್ಲ; ಹೋಗಿ, ಅನ್ನದ ಹಾಗೆ, ರೂಪಾ
ಯಿ ಆಗಲಿ, ಅರ್ಧ ರೂಪಾಯಿ ಆಗಲಿ, ಪಾವಲೆ ಆಗಲಿ,
ತೋರಿದ್ದು ಕೊಟ್ಟು, ಒಡಂಬಡಿಕೆ ಮಾಡಿ, ಕಳಿಹಿಸು
ತ್ತಾ, ಎಲ್ಲರಿಂದಲೂ ಒಳ್ಳೇಯವನು ಅನ್ನಿಸಿ ಕೊಂಡು,
ಜೀವನ ಮಾಡಿ ಕೊಂಡು ಇರ ಬೇಕು. ಇಂಥಾ ಜೀ
ವನ ಕಷ್ಟ ಜೀವನವಲ್ಲದೆ, ಸುಖ ಜೀವನ ಹ್ಯಾಗಾದೀ
ತು? ಏನು ಕೂಡಿ ಬಂದರೂ, ವ್ಯಾಪಾರದಲ್ಲಿ ಕೂಡಿ ಬ
ರ ಬೇಕು. ಇದು ಹೊರ್ತು, ಮತ್ತೆಲ್ಯಾದರೂ ಸಂಬಳ
ಉಂಟೇ? ಸಾರಿಗೆ[3] ಉಂಟೇ? ಏನೂ ಇಲ್ಲ.

ಈ ಮೋರಿಗೆ ಜೀವನ ಮಾಡ ಬೇಕೆಂದು ಹೇಳಿದ ವ
ರ್ತಕನನ್ನು ನೋಡಿ, ಈ ದೊಡ್ಡ ಮನುಷ್ಯನು,

ಧೊ. ಅಯ್ಯಾ, ವರ್ತಕನೇ, ನಿನ್ನ ಜೀವನ ಎಷ್ಟು

that I may not say to them, "I have nothing, go away," I give them a rupee, or half a rupee, or a quarter of a rupee, as I think fit, satisfy, and send them away, and cause all to speak well of me. Thus I must make my living. How can such a living be an easy living, and not a hard one? Whatever I get, must come by trading. Besides this, have I any wages or pay from any other quarter? Not a thing.

The gentleman looked at the merchant, who had related that thus he must get his living, and said:

G. Mr. Merchant, your living is not a hard one

3. a pleonasm.

ಮಾತ್ರವೂ ಕಷ್ಟವಲ್ಲ; ನೀನು ವ್ಯಾಪಾರಸ್ತನು; ನೂರು ವರಹಾದ ವ್ಯಾಪಾರ ತಂದರೆ, ಮೇಲೆ ನೂರು ವರಹಾ ಲಾಭಾ ನೋಡಿ ಕೊಂಡು, ಆ ವ್ಯಾಪಾರವನ್ನು ಮಾರುತ್ತೀ. ಆ ಲಾಭ ದ್ರವ್ಯದಲ್ಲಿ ಅರವಾಶಿ ಮೇಲಿನ ಖರ್ಚು ವೆಚ್ಚಗಳಿಗೆ ಹೋದಾಗ್ಯೂ, ನಿಂತ ಅರವಾಶಿ ಐವತ್ತು ಅರವತ್ತು ವರಹಾದ ವರಿಗೂ ನಿನಗೆ ಲಾಭವಾಗುತ್ತೆ. ಈ ಮೇರಿಗೆ ವರುಷಕ್ಕೆ ಅನೇಕಾವರ್ತಿ ತಂದು ಮಾರುವ ಜೆನಸಿನಲ್ಲಿ ಸಾವಿರಾರು[4] ವರಹಾ ಕೂಡಿ ಬರುತ್ತೆ. ಇದರಲ್ಲಿ ಸವುಖ್ಯವಾಗಿ[5] ಜೀವನವು ಮಾಡಿ, ದೊಡ್ಡದಾಗಿ ಮನೆಗಳು ಕಟ್ಟಿ ಕೊಂಡು, ಮನೆಯಲ್ಲಿ ಬೇಕಾದ ತಪಲೆಗಳು, ಚೆಂಬುಗಳು, ಗಂಗಾಳಗಳು, ಹಂಡೆಗಳು, ಕೊಡಗಳು, ತಬಕುಗಳು, ತಟ್ಟೆಗಳು, ಮುಂತಾದ ಪಾ

at all. You are a dealer; and I am told that if you bring a hundred pagodas worth of merchandise, you take care to have a hundred pagodas profit upon it, and then sell it. And, though half of that profit may go in expenses, you clear the remaining half, as much as fifty or sixty pagodas, for yourself. And out of the things that you bring and sell in this way many times a year, you make pagodas without number. On this you live very comfortably, build large houses, accumulate great quantities of brass pans, *chembus*, caldrons, coppers, cans, dishes, salvers and all kinds of household

4. a definite for an indefinite number. 5. ಸೌಖ್ಯವಾಗಿ.

ತ್ರ ಸಾಮಗ್ರಿಗಳು ಬಹಳವಾಗಿ ಕೂಡಿಸುತ್ತೀರಿ. ಬೆಳ್ಳಿ ಒಡವೆಗಳು, ಭಂಗಾರದ ಒಡವೆಗಳು, ರತ್ನ ಪಡಿ ನಗಗಳು, ಮುತ್ತುಗಳು, ಹವಳಗಳು, ಮುಂತಾದ ಸರಗಳು ಬಹಳವಾಗಿ ಸಂಪಾದಿಸಿ ಇದ್ದೀರಿ. ಇದಲ್ಲದೆ ಶಾಲುಗಳು, ಸಕಲಾತಿಗಳು, ಮೇಲಾದ ಒಳ್ಳೇ ಒಳ್ಳೇ ವಸ್ತ್ರಗಳು ಮುಂತಾದ್ದು ಸಂಪಾದಿಸಿ ಕೊಂಡು ಇದ್ದೀರಿ. ಹುಡುಗರ ಮ್ಯೈ ಮೇಲೆಯೂ, ಹೆಂಗಸರ ಮ್ಯೈ ಮೇಲೆಯೂ, ಬೇಕಾದಷ್ಟು ಬೆಳ್ಳಿ ಭಂಗಾರದ ನಗಗಳು ಹಾಕಿ ಇದ್ದೀರಿ. ಭೋಜನದಲ್ಲಿಯೂ ಒಳ್ಳೇ ಭೋಜನವನ್ನು ಮಾಡುವಿರಿ. ಇಷ್ಟು ಇದ್ದಾಗ್ಯೂ, ನಾವು ಬಡವರು, ನಾವು ಬಡವರೆಂದು, ಹಳೆ ಪಾಗು ಸುತ್ತಿ ಕೊಂಡು, ಹರುಕು ಜೊಗೆ ತೊಟ್ಟು ಕೊಂಡು, ಆರು ಮೊಳದ ಪಂಚೆ ಉಟ್ಟು ಕೊಂಡು, ಮಾಸಿದ ದುಪ್ಪಟಿ ಹೊದ್ದು ಕೊಂಡು,

utensils; that you acquire numbers of silver ornaments, and gold ornaments, diamond jewellery, pearls, corals and other necklaces; that you have shawls, woollen clothes, the very best garments, &c; that you lade the persons of your children, and the persons of your wives with silver and gold ornaments, as many as you wish; and that you eat of the very best. Yet with all this, "we are poor, we are poor," you cry, and go about with an old turban round your head, a tattered jacket on your back, a six cubit cloth round your loins, a dirty cloth thrown over you, and a wallet over your

ಹೆಗಲ ಮೇಲೆ ಒಂದು ಹಶಿಬೇ ಚೇಲವನ್ನು ಹಾಕಿಕೊಂಡು, ಬಹಳ ಬಡವನ ಹಾಗೆ ಕಾಣಿಸುತ್ತಾ, ತಿರುಗುತ್ತೀರಿ ಎಂದು, ನಾವು ವರ್ತಮಾನ ಕೇಳುತ್ತೇವೆ. ಈ ಮೇರಿಗೆ ಇರುವದು ನಿಜವೋ? ಸುಳ್ಳೋ? ಮರೆ ಮಾಜದೆ, ಹೇಳೈಯ್ಯಾ, ವರ್ತಕನೇ.

ಎನ್ನಲು, ಆ ವರ್ತಕನು ಮುಸಿ ಮುಸಿ[6] ನಗುವು ನಗುತ್ತಾ,

ವ. ನೀವು ಎಲ್ಲಾ ತಿಳಿದು, ನನ್ನನ್ನು ಕೇಳುತ್ತೀರಿ. ಲೋಕದಲ್ಲಿ ಚನ್ನಾಗಿ ವಿದ್ಯವನ್ನು ಕಲಿತ ಬುದ್ಧಿವಂತನು, ನಾನು ವಿದ್ವಾಂಸನು, ನಾನು ಬಹಳ ಬುದ್ಧಿವಂತನು ಎಂದು, ಎಲ್ಲರ ಮುಂದೆಯೂ ಹೇಳಿ ಕೊಂಡು, ಹುಚ್ಚನ ಹಾಗೆ ತಿರುಗುವನೋ? ಏನೂ ಅರಿಯದ ಹಾಗೆ ಸುಂಮನೆ ಇರುವನೋ? ಒಂದು ಸಾಮ್ಯ. ಎರಡನೇ

shoulder, appearing like a very poor man. Now, Mr. Merchant, tell me honestly, is this true, or is it false?

The merchant smirking, replied :—

M. You know all about it, and yet you ask me. Does any sensible, well educated man in the world, go about like a fool giving out to every body that he is a learned man, a very clever man? Or is he reserved as though he knew nothing at all? That's one illustration. The second is: If

6. Imitative of the sound of gentle laughing.

ಸಾಮ್ಯವೇನಂದರೆ, ಒಂದು ದೊಡ್ಡ ಹರಿವಿಯಲ್ಲಿ ಆಗಲಿ,
ಕೊಡದಲ್ಲಿ ಆಗಲಿ, ತುಂಬಾ ನೀರು ತುಂಬಿ, ಅಲ್ಲಾಡಿ
ಸಿದರೆ, ಸ್ವಲ್ಪವಾದರೂ ಶಬ್ದ ತೋರುವದೋ? ಸದ್ದಿ
ಲ್ಲದೆ[7] ತುಂಬಿರುವದೋ? ಅದೇ ಹರಿವಿಯಲ್ಲಾಗಲಿ,
ಕೊಡದಲ್ಲಾಗಲಿ, ಅರವಾಶಿಗೆ ನೀರು ತುಂಬಿ, ಅಲ್ಲಾಡಿಸಿ
ದರೆ, ಸದ್ದು ಬಹಳವಾಗಿ ಆಗುವದು. ಎರಡು ಸಾಮ್ಯ.
ಮೂರನೇ ಸಾಮ್ಯವೇನಂದರೆ, ಆಕಾಶ ಮಾರ್ಗದಲ್ಲಿ ಬ
ಹಳವಾಗಿ ತಿರುಗುವ ಹಂಸೆಗಳು, ದೊಡ್ಡ ಹದ್ದುಗಳು,
ಮುಂತಾದ್ದು ಹಾರಿ ಹೋಗುವಾಗ, ಸ್ವಲ್ಪವೂ ರೆಕ್ಕೆಗ
ಳು ಅಲ್ಲಾಡಿಸದೆ, ಸುಮ್ಮನೆ ಕಂಣು ನೋಟಕ್ಕೆ ಸಹ
ಕಾಣದ ಹಾಗೆ ಹೋಗುತ್ತವೆ. ಅದೇ ಮೇರಿಗೆ,[8] ಊ
ರು ಕೋಳಿಗಳು ಸ್ವಲ್ಪ ದೂರ ಹಾರ ತಕ್ಕವೂಗಳು,

you fill either a large pot or a vessel with water, quite full, and shake it, is there the least sound heard? Or is it full and without sound? If you half fill the same pot or vessel with water, and shake it, it makes a great noise. That makes two illustrations. The third illustration is: Swans, large eagles and such birds, that fly much in the air, do not move their wings in the least in flying, yet easily go quite out of sight. In like manner barn-door fowls, that can fly only a short distance,

7. ಸದ್ದು (ಶಬ್ದ) ಇಲ್ಲದೆ.
8. *i. e.* common fowls are, like them, birds, and fly.

ಕೊ ಕೊ ಕೋ ಎಂದು ಬಹಳವಾಗಿ ಕೂಗುತ್ತಾ, ಘಟ
ಘಟ ಘಟಾ ಎಂದು ರೆಕ್ಕೆಗಳ ಅಲ್ಲಾಡಿಸುತ್ತಾ, ನಾಲ್ಕಾ
ರು ಮಾರುಗಳು ಹಾರಿ, ಅಲ್ಲಿಯೇ ನೆಲಕ್ಕೆ ಬೀಳುತ್ತಾ,
ಮತ್ತು ಏಳುತ್ತಾ, ಈ ಮೇರಿಗೆ ಮಾಡುತ್ತವೆ. ಆದ್ದ
ರಿಂದ ದ್ರವ್ಯ ಉಂಟಾದವನು, ತನ್ನಲ್ಲಿ ದ್ರವ್ಯವಿಧೆ, ನಾನು
ಬಹಳ ಉಂಟಾದವನೆಂದು, ಹೇಳುವದಿಲ್ಲ. ಯಾರನ ಕಂ
ಡರೂ, ವಿನಯವಾಗಿ, ಮಿತವಾಗಿ, ಎಷ್ಟೋ ಅಷ್ಟೇ ಮಾ
ತನಾಡುತ್ತಾನೆಯೇ ಹೊರ್ತು, ಮತ್ತೆ ಹೆಚ್ಚಾಗಿ ಮಾತ
ನಾಡುವದಿಲ್ಲ. ವೆಚ್ಚದ ಸಮಯ ಬಂದರೆ, ವೆಚ್ಚಾ ಮಾ
ಡುವದರಲ್ಲಿ ರವೆಷ್ಟಾದರೂ ಹಿಂದು ಮುಂದು ನೋಡದೆ,
ಎಷ್ಟಂದರೆ, ಅಷ್ಟು ಹಣಾ ವೆಚ್ಚಾ ಮಾಡಿ, ಘನವನ್ನೂ,
ಮಾತಿನವಾಶಿಯನ್ನೂ ಸಂಪಾದಿಸುತ್ತಾನೆ. ಹಣವನ್ನು
ವೆಚ್ಚಾ ಮಾಡುವ ವಿಚಾರದಲ್ಲಿ ವಿಚಾರ ಪಡುವದಿಲ್ಲ.

cry loudly, "kŏ-kŏ-kō," flap their wings pitter-patter, fly four or six fathoms, fall to the ground, then rise again—this is their mode. So a rich man does not say, "I have wealth, I am a very rich man." When he sees any one, he speaks affably, moderately, just what is needful and no more. If he have occasion to lay out any thing, in spending he does not in the least regard the consequences, but spends just what money is required, and thus gains respect and renown. He does not grudge spending his money, nor wring his hands like a

ಹುಚ್ಚು ಹುಚ್ಚಾಗಿ ಕೈಗಳ ತಟ್ಟಿ ಕೊಂಡು, ಏನು ಮಾಡಲಿ? ಅಯ್ಯೋ, ಬಹಳ ಹಣ ಹೋಯಿತು, ಹೋಯಿತು, ಎಂದು ಹೇಳುವದು ಇಲ್ಲ. ಇದು ನಮ್ಮಂಥಾ ಬಡವರಿಗೆ ಹೇಳ ತಕ್ಕ ಸಾಮ್ಯವಲ್ಲವಯ್ಯಾ; ನಿಂಮಂಥಾ ದೊಡ್ಡ ಮನುಷ್ಯರನ್ನು ಕುರಿತು ಈ ಸಾಮ್ಯವನ್ನು ಹೇಳಿ ಇದ್ದೇನೆ.[9]

ಧೊ. ಶಾಬಾಸಯ್ಯಾ, ವರ್ತಕನೇ! ನಾನು ನಿನ್ನನ್ನು ಕುರಿತು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳಿದಿಯೋ? ನೀನು ನನ್ನನ್ನು ಕುರಿತು ಪ್ರಶ್ನೆಯೂ ನೀನೇ ಮಾಡಿ, ಉತ್ತರವೂ ನೀನೇ ಹೇಳಿ ಕೊಂಡೆಯೋ? ನೀನು ಬುದ್ಧಿವಂತನಾಗಿದ್ದೀ; ಒಳ್ಳೇ ಮಾತುಗಳು ಆಡ ಬಲ್ಲೆ.[1] ಆದರೂ ಈ ಮೇರಿಗೆ ಮಾಸಲು ಬಟ್ಟೆಗಳು ನಿನ್ನಂಥಾವನು ಹೊದ್ದು ಕೊಂಡು ಇರುವದು ನಮಗೆ ಸಮಾಧಾನವಿಲ್ಲ.

fool, crying, "What shall I do? Alas! What a deal of money has gone! has gone!"—This is not an illustration to be applied to poor people like us, Sir. I have used this illustration of great men like you.

G. Well said, Mr. Merchant! Have you answered the question I asked you? Or have you yourself put a question, and answered it yourself? You are a clever fellow; you know how to talk well. But I don't approve of a man like you being dressed in dirty clothes in this way.

9. ಇದ್ದೇನೆ.

1. for ಬಲ್ಲಿ.

ವ. ಒಳ್ಳೆದಯ್ಯಾ, ನೀವು ಹೇಳಿದ ಮೋರಿಗೆ ಆಗಲಿ. ಈ ಗ್ರಾಮದ ಬಳಿಯು ಬಂಗಲೆ ಉಂಟು; ಇಳಿದು, ಭೋಜನಾ ಮಾಡಿ ಕೊಂಡು, ಈ ದಿವಸ ಈ ಊರಿನಲ್ಲಿ ಟೆಂಕಿ ಮಾಡಿ, ನಾಳೆ ಉದಯಕ್ಕೆ ಮುಂದೆ ದಯ ಮಾಡ ಬಹುದು.

ಈ ಪ್ರಕಾರ ಹೇಳಿದ ವರ್ತಕನ ಮಾತನ್ನು ಕೇಳಿ,

ಧೊ. ನೀನು ಈ ಊರೇನೋ?[2] ಎಂದು ಕೇಳಲೂ;

ವ. ಹೌದಯ್ಯಾ, ನಾನು ಈ ಊರಿನಲ್ಲಿಯೇ ಮನೆ ಮಾಡಿ ಇಧೇನೆ. ಈ ಮುಂದಿನ ಹಳ್ಳಿಗೆ ಹೋಗಿ, ಜಾಗ್ರತೆಯಿಂದ ಬರುತ್ತೇನೆ,

ಎಂದು ಹೇಳಿದ ವರ್ತಕನ ಮಾತು ಕೇಳುತ್ತಾ, ಪ್ರ

M. Well, well, Sir; be it as you say. There is a bungalow near this village; you might stay here, take your meals, halt for to day in this village, and to morrow at sunrise proceed on your journey.

Hearing these words of the merchant, he asked,

G. Are you from this town?

M. Yes, Sir, my house is in this town. I am going to this village before us, but shall return quickly.

Hearing these words of the merchant, the

2. ಊರು ಏನೋ, expressive of doubt.

ನಹಾ ಈ ಮನುಷ್ಯನು ತನ್ನಲ್ಲಿ ಬಂದು, ಮಾತನಾಡುವ ಹಾಗೆ ತೋರುತ್ತೆ, ಎಂಬದಾಗಿ ನೆನಸುವ ದೊಡ್ಡ ಮನುಷ್ಯನನ್ನ ಕುರಿತು ಸಲಾಂ ಮಾಡಿ, ವರ್ತಕನು ಹಳ್ಳಿಗೆ ಹೊರಟು ಹೋಗಲು;

ಇಲ್ಲಿ ಈತನು ಆ ವರ್ತಕನು ಹೇಳಿದ ಬಂಗಲೇ ಬಳಿಗೆ ಬರುವ ವೇಳೆಗೆ ಎಂಟುವರೆ ಒಂಭತ್ತು ಘಂಟೆಗೆ, ಆರು ಏಳು ಘಳಿಗೆ ಆಯಿತು. ಆಗಲಾ ಬಂಗಲೆಯಲ್ಲಿ ಇಳಿದು, ಬಿಸಿಲು ಹೊತ್ತಿಗೆ ಮುಂಚಿತವಾಗಿ ತಮ್ಮ ಸ್ವಂತ ಭೋಜನದ ಪದ್ಧತೀ ಮೇರಿಗೆ ಅಶನವನ್ನು ಮಾಡಿ, ಸ್ವಲ್ಪ ಹೊತ್ತು ಪುಸ್ತಕವನ್ನು ಓದಿ, ಆ ಮೇಲೆ ಸ್ವಲ್ಪ ನಿದ್ರೆ ಮಾಡಿ, ಬಿಸಲಿನ ಬಳಲಿಕೆಯನ್ನು ಪರಿಹರಿಸಿಕೊಂಡು, ಸಾಯಂಕಾಲ ನಾಲ್ಕುವರೆ ಐದು ಘಂಟೆಗೆ,

gentleman was thinking, "It seems this man intends to come again to converse with me," when the merchant made salaam to him, and set out to the village.

Here, when the gentleman approached the bungalow mentioned by the merchant, it was half past eight or nine o'clock, that is, past six or seven Indian hours. Alighting at the bungalow, he breakfasted, according to his own custom of eating, before it grew hot, read a book for a short time, then took a nap, refreshed himself from the fatigue occasioned by the heat, and whilst he was sitting

ತಂಣಗೆ ಘಾಳಿ ಬೀಸುವ ಹೊತ್ತಿನಲ್ಲಿ, ಆ ಬಂ ಗಲೇ ಬಳಿ
ಯು ಇರುವ ಒಂದು ಬಸರೀ ಮರದ ನೆರಳಿನಲ್ಲಿ ಕುರಿ
ಚೀ ಮೇಲೆ ಕುಳಿತು ಕೊಂಡು ಇರುವ ಸಮಯದಲ್ಲಿ,
ಮೇಲೆ ಹೇಳಿದ ವರ್ತಕನು ಹಳ್ಳಿಯಿಂದ ಮನೆಗೆ ಜಾಗ್ರ
ತೆಯಾಗಿ ಬಂದು, ಸ್ನಾನ ಭೋಜನ ತೀರಿಸಿ ಕೊಂಡು,
ಒಳ್ಳೇ ಧೋತ್ರ ಉಟ್ಟು ಕೊಂಡು, ಒಳ್ಳೇ ಪಾಗು ಸುತ್ತಿ
ಕೊಂಡು, ಕಿನಖಾಬಿನ ಅಂಗರಖೆ ಹಾಕಿ ಕೊಂಡು, ಒ
ಲ್ಲಿ ಹೊದ್ದು ಕೊಂಡು, ಹುವ್ವಿನ ಹಾರಗಳು, ತುರಾಯಿ
ಗಳು, ಒಳ್ಳೇ ಫಲಫಲಾರಿ ಹಂಣುಗಳು, ತಟ್ಟೆಗಳಲ್ಲಿ ಇ
ರಿಸಿ, ತನ್ನ ಆಳುಗಳ ಕೈಲಿ ತೆಗಿಸಿ ಕೊಂಡು, ಇನ್ನು
ನಾಲ್ಕು ಜನ ತನ್ನ ಸ್ನೇಹಿತರನ್ನು ಕರೆದು ಕೊಂಡು,
ಈ ಬಂಗಲೆಗೆ ಬಂದು, ಈ ದೊಡ್ಡ ಮನುಷ್ಯನ ಕೊ

upon a chair in the shade of a waved leaf banyan tree near the bungalow, about half past four or five o'clock in the evening, the time when the cool breeze blows, the aforesaid merchant having returned quickly home from the village, finished his ablutions and meal, dressed himself in a good cloth, put on a good turban and a silk coat, and thrown a scarf over his shoulders, placed flower garlands, nosegays, and fine ripe and dried fruits on salvers, and brought them by the hands of his servants, — came with four other persons, his friends, to the bungalow, put the flower garlands

ರಳಿಗೆ ಹುವ್ವಿನ ಹಾರಗಳನ್ನು ಹಾಕಿ, ತುರಾಯಿ ಕೈಗೆ ಕೊಟ್ಟು, ಹಂಣುಗಳು ಕೊಟ್ಟು, ಸಲಾಂ ಮಾಡಿ, ಆತನ ಮಾತಿನ ಮೇರಿಗೆ ಕುಳಿತು ಕೊಂಡು, ಬಹಳ ಸಂತೋಷದ ಮಾತುಗಳು ಸಾಯಂಕಾಲದ ವರಿಗೂ ಆಡುತ್ತಾ, ಆ ಮೇಲೆ ಅಪ್ಪಣೆ ತೆಗೆದು ಕೊಂಡು, ತನ್ನ ಮನೆಗೆ ಬಂದನು.

ಆ ವರ್ತಕನು ತನ್ನ ಮನೆಗೆ ಹೊರಟು ಹೋಗಲು, ಆ ವರ್ತಕನು ಮಾಡಿದ ಉಪಚಾರಗಳನ್ನೂ, ವಿನಯವಾದ ಮಾತುಗಳನ್ನೂ, ತಕ್ಕ ಮರ್ಯಾದೆಗಳನ್ನೂ, ಈ ದೊಡ್ಡ ಮನುಷ್ಯನು ನೋಡಿದವನಾದ್ದರಿಂದ, ಮನಸ್ಸಿನಲ್ಲಿ ನೆನಸಿ, ಸಂತೋಷ ಪಡುತ್ತಾ ಇರುವ ಅಷ್ಟರಲ್ಲೇ ಸಾಯಂಕಾಲವಾಯಿತು.

ಹೊತ್ತು ಸಮುದ್ರದಲ್ಲಿ ಇಳಿಯಿತು ಎಂತಲೂ; ಹೊತ್ತು ಬಿತ್ತು ಎಂತಲೂ; ಸಂಜೆ ಆಯಿತೆಂತಲೂ; ಬಯಿಗಾ

round the gentleman's neck, gave a bouquet into his hand, presented the fruits, made salaam, took a seat at his request, talked very pleasantly until evening, then took leave, and returned home.

When the merchant had gone home, the gentleman, having witnessed the merchant's civilities, respectful conversation, and becoming politeness, was reflecting upon them with pleasure, when it became evening.

" The sun has gone down into the sea ;" " The sun has fallen ; " " It is twilight ; " " It is even-

ಯಿತೆಂತಲೂ; ದನ ಕರುವು ಮನೆಗೆ ಬರುವ ಹೊತ್ತಾಯಿತೆಂತಲೂ; ಹೊರಗೆ ಆಡುವ ಹುಡುಗರು ಮನೆಗೆ ಬಂದರೋ? ಎಂತಲೂ; ಕರುಗಳು ಇನ್ನು ಬಂದವೋ? ಬರಲಿಲ್ಲವೋ? ಎಂತಲೂ; ಎತ್ತುಗಳು ಬಂದವೋ? ಎಮ್ಮೆಗಳು ಬಂದವೋ? ಆಕಳು ಕಟ್ಟಿದಿರೇನೋ, ಬೊಂಮ್ಮಾ, ತಿಂಮಾ, ಎಂತಲೂ. ದನಗಳ ಮಂದೆ, ಎತ್ತುಗಳ ಗುಂಪು, ಎಮ್ಮೆಗಳ ಮಂದೆ, ಕುರಿಗಳ ಹಿಂಡು, ಆಡುಗಳ ಮಂದೆ, ಕುರಿ ಕರುಗಳನ್ನು ಮೇಯಿಸುವ ಹುಡುಗರ ಕೂಗುಗಳು ಬಹಳವಾಗಿ ಆ ಸಾಯಂಕಾಲದ ವೇಳೆಯಲ್ಲಿ ಕೇಳಿಸುತ್ತಾ ಇತ್ತು.

ಇನ್ನು ದನಗಳು ಮುಂತಾದ್ದು ಹೊರಗಿನಿಂದ ತಮ್ಮ ತಮ್ಮ ಮನೆಗಳಿಗೆ, ದೊಡ್ಡಿಗಳಿಗೆ ಬರುವ ದಾರಿಯಲ್ಲಿ ಎ

ing;" "It is time for the cattle to come home;" "It is time to light the lamps;" "Have the boys, who were out playing, come home." "Have the calves come, or not?" "Have the bullocks come?" "Have the buffaloes come?" "Bomma, Timma, have you tied up the cows, or not?" The noise of herds of cattle, droves of bullocks, herds of buffaloes, flocks of sheep, flocks of goats, and the shouts of the boys who tend sheep and calves,—sounded loudly in that evening time.

Also, the dust that ascended in the road by which the cattle, &c. returned to their several

ದ್ದ ಧೂಳು ಬಹಳವಾಗಿ ಈ ಸಂಜೆ ಎಂಬ ಒಬ್ಬಾಳೊ
ಬ್ಬ ಹೆಂಗಸು ತನ್ನ ಅಲಂಕಾರಕ್ಕಾಗಿ ಕುಸುಂಬೇ ಬಣ್ಣಾ
ವಾದ ಚಂದ್ರಗಾವಿಯು ಶೀರೆ ಉಟ್ಟು ಕೊಂಡು ಇದ್ಧಾಳೆ
ಯೋ? ಎನ್ನುವ ಹಾಗೆ, ಎಲ್ಲಾ ದಿಕ್ಕುಗಳಲ್ಲಿಯೂ,
ಗೋಧೂಳಿ ತುಂಬಿ, ಕಣ್ಣಿಗೆ ಅಲಂಕಾರವಾಗಿ ಕಾಣಿ
ಸುತ್ತಾ ಇತ್ತು. ಪಡುವಲು ದಿಕ್ಕಿನಲ್ಲಿ ಸಂಜೆಗೆಂಬಾರ
ಕೆಂಪಗೆ ಕಾಣಿಸಿತು. ಅದಕ್ಕೆ ಮುಂಚಿತವಾಗಿಯೇ,
ಸೂರ್ಯನ ಬಿಂಬವು ತುಂಬಾ ಕಾಣಿಸುತ್ತಾ—ಮುಪ್ಪಾಗ
ಪಾಲು ಕಾಣಿಸುತ್ತಾ—ಅರ್ಧ ಪಾಲು ಕಾಣಿಸುತ್ತಾ—ಹಾ
ಗ ಪಾಲು—ಮೂರು ವೀಸ ಪಾಲು—ಬೇಳೆ ಪಾಲು—ವೀಸ
ಪಾಲು ಸಹ ಕಾಣಿಸಿ—ಬುಡಕ್ಕೆಂದು ಮುಣಿಗಿತು. ಆ
ವೇಳೆಗೆ, ಮೊದಲು ಬರೆದ ಪ್ರಕಾರಕ್ಕೆ, ಸಾಯಂಕಾಲ
ವಾಯಿತು.

ಹೊರಗೆ ಮೇವಿಗೆ ಹೋಗಿ ಇದ್ದ ಪಕ್ಷಿಗಳು ತಮ್ಮ

houses and pens, was so abundant that one was ready to say, "Has this lady, Evening, adorned herself with a crimson dress?" Cattle-dust filled every quarter, and was beautiful to look upon. In the west appeared the crimson of evening. Before that, appeared the sun's full orb—three quarters appeared—half appeared—a quarter—three sixteenths—an eighth—a sixteenth—and, "plop," it sunk. Then, as before written, it was evening.

The birds that had gone out for food, calling

ತಮ್ಮ ಸ್ವಂತವಾದ ಕೂಗುಗಳಿಂದ ಕೂಗಿ ಕೊಂಡು, ಬಹಳ ಜಾಗ್ರತೆಯಿಂದ ತಮ್ಮ ತಮ್ಮ ಮರದ ಮೇಲೆ ಇರುವ ಗೂಡುಗಳಿಗೂ; ಗೋಡೇ ಸಂದುಗಳಲ್ಲಿರುವ ಗೂಡುಗಳಿಗೂ; ಮರಗಳ ತೊರ್‍ರೆಯಲ್ಲಿರುವ ಗೂಡುಗಳಿಗೂ; ಸಣ್ಣ ಗಿಡಗಳಲ್ಲಿರುವ ಗೂಡುಗಳಿಗೂ; ಮನೇ ಸೂರುಗಳಲ್ಲಿ, ವಸಾರೆಗಳಲ್ಲಿ, ವಾರಪಾಕೆಗಳಲ್ಲಿ, ಕೈಸಾಲೆಗಳಲ್ಲಿ, ಕಂಭಗಳ ತಾಬೆಗಳಲ್ಲಿ, ನೀರು ದೋಣಿಗಳಲ್ಲಿ, ಬಿಲ್ಲೇ ಮನೆಗಳಿಗೆ ಹಾಕಿ ಇರುವ ಬಿದುರು ಬೊಂಬಿನ ಸರಗಳ ಟೊಳ್ಳುಗಳಲ್ಲಿ ಸಹ ಇರುವ ಗೂಡುಗಳಿಗೆ ಬಂದು, ತಾವು ತಾವು ತಂದು ಇರುವ ಮೇವುಗಳನ್ನು, ಕಂಣುಗಳು ತೆರೆಯದೆ, ರೆಕ್ಕೆಗಳು ಇನ್ನು ಹುಟ್ಟಲೇ ಹುಟ್ಟದೆ, ಹುಟ್ಟಿ ಇದ್ದಾಗ್ಯೂ, ಬಲಿಯದೆ, ಬಲಿತು ಇದ್ದ

with their several notes, returned with all speed to their nests in the trees, to nests in the chinks of walls, to nests in the hollow of trees, to nests in bushes, to nests in the eaves of houses, in verandahs, in sheds, in porticoes, in the cornices of pillars, in water spouts, and in the hollows of the bamboo rafters of tiled houses ; and put the food, which they had brought, into the mouths of their young ones, which had not yet opened their eyes ; which as yet had no wings ; or if they had, were not yet grown ; or which, though grown, were not

ರೂ, ಹಾರುವದಕ್ಕೆ ಇನ್ನು ಬಲವಿಲ್ಲದೆ, ಗೂಡುಗಳಲ್ಲಿಯೇ ಇದ್ದು ಕೊಂಡು, ತಂದೆ ತಾಯಿಗಳಾದ ಪಕ್ಷಿಗಳು ಬರುವ ಮಾರ್ಗವನ್ನು ಮನಸ್ಸಿನಲ್ಲಿ ಎದುರು ನೋಡುತ್ತಾ, ಸಮೀಪಕ್ಕೆ ಕೂಗುತ್ತಾ, ಬಂದ ತಂದೆ ತಾಯಿಗಳ ಧ್ವನಿಯನ್ನು ಕೇಳಿ, ಬದಲಾಗಿ ಕೀಚರಿ ಪಾಚರಿ ಕಿಲ ಕಿಲ ಕುಕುಕೂ, ಕುಕು ರುರು ಕುಕುರೂ, ಎಂದು, ಕೂಗುತ್ತಾ, ಗೂಡುಗಳ ಬಾಗಿಲುಗಳಿಗೆ ಮೊಗಗಳನ್ನಿಟ್ಟು ಕೊಂಡು, ಕೂಗುವ ಮಱಿಗಳಿಗೆ ಬಾಯಿಯೊಳಗೆ ಮೇವು ಇಡುತ್ತಾ, ಮಱಿಗಳ ಚಿಕ್ಕ ಚಿಕ್ಕ ಪುಟ್ಟು ಪುಟ್ಟು ಮೊಗಗಳಲ್ಲಿ ತಂದೆ ತಾಯಿಗಳಾದ ಪಕ್ಷಿಗಳು ತಮ್ಮ ಮೊಗಗಳನ್ನಿಟ್ಟು, ಮುದ್ದಿಸುವ ಹಾಗೆಯೂ, ಲಾಲಿಸುವ ಹಾಗೆಯೂ, ಸಂತೋಷ ಪಡುತ್ತಾ, ಸಂಗಡಲೇ ಮೇವು ಮೇದ ಮಱಿಗಳನ್ನು ತಮ್ಮ ರೆಕ್ಕೆಗಳಲ್ಲಿ ಹೊದಿಗಿಸಿ ಕೊಂಡು, ಅವುಗಳಿಗೆ ಸಂತೋಷವಾಗುವ ಹಾಗೆಯೂ,

yet strong enough for flight; but remained still in their nests; and, anticipating the road by which the parent birds would return, put their faces to the doors of the nests, and hearing the voice of the parent birds calling at hand, answered, twittering, "kíchari páchari, kila-kila, ku-ku-kú, ku-ku, ru-ru, ku-ku-rū." The parent birds put their faces into the wee, wee, little faces of their young ones, rejoiced as if kissing and caressing them, then covered the fed young ones with their wings, and sitting upon them to soothe and send them

ನಿದ್ದೆ ಬರುವ ಹಾಗೆಯೂ, ಮಾಡುತ್ತಾ, ಕುಳಿತು ಕೊಂಡು, ಈ ಗಂಡು ಹೆಂಣು ಪಕ್ಷಿಗಳು ಎರಡುನ್ನೂ ಸಮೀಪದಲ್ಲಿಯೇ ಒಂದರ ಕೊರಳಿನ ಮೇಲೆ ಒಂದರ ಕೊರಳು ಇಟ್ಟು ಕೊಂಡು, ಸುಖದಲ್ಲಿ ನಿದ್ರೆ ಮಾಡುತ್ತಾ ಇದ್ದವು.

ಇಲ್ಲಿ ಊರಿನವರು ಮನೆಗಳಲ್ಲಿ ರಾತ್ರಿ ಅಡಿಗೆಯನ್ನು ಮಾಡುವವರೂ, ಮಾಡಿದ ಅಡಿಗೆಗಳನ್ನು ಭೋಜನಾ ಮಾಡುವವರೂ, ಶೀ ನೀರು ಕೊಡಮ್ಮಾ, ತಂಗೀ, ಅಕ್ಕಾ, ಅಮ್ಮಾ, ಅವ್ವಾ, ಅತ್ತಿಗೆ, ಮಗೂ, ಎಂದು ಕೇಳುವ ಗಂಡಸರುನ್ನೂ, ಕೈ ಕಾಲು ತೊಳಿಯುವದಕ್ಕೆ ನೀರು ಕೊಡಿ ಎಂಬದಾಗಿಯೂ, ಸ್ವಲ್ಪ ಬಿಸಿ ನೀರು ಇಟ್ಟು ಕೊಟ್ಟರೆ, ಕುಡಿಯ ಬೇಕೆಂಬದಾಗಿಯೂ ಹೇಳುವವರುನ್ನೂ—

to sleep, the cock and hen birds close together, and resting on each other's necks, were soundly sleeping.

The towns-people in their houses, some preparing supper; some eating the supper prepared; some of the men asking, "Mistress," "little sister," "elder sister," "mother," "grandmother," "sister-in-law," "child, give me some good water;" others calling, "give me water to wash my hands and feet; set on a little warm water and give me, I want to drink."

ಬಿಸಿ ನೀರು ಈಗ ಯಾತಕ್ಕೆ ಕುಡಿಯ ಬೇಕು?

ದಾಹವಾಗುತ್ತೆ.

ದಾವರವಾದರೆ, ಭೋಜನಾ ಮಾಡಿ, ಸ್ವಲ್ಪ ನೀರು ಕುಡಿದರೆ, ದಾಹ ನಿಲ್ಲುವದು. ಹಗಲೆಲ್ಲಾ ಬಿಸಲಲ್ಲಿ ತಿರುಗುವದಕ್ಕೆ ದಾಹವಾಗುತ್ತೆ. ನಾಳೆಯಿಂದ, ಬೆಳಗ್ಯೆ ಹೊರಟು, ಬಿಸಲಿಗೆ ಮುಂಚಿತವಾಗಿಯೇ ಮನೆಗೆ ಬರ ಬೇಕು. ಆಚೆ ಬಿಸಲು ತಗ್ಗಿಸಿ ಕೊಂಡು, ಪುನಹಾ ಹೊರಗೆ ಹೊರಡ ಬೇಕು. ಈ ಮೇರಿಗೆ ಮಾಡದೆ, ಬಿಸಲಿನಲ್ಲಿಯೇ ತಿರುಗಿದರೆ, ನೀರಡಿಕೆ ಆಗುತ್ತೆ. ನೀರಡಿಕೆ ಆದ ಹಾಗೆ ನೀರು ಕುಡಿಯುತ್ತಾ, ಕುಡಿಯುತ್ತಾ, ರಾತ್ರಿ ಮಲಗಿ ಇದ್ದರೆ, ಬೆಳಗ್ಯೆ ಮೈ ಭಾರವಾಗುತ್ತೆ; ಅದೇ ಉಪದ್ರವಕ್ಕಾಸ್ಪದವಾಗುತ್ತೆ,

"Why do you want to drink warm water now?"

"I am thirsty."

"If when you are thirsty, you first eat, and then drink a little water, your thirst will cease. Going about all day in the sun makes you thirsty. From to morrow, you must go out early, and come home before the sun is hot; then wait until the heat is abated, and go out again. If you don't do this, but go about in the sun, you will get thirsty. And if you lie down at night after repeatedly drinking to allay continual thirst, in the morning you will be weary all over, and this will cause disease."

ಎಂದು, ಒಬ್ಬರಿಗೊಬ್ಬರು ಮಾತನಾಡಿಕ್ಕೊಂಡು ಇರುವರು.

---

ಸ್ವಲ್ಪ ನಶ್ಯಾ ಕೊಡಿರ್ರೈಯ್ಯಾ.

ನನ್ನಲ್ಲಿ ನಶ್ಯ ಒಳ್ಳೇದಲ್ಲ; ಬೇಕಾದರೆ, ಕೊಡುತ್ತೇನೆ. ನಿಮ್ಮಲ್ಲಿ ಒಳ್ಳೇ ನಶ್ಯವಿರ ಬಹುದು. ಡಬ್ಬಿ ಎಲ್ಲಿ ಇಟ್ಟಿದ್ಧೀರಿ?

ನಾನೇ ತೆಕೊಂಡು[3] ಬಂದು, ನಶ್ಯ ಮಾಡುತ್ತೇನೆ; ಕೊಡುತ್ತೇನೆ.

ಹಾಗೆ ಮಾಡಿ, ಸ್ವಾಮಿ.

ನಿಮ್ಮ ನಸ್ಯ ಇನ್ನೊಂದುವೇಳೆ ಕೊಡುವಿರಂತೆ; ನನ್ನಲ್ಲಿ ಇರುವ ನಸ್ಯವನ್ನೇ ಮಾಡಿ, ಹಾಕ್ಕೊಂಡು, ನೋ

Thus they conversed together.

---

"Give me a little snuff, Sir."

"My snuff is not good; but if you wish, I'll give you some. I dare say you have good snuff. Where have you put the snuff box?"

"I'll bring it, prepare the snuff, and give it you."

"Do so, Sir.

I suppose you'll give your snuff another time; prepare my snuff now; take and try it. I put

3. ತೆಗೆದು ಕೊಂಡು.

ಡಿ, ನನ್ನ ಅಂಗರೇಖೆ ಕಿಶೆಯಲ್ಲಿ ಡಬ್ಬೀ ಸುಂಣದ ಕಾಯಿ ಎರಡೂ ಇಟ್ಟು ಇದ್ಧೇನೆ; ತೆಗದು ಕೊಳ್ಳಿ.

ಸುಂಣ ನನ್ನಲ್ಲಿಯೇ ಇಧೆ; ನಡುವಿನಲ್ಲಿ ಶಿಕ್ಕಿಸಿ ಕೊಂಡು ಇಧೇನೆ.

ಅದು ಒಳ್ಳೇ ಸುಂಣವಲ್ಲವೇನೋ?

ಸರಿ.[4] ಈ ಹೊತ್ತು ಹಾಕಿದ ಹೊಸ ಸುಂಣ.

ಆದರೆ ಸುಂಣ ಕೊಂಚವಾಗಿ ಹಾಕಿ, ನಸ್ಯಾ ಚನ್ನಾಗಿ ಮಾಡಿ; ಕೆಡಿಸ ಬೇಡಿ.

ಇಲ್ಲ; ಚನ್ನಾಗಿ ಮಾಡುತ್ತೇನೆ.

---

ಈ ದಿವಸ ಕಚೇರಿಯಲ್ಲಿ ಏನು ಆಡಳಿತ?

both the snuff box and chunam box into my jacket pocket. Get them."

"I've got chunam myself, I have it tucked in my waist."

"I suspect it isn't good chunam."

"Of course not!—It's new chunam, put in to day."

"Then put only a little chunam, and make the snuff well; don't spoil it.

"No; I'll make it well."

---

"What news in the cutcherry to day?"

4. Said ironically.

ಈಗ ಇರುವ ಧೊರೆಯೇ ಇನ್ನು ನಾಲ್ಕು ವರುಷವೋ, ಆರು ವರುಷವೋ, ಕಾಯಮಾಗಿ ಇರುತ್ತಾನಂತೆ.

ಆ ಮೇರಿಗೆ ಆದರೆ, ಸುರಕ್ಷಿತ.

ಹೌದು, ಒಳ್ಳೇ ಸರದಾರ; ಜನಗಳ ಕಷ್ಟವರಿತವನು; ಇವನು ಇಷ್ಟು ಮಟ್ಟಿನ ಮನುಷ್ಯನೆಂದು ತಿಳಿಯ ತಕ್ಕವನು; ದಯವುಳ್ಳವನು; ಮಕ್ಕಳಂದಿಗರನ್[5] ಕಂಡರೆ, ಬಹಳ ವಿಶ್ವಾಸ. ತಾನು ಮಕ್ಕಳವಂದಿಗನಾದ್ದರಿಂದ, ಜನಗಳಲ್ಲಿ ಆ ಮೇರಿಗೆ ದಯೆಯೂ, ವಿಶ್ವಾಸವೂ ಇಟ್ಟು, ನಡಿಸಿ ಕೊಂಡು ಬರುತ್ತಾನೆ. ಇದಲ್ಲದೆ, ಬಹಳ ಓದಿದವನು; ಬಹಳ ದಿವಸದಿಂದ ಈ ದೇಶದಲ್ಲಿಯೇ ಇದ್ದವನು; ಜನರ ಮರ್ಯಾದೆಗಳನ್ನು ಚನ್ನಾಗಿ ತಿಳಿದು ಇದ್ಧಾನೆ.

"They say that our present master will remain four, or perhaps six years more."

"If so, it is well."

"Yes, he's a good ruler; one who knows the difficulties of the people. He is able to discern a man's capacity; a benevolent man. If he sees persons who have large families, he is very kind to them. Being himself a family man, he thus treats the people with benevolence and kindness. Besides, he is a well read man; he has been a long time in this country, and is well acquainted with the customs of the people."

5. acc.

ಹೌದು, ಚಾಕರಿಯಲ್ಲಿ ರವೆಷ್ಟು ತಪ್ಪಲಿ; ಚಾಕರಿಯೇ ತೆಗೆದು ಹಾಕಿ ಬಿಡುತ್ತಾನೆ.

ಆ ಮೇರಿಗೆ ಚಾಕರಿ ತೆಗೆಯುವದು ಇಲ್ಲ. ಒಂದಾವರ್ತಿ ಏನಾದರೂ ತಪ್ಪಿದರೆ, ಹೀಗಲ್ಲ, ಹೀಗೆ ನಡಿಯಬೇಕೆಂದು, ಹೇಳುತ್ತಾನೆ. ಅದರ ಮೇಲೆಯೂ ತಪ್ಪಿನಡದರೆ, ಜುಲುಮಾನೆ ಮೊಕರೂರು ಮಾಡುತ್ತಾನೆ. ಜುಲುಮಾನೆಯೂ ಕೊಟ್ಟು, ಜಾಗ್ರತೆಯಾಗಿ ಕೆಲಸ ಕಾರ್ಯಗಳ ನೋಡದೆ ಸುಸ್ತಿಯಾದವನು ನಮ್ಮಲ್ಲಿ ಚಾಕರಿಗೆ ತಕ್ಕನವನಲ್ಲ ಎಂಬದಾಗಿ, ಇಸ್ತಿಹಾರು ಕೊಟ್ಟು ಇದ್ಧಾನೆ. ಆ ಇಸ್ತಿಹಾರು ಕೇಳಿ, ಎಲ್ಲಾ ಜನರು ತಮ್ಮ ತಮ್ಮ ಕೆಲಸದಲ್ಲಿ ಬುದ್ಧಿಮಂತರಾಗಿಯೇ ಇದ್ಧಾರೆ ಹೊರ್ತು, ಮೈ ಮರೆತು, ಒಬ್ಬನೂ ಇರುವದಿಲ್ಲ. ಈ ಮೇರಿಗೆ ಸಕಲ ಜನಗಳನ್ನು ಕೈಕೆಳಗೆ ಇಟ್ಟು ಕೊಂಡು, ತರ

"Yes! make a little mistake in your work, and he takes your situation from you."

"He won't deprive one of his situation in that way. If for once he make any mistake, he says, 'Not so; you must do thus.' If after that one make mistakes, he imposes a fine. He has proclaimed that, "any one who, after being fined, is idle, and does not diligently attend to his duties, is not fit for my service." Hearing the proclamation, all the people are quick at their work; not one forgets himself. In this way he has all the people under him, instructs those who have

ಬೇತು ಇಲ್ಲದ ಜನಗಳನ್ನು ತರಬೇತು ಮಾಡಿ, ಅವರ
ವರಿಗೆ ತಕ್ಕ ಕೆಲಸಗಳನ್ನು ನೇಮಿಸುತ್ತಾ, ಎಲ್ಲರಿಗೂ
ಜೀವನಗಳೂ ಬಹಳವಾಗಿ ಮಾಡಿಸಿ ಕೊಟ್ಟು ಇದ್ದಾನೆ.
ಮಹಾ ರಾಯ![6] ಒಳ್ಳೇ ಧೊರೆ! ಇನ್ನೂ ಹತ್ತು ವರುಷ
ಈ ಸರದಾರನೇ ನಮ್ಮ ಶೀಮೇಲಿ ಇದ್ದರೆ, ಜನಗಳು
ಬಹಳ ಸೌಖ್ಯ ಪಟ್ಟಾರು. ದೇವರು ಹಾಗೆ ಮಾಡಿಸ್ಯಾ
ರೆಂದು,

ನಾನಾ ಪ್ರಕಾರ ಮಾತು ಕಥೆಗಳು ಮಾತನಾಡುವಂ
ಥಾ ಸ್ನೇಹಿತರು ಒಬ್ಬರನ್ನೊಬ್ಬರು ಉಪಚಾರದಿಂದ ರಾ
ತ್ರಿ ಭೋಜನಕ್ಕೆ ಎಬ್ಬಿಸಿ, ಭೋಜನಗಳನ್ನು ಮಾಡಿ, ಎ
ಲೆ, ಅಡಿಕೆ, ಹುವ್ವು, ಗಂಧ, ಮುಂತಾದ ಉಪಚಾರಗಳ
ನ್ನು ಒಬ್ಬರಿಗೊಬ್ಬರು ಮಾಡುತ್ತಾ, ಮತ್ತು ಕೆಲವು ಹೊ
ತ್ತು ಪುಸ್ತುಕಗಳ ಓದುತ್ತಾ, ಅರ್ಥಗಳು ಹೇಳುತ್ತಾ,

not been instructed, appoints to each suitable employment, and has given to all good livelihoods. He is a great man! An excellent master! If this gentleman remain ten years longer in our country, the people will be very happy. God grant it may be so.

After conversing thus on various subjects, the friends politely called each other to supper, and having supped, presented to each other betel leaf, areka nut, flowers, sandal and other civilities. Some then spent a while in reading books, ex-

6. *lit.* great king.

ಕೇಳುತ್ತಾ, ಇರುವವರು ಕೆಲವರೂ;—ತಂಬೂರಿಗಳು, ವೀಣೆಗಳು, ಮುಂತಾದ ಶ್ರೇಷ್ಟವಾದ ವಾದ್ಯಗಳು ಬಾರಿಸುತ್ತಾ, ಆ ಶ್ರುತಿಗೆ ಸರಿಯಾಗಿ ಸ್ವರದಿಂದಲೂ ರಾಗದಿಂದಲೂ ರಚನೆಯಾಗಿ ಸಂಗೀತವನ್ನು ಹಾಡುತ್ತಾ, ಆ ಶಾಸ್ತ್ರವನ್ನು ತಿಳಿದ ವಿದ್ವಾಂಸರು ಆ ಹಾಡಿಕೆಯಲ್ಲಿ ಹೆಚ್ಚು ಕಡಿಮೆ ಆದ ಕಡೆಯಲ್ಲಿ ಸಂಗೀತಗಾರರನ[7] ಕೇಳುತ್ತಾ, ಅದಕ್ಕೆ ಸಮಾಧಾನವಾಗಿ ಶಾಸ್ತ್ರ ಮರ್ಯಾದೆಯಿಂದ ಹೇಳ ತಕ್ಕ ಜನಗಳೂ ಕೆಲಬರೂ;—ಶಾಸ್ತ್ರ ತಿಳಿಯದೆ ರೂಢಿಯಿಂದ ಸಮಾಧಾನ ಹೇಳಿದರೆ, ಅದು ಹಾಗೆ ಅಲ್ಲ, ಹೀಗೆ ಇರ ಬೇಕೆಂದು, ನಿಶ್ಚಯ ಪಡಿಸಿ, ಹೇಳುವ ವಿದ್ವಾಂಸರ ಮಾತುಗಳನ್ನು ಸಮ್ಮತಿಸಿ, ಅದೇ ಮೇರಿಗೆ ಹಾಡಿಕೆ ಹಾಡುವ ಸಂಗೀತಗಾರರು ಕೆಲಬರೂ;—

plaining and asking the meaning. Some played upon guitars, lutes, and other favorite instruments; and tuning their voices to the instruments, sweetly sang songs. Those who were skilled in the art, questioned the singers where a mistake occurred in the singing; whilst others satisfied them by the rules of the art. If any, ignorant of the art, answered simply from habit, the skilled ones assured them, "not so, this is the way." To these the singers assented, and sang as they directed.

7. acc.

ಕೆಲ ಜನಗಳು ಶಾಸ್ತ್ರ ಪಾಠಗಳನ್ನೋದುತ್ತಾ,[8] ಬೆಳಿಗ್ಗೆ ಓದಿದ ಪಾಠವನ್ನು ಚಿಂತನೆ ಮಾಡುತ್ತಾ ಇರುವವರು ಕೆಲವರು;–ಹುಡುಗರು ಬೆಳಗಿನಿಂದ ಬರೆದದ್ದೇನು?[9] ಓದಿದ್ದೇನು? ಉಪಾಧ್ಯನಿಗೆ ಒಪ್ಪಿಸಿದ್ದೇನೆಂದು, ಪರಿಕ್ಷೆಗಳು ತೆಗೆದು ಕೊಳ್ಳುವ ತಂದೆಗಳು, ತಾತಂದಿರು, ಅಂಣಂದಿರು, ಭಾವಂದಿರು, ಮಾವಂದಿರು, ಚಿಕ್ಕಪ್ಪಂದಿರು, ದೊಡ್ಡಪ್ಪಂದಿರು, ಮುಂತಾದವರು;–ಕೆಲವರು ಹುಡುಗರು ಹೇಳುವ ಪಾಠಗಳನ್ನೂ, ಲೆಖ್ಖಗಳನ್ನೂ, ಪದ್ಯಗಳನ್ನೂ, ಶ್ಲೋಕಗಳನ್ನೂ, ಶ್ಲೋಕಾರ್ಥಗಳನ್ನೂ ಕೇಳಿ, ಅದರಲ್ಲಿ ಹೆಚ್ಚು ಕಡಿಮೆ ಆದರೆ, ತಿದ್ದಿ ಹೇಳುವರು;–ಕೆಲವರು ತಿದ್ದುವದಕ್ಕೆ ತಿಳಿಯದೆ, ಸುಮ್ಮನೇ–ಚನ್ನಾಗಿ ಹೇಳುತ್ತಾನೆಂದು, ಮನಸ್ಸಿನಲ್ಲಿ ನೆನಸುವರು;–

Some read the shastras; others studied what they had read in the morning. Fathers, grandfathers, brothers, brothers-in-law, fathers-in-law, uncles, elder uncles, and others examined the boys, what they had written since morning; what they had read; what they had delivered to the schoolmaster. Some heard the boys repeat their lessons, accounts, stanzas, verses, meaning of the verses; and if there were any mistakes, corrected them. Others, who could not correct, were quietly thinking that they said their lessons very well.

8. ಪಾಠಗಳನ್ನು ಓದುತ್ತಾ.

9. ಬರೆದದ್ದು ಏನು.

ಕೆಲವರು ಎಷ್ಟಾವರ್ತಿ ತಿದ್ದಿ ಹೇಳಿದಾಗ್ಯೂ, ನೆಟ್ಟಗೆ ಹೇಳುವದಕ್ಕೆ ಬಾರದೆ ಇರುವ ಹುಡುಗರನ್ನು ದಂಡಿಸುವರು. ಕೆಲವರು, ಈ ಹುಡುಗನು ದಂಡ ಸಾಧ್ಯನಲ್ಲ; ದಂಡಿಸಿದಷ್ಟು ಮತ್ತೂ ಮೊಂಡುತನಕ್ಕೆ ಬೀಳುತ್ತಾನೆ; ಗುಣ ಸಾಧ್ಯನಾಗಿ ತೋರುತ್ತಾನೆಂದು, ನಯದಿಂದ—ಏನಪ್ಪಾ? ಏನಣ್ಣಾ? ನಿನ್ನ ಜೊತೆ ಹುಡುಗರು ಎಂಥಾ ಚನ್ನಾಗಿ ಓದುತ್ತಾರೆ! ಎಂಥಾ ಚನ್ನಾಗಿ ಬರೆಯುತ್ತಾರೆ! ನೀನು ಈ ಮೋರಿಗೆ, ಎಷ್ಟು ಸಾರಿ ಹೇಳಿದಾಗ್ಯೂ, ತಪ್ಪುಗಳೇ ಹೇಳುತ್ತೀ; ನಿನಗೆ ಇನ್ನೂ ಯಾವಾಗ್ಯಪ್ಪಾ[1] ಬುದ್ಧಿ ಬರುವದು? ನೀನು ವಿವೇಕವಂತನಾಗುವದೆಂದಿಗೆ?[2] ನಾಳೆ ಮಾಘ ಮಾಸದಲ್ಲಿ[3] ಮದಿವೆ ಆಗ ಬೇಕಲ್ಲಾ? ಹೆ

Some punish the boys who cannot say their lessons properly, how often so ever they correct them. Others thinking, "This boy will not be cured by punishment; the more he is punished the more stupid he will become; he is one who yields to reason," speak kindly to him: "How is this, Sir? How is this, brother? How well your class-mates read! How well they write! But you, though told never so often, make nothing but blunders in this way. How long yet, Sir, before you get sense? When are you going to be wise? Next Māgha you are to be married, you know.

1. ಯಾವಾಗೈ ಅಪ್ಪಾ. 2. ವಿವೇಕವಂತನು ಆಗುವದು ಎಂದಿಗೆ (dat. of ಎಂದು.)
3. The month commencing towards the end of January.

ಣ್ಣು ಕೊಡುತ್ತೇನೆಂದು, ದಿಬ್ಬೂರಿಂದ ಸುಬ್ಬೈಯ್ಯನವ
ರು ಒಬ್ಬಾನೊಬ್ಬ, ಮನುಷ್ಯನ ಕೈಲಿ ಮಹಾನೌಮಿ[4]
ಹಬ್ಬದಲ್ಲಿ ಅಬ್ಬರವಾಗಿ ಹೇಳಿ ಕಳುಹಿಸಿ ಇದ್ಧಾರೆ. ಏ
ನೋ, ಸಾಲವೋ, ಸೋಲವೋ[5] ಮಾಡಿ, ಮದಿವೇ ಮಾ
ಡುತ್ತೇನೆ; ಮದಿವೆ ಆಗಿ, ಹೆಂಡತಿ ಮಗ್ಗಲಿಗೆ ಬಂದ ಮೇ
ಲೆ, ನೀನು ಓದು ಕಲಿಯುವದು ನಿಜವೋ? ಏನು ಕಲಿ
ತಾಗ್ಯೂ, ಈಗಲೇ ಕಲಿತು ಕೊಂಡರೆ, ಬುದ್ಧಿವಂತನಾ
ಗುತ್ತೀ. ನಮ್ಮ ಅಳಿಯ ಬಹಳ ಬುದ್ಧಿವಂತನು; ಚ
ನ್ನಾಗಿ ಓದುತ್ತಾನೆ, ಬರಿಯುತ್ತಾನೆ ಎಂದು, ನಿಮ್ಮ ಅತ್ತೆ
ಮಾವಂದಿರು ಎಲ್ಲಾ ಜನರ ಸಂಗಡಲೂ ಹೇಳಿ ಕೊಂ
ಡು, ಸಂತೋಷ ಪಡುತ್ತಾರೆ. ಓದು ಬಾರದೆ, ಬರಹಾ

At the Maha-navami festival, Mr. Subbayya of Dib-būr eagerly sent by a certain man to say that he would give you a wife. Some how or another, by borrowing and getting into debt, I will get you married. But are you likely to learn to read after you are married and your wife comes to live with you? Whatever you learn, if you learn now, you will become clever. Your father and mother-in-law will be glad to be able to say to every body, "our son-in-law is very clever; he reads and writes well." But if you can neither read nor write, and they are ignorant of it

4. The first day of the Dusserah. 5. A pleonasm.

ಬಾರದೆ ಇದ್ದರೆ, ಮುಂಚಿತವಾಗಿ ತಿಳಿಯದೆ ಇದ್ದರೆ, ಹೆ
ಣ್ಣು ಕೊಟ್ಟು, ಮದಿವೆ ಮಾಡಿ ಬಿಡುತ್ತಾರೆ. ಆ ಮೇಲೆ
ನಿನಗೆ ಏನೂ ಬಾರದೆ, ನಿರಕ್ಷರ ಕುಕ್ಷಿಯಾಗಿ ಇರುವ
ವರ್ತಮಾನ ಪರಸ್ಪರವಾಗಲಿ, ಯಾವದಾದರೂ ಪರಿಕ್ಷೇ
ಮಾಡಿದಾಗಾಗಲಿ, ತಿಳಿಯುತ್ತೆ. ತಿಳಿಯುವದುನ್ನು,[6] ಅ
ಳಿಯನ ಭವಿಷ್ಯ ಇಷ್ಟೇನೇ? ನಾವೇನೋ ಅಂದು ಕೊಂ
ಡು ಇದ್ದೆವು; ಶುದ್ಧ ಧಡ್ಡನಾಗಿದ್ದಾನೆ; ನೀರು ಹೊರುವ
ದಕ್ಕೆ ಸರಿ; ಆ ಕೆಲಸಕ್ಕಾದರೂ ಬಲವಂತನಾಗಿರ ಬೇ
ಕು[7] ಎಂದು, ಹೇರಳ ಮಾಡುತ್ತಾರೆ. ಈ ಮೇರಿಗೆ ನಾ
ನಾ ವಿಧ ನಯ ಭಯಗಳಿಂದ ಹುಡುಗರಿಗೆ ಬುದ್ಧಿ ಕಲಿ
ಸುವರು.

ಕೆಲವರು ಈ ಪ್ರಕಾರ ರಾತ್ರಿ ಹತ್ತು ಹನ್ನೆರಡು ಘ

beforehand, they will give you a wife and marry you. And then, either by hearing from others, or by examining you in something or another, they find that you are an ignoramus and know nothing at all. On discovering this, they will despise you, saying, "Is this all our son-in-law's ability? What did not we expect? He turns out to be a great blockhead. He is only fit for carrying water; and even for that work he must be strong." In this way, by various persuasions and intimidations they taught their boys.

Some thus spent the night till half past ten or

6. ತಿಳಿಯುವಾಗಲೇ.

7. Which he is not.

ಳಗೇ ವರಿಗೂ[8] ಕಾಲಕ್ಷೇಪ ಮಾಡುತ್ತಾ, ಭಗವನ್ನಾಮ
ಸ್ಮರಣ[9] ಪೂರ್ವಕವಾಗಿ ನಿದ್ರೆಯನ್ನು ಮಾಡುವದಕ್ಕೆ
ಶಯ್ಯಾ ಗೃಹಗಳನ್ನು ಪ್ರವೇಶಿಸುವ ಬ್ರಾಂಹ್ಮಣ ಜನಗ
ಳ ಸಲ್ಲಾಪ ಧ್ವನಿಗಳು ಕೇಳುತ್ತಾ,[1]

ಮತ್ತು ಅಧಿಕಾರಸ್ತರಾಗಿ ಶಿಫಾಯಿ ಪಿರಕಾ ಜನಗ
ಳಾಗಿ ಇರುವ ಬ್ರಾಂಹ್ಮರು ಮುಂತಾದವರು ಹಗಲು ತ
ಮ್ಮ ಕಾರುಬಾರುಗಳ ತೀರಿಸಿ ಕೊಂಡು, ಸಾಯಂಕಾ
ಲವಾದ ಒಂದು ಘಳಿಗ್ಗೆ ಎರಡು ಘಳಿಗ್ಗೆ[2] ಮನೆಗಳಿಗೆ
ಬಂದು, ತಮ್ಮ ತಮ್ಮ ಕುಲ ಪದ್ಧತೀ ಪ್ರಕಾರಕ್ಕೆ ಸ್ನಾ
ನ ಮಾಡ ತಕ್ಕವರು, ಮುಖಗಳ ತೊಳೆಯು ತಕ್ಕವರು,

eleven o'clock; and then was heard the familiar conversation of the brahmans, who, having first devoutly repeated the names of God, were entering their dormitories to sleep.

Brahmans and others, officers of Government, and of the military profession, having finished their business during the day, returned home at half past six or seven o'clock in the evening, and according to the practice of their respective castes, some bathe, others wash the face, some wash the

8. *i. e* ten or twelve Indian hours, of which sixty make a day. From six o'clock till twelve are fifteen hours.

9. Repeating the several names of the deities, is regarded as meritorious.

1. The sentence begins at page 64, and the final verb is at page 94. This paragraph ends the description of the clerical brahmans; the following describes the lay brahmans, Rajputs and others, who have government situations, or are soldiers.

2. See note 8.

ಕೈ ಕಾಲುಗಳು ತೊಳೆಯು ತಕ್ಕವರು, ಕೈಗಳು ಮಾತ್ರ ಮೊಣಕೈ ವರಿಗೂ ತೊಳೆಯು ತಕ್ಕವರು; ಈ ಮೇರಿಗೆ ಶುಚಿಗಳು[3] ಮಾಡಿ ಕೊಂಡು, ತಾವು ತಾವು ಕೂತು ಕೊಳ್ಳುವ ಜಾಗಗಳಲ್ಲಿ, ಮಹಡಿಗಳಲ್ಲಿ, ವಸಾರೆಗಳಲ್ಲಿ, ಕೊಠಡಿಗಳಲ್ಲಿ, ನಡವೆಗಳಲ್ಲಿ,[4] ಕುಳಿತು ಕೊಂಡು, ಬೇಕಾದ ಸ್ನೇಹಿತರುಗಳನ್ನು ಸಮೀಪದಲ್ಲಿ ಮರ್ಯಾದೆಯಿಂದ ಕೂಡಿಸಿ ಕೊಂಡು, ವಿನೋದವಾದ ಪ್ರಸ್ತಾಪಗಳು ಮಾಡುತ್ತಾ, ನಡುವೆ ನಡುವೆ ತಮ್ಮ ತಮ್ಮ ಅಧಿಕಾರಗಳಾದ ಶೀಮೇ ವಿಚಾರಣೆಗಳೂ, ಲೆಖ್ಖಾಚಾರದ ಆಡಳಿತಗಳೂ, ಕುದುರೇ ಲಾಯದ ವಿಚಾರಣೆಗಳೂ,[5] ಗೃಹಕೃತ್ಯದ ಪ್ರಸ್ತಾಪಗಳೂ, ಲೇವಾದೇವಿ ಜವಾಬ ಸ್ವಾಲುಗಳೂ, ಅರಮನೆಯ ಆಡಳಿತಗಳೂ. ಮತ್ತೂ ಆಟಗಾರ

hands and feet, others wash the arms only as far as the elbow. Thus purifying themselves, they sat down in their several sitting places—in upper stories, in verandahs, in rooms, in halls, politely assembled to them what friends they wished, and amused themselves; at intervals discussing the condition of the country under their authority; fiscal matters; stable concerns; household affairs; questions of borrowing and lending, and government topics. If players happen to come, they test

3. Ceremonial purity.
4. The lobby or passage of a native house.
5. Being cavalry soldiers.

ರು ಬಂದು ಇದ್ದರೆ, ಅವರ ವಿದ್ಯಾ ಪರಿಕ್ಷೆಗಳೂ. ಹಾಡಿಕೆ ಯುವರು ಬಂದು ಇದ್ದರೆ, ಅವರಿಂದ ಹಾಡಿಕೆ ಕೇಳಿ, ಸಂತೋಷ ಪಡುತ್ತಾ, ಇನ್ನೂ ವ್ಯವಹಾರಗಳು ಮುಂತಾದ್ದು ಎಂಟು ಹತ್ತು ಘಳಿಗೆ ಪರ್ಯಂತರ ಕಾಲಕ್ಷೇಪಾ ಮಾಡಿ, ಆ ಮೇಲೆ ಭೋಜನಾದಿಗಳು[6] ತೀರಿಸಿ ಕೊಂಡು, ಸೌಖ್ಯವಾಗಿ ನಿದ್ರಾವ್ಯಾಸಂಗಗಳಲ್ಲಿ ಪ್ರವರ್ತಿಸುವ ಜನಗಳುನ್ನೂ;—

ಮತ್ತು ವರ್ತಕರು, ವ್ಯಾಪಾರಸ್ಥರು, ಸಾಯಂಕಾಲವಾಗುವದುನ್ನು, ತಮ್ಮ ತಮ್ಮ ಅಂಗಡಿಗಳ ಮುಂದೆ ದೀಪಗಳು ಇರಿಸಿ, ಜವಳಿ ಅಂಗಡಿಗಳ ಮುಂದೆ ಮರೆಯಾಗಿ ಕಟ್ಟಿರುವ ಪರದೆಗಳ[7] ಮೇಲಕ್ಕೆ ಏರ ಕಟ್ಟಿಸಿ, ಗ್ರಂಧಿಗೆ ಅಂಗಡಿಗಳವರೆಂಬ ಫಲಸರಕು ಅಂಗಡಿಗಳವರೂ, ಕಾಯಿ ಅಂಗಡಿಯುವರೂ, ಫಲ ಫಲಾರಿ ಅಂಗಡಿಯುವರೂ, ಹುವ್ವಿನ ಅಂಗಡಿಯುವರೂ, ಎಲೆ ಅಂಗಡಿ

their skill. If singers come, they hear them sing. Also talking of lawsuits, &c. Thus they spent till half past nine or ten o'clock. After this they had supper, &c. and went comfortably to sleep.

The merchants and tradespeople, as soon as evening set in, put lamps in front of their shops, tie up the blinds that are put in front to screen the drapers' shops; apothecaries or druggists, green grocers, fruiterers, florists, rows of betel sellers &c.

6. ಭೋಜನ ಆದಿಗಳು. 7. acc.

ಸಾಲಿನವರೂ ಮುಂತಾದವರು ತಮ್ಮ ತಮ್ಮ ಅಂಗಡಿಗಳ ಮುಂದೆ ಸಾಯಂಕಾಲದ ವೇಳೆಯಲ್ಲಿ, ಚನ್ನಾಗಿ ಧೂಳು ಅಣಗುವ ಹಾಗೆ, ನೀರುಗಳು ಚಿಮಿಕಿಸಿ, ಸಾಯಂಕಾಲವಾಗುವದುನ್ನೂ, ನೆಲೆ ದೀಪಗಳು ಇಟ್ಟವರುನ್ನೂ, ಗೂಡು ದೀಪಗಳು ಇಟ್ಟವರುನ್ನೂ, ಲಾಂದರು[8] ನಾಲ್ಕಾರು ದೀಪಗಳು ಇಟ್ಟು ಇರುವವರೂ, ದೀಪ ಸ್ತಂಭಗಳ ಮೇಲೆ ದೀಪಗಳು ಇಟ್ಟು ಇರುವವರೂ; ಈ ಮೇರಿಗೆ ಅವರವರು ಅಂಗಡಿಗಳನ್ನು ಲಕ್ಷಣವಾಗಿ ಮಾಡಿಕೊಂಡು, ಶಾಲೆ, ಧೋತ್ರ ಜೋಡು, ಪಟ್ಟೆ, ಪೈಟಣಿ, ಇನ್ನೂ ಊಚು ನಗಗಳಾದ ಶಾಲು ಕಿನುಖಾಬು ಮುಂತಾದ ವಸ್ತ್ರಗಳನ್ನು ಮಾರ ತಕ್ಕ ಜನಗಳು[9] ಬಂದರೆ,

sprinkle water before their shops in the evening, in order to lay the dust well. When the evening has set in, some have fixed lamps, others elevated wicker lamps, some lanterns, some four or six lights, others lamps on stands. Thus all set out their shops, and if any dealers in women's cloths, pairs of men's cloths, women's silk cloths, silk and cotton cloths, and still more expensive articles, as shawls, *kinkhābs*, and other garments come, by

8. Eng.

9. The manufacturers bring in goods to the petta. The merchants employ servants to stand in front of their shops and call loudly for the goods they require. The manufacturers bring their goods, purchases are made, and the manufacturers dismissed before retailing begins. A good deal of business is done by brokering. A man asks the merchant to procure some article; upon which the merchant is allowed four cash to each rupee of the price. But the article is not returned to the manufacturer, even if the merchant and purchaser cannot agree; but is taken into his stock.

ತಮ್ಮ ಕಡೆ ಆಳುಗಳಿಂದ ಸಮಸ್ತವಾದ ಬಂಣಗಳ ವಸ್ತ್ರಗಳನ್ನು ಕೂಗಿಸುತ್ತಾ, ಅವರವರು ತಂದ ವಸ್ತ್ರಗಳನ್ನು ತಮಗೆ ಲಾಭಾ ಬರುವ ಹಾಗೆಯೂ, ನೇಯ್ಗವನಿಗೆ ಲುಕ್ಕಸಾನು ಬಾರದ ಹಾಗೆಯೂ, ಖರೀದಿಗಳು ಚುಕಾಯಿಸಿ, ಅದಕ್ಕೆ ತಕ್ಕ ಕ್ರಯಗಳಿಗೆ ಅರೆವಾಶಿಯೋ, ಹಾಗಪಾಲೋ, ಎಲ್ಲಾ ಕ್ರಯವೋ, ಆವಾಗ ಕೊಟ್ಟು, ಸಮಜಾಯಿಷಿ ಮಾಡಿ, ಪೈರುಗಾರರ ಕಳುಹಿಸಿ, ಸಂಗಡಲೇ ವ್ಯಾಪಾರಕ್ಕೆ ಬಂದು ಇರುವ ಜನಗಳಿಗೆ[1] ಬೇಕಾದ ನಗಗಳು ತಮ್ಮ ಮೊದಲಿಗೆ ಮೋಸವಿಲ್ಲದ ಹಾಗೂ, ಮೇಲೆ ಲಾಭಾದಾಯ ಜಾರೀಯಾಗಿಯೋ, ಹೆಚ್ಚಾಗಿಯೋ, ಬರುವ ಮಾರ್ಗ ಚನ್ನಾಗಿ ನೋಡಿ ಕೊಂಡು, ಆ ವ್ಯಾಪಾರಸ್ತರಿಗೆ ನಾನೂರು ವರಹಾದ ಜವಳಿ

means of their servants they (the shopkeepers) call out for cloths of all colours, settle the prices of the cloths they (the manufacturers) bring, so that they may get profit themselves, and the weaver not suffer loss; pay half of the proper price, or a quarter, or the whole price at the time, give them satisfaction (for payment of the remainder), and, having dismissed the dealers, immediately sell to those who have come to trade, whatever articles they want—four hundred pagodas worth of cloths—taking good care that they are not below prime

1. Small traders who get their supplies from the merchants.

ಯನ್ನು ಕೊಟ್ಟು, ಅವರ ಕೈಲಿ ಅರೆಪಾಲಿ ಆಗಲಿ, ಕಾ
ಲು ಪಾಲಿ ಆಗಲಿ, ಅವರಲ್ಲಿ ಇದ್ದ ಐವಜನ್ನು ತೆಗದು
ಕೊಂಡು, ಬಾಕಿ ನಿಂತ ಐವಜು ಇಷ್ಟು ಎಂದು ಲೆಖ್ಖಾ
ಚಾರ ಮಾಡಿ, ಆ ಬಗೆ ಐವಜಿಗೆ ಆ ವ್ಯಾಪಾರಸ್ತರ ಕಡೆ
ಯಿಂದ ನಂಬಿಕೆಯಾದ ಹೊಣೆಯೋ, ಇಲ್ಲದೆ ಅಡವೋ—
ಗುರುತು ಪರಿಚಿತಿ ಇದ್ದರೆ, ಪತ್ರವೋ, ಲೆಖ್ಖವೋ, ಪ
ಟ್ಟಿಯೋ, ಬರೆಸಿ, ಅವರ ದಸ್ತಾಯಿವಜು ಇಟ್ಟು ಕೊಂ
ಡು, ಕಳುಹಿಸಿ, ವಾಯಿದೇ ಮೇರಿಗೆ ಹಣ ಸಾಕಲ್ಯವಾ
ಗಿ[2] ವಸೂಲು ಮಾಡಿ ಕೊಂಡು, ಅವರ ದಸ್ತಾಯಿವಜು
ಅವರಿಗೆ ಹಿಂದಕ್ಕೆ ಕೊಡುವ ಜವಳೀ ಅಂಗಡಿ ವ್ಯಾಪಾ
ರದ ಗಲಿಬಿಲಿಯೂ;—

ಮತ್ತು ಫಲಸರಿಕಿನ ಅಂಗಡಿಯವರು ಬೇಕಾದ ಗ್ರಂ
ಥಿಗ ಜಿನುಸು ಚೀಲಗಳಲ್ಲಿಯೂ, ಭರಣಿಗಳಲ್ಲಿಯೂ

cost, but yield a profit less or more; receive from them what money they have,—half, or quarter of the whole amount,—reckon up the remaining balance, take from the traders a reliable security or pledge for that amount,—or if they know or be acquainted with them, a note of hand, an account, or invoice of particulars, file their voucher, dismiss them, collect the total when due, and return the voucher.—Such is the bustle of the cloth bazar.

The druggists arrange bags and boxes, full of all

2. From ಸಕಲ.

ತುಂಬಿ, ಪತ್ರಿಗೆಯ ಮೇಲೆಯೂ, ಹಲಿಗೆಗಳ ಮೇಲೆಯೂ ಇಟ್ಟು ಕೊಂಡು, ದೀಪಗಳ ಹತ್ತರ ಇಟ್ಟು ಕೊಂಡು, ಚವುಕವಾಗಿ ಕಂಬಳಿಗಳಾಗಲಿ, ಮಣೆಗಳಾಗಲಿ, ಹಲಿಗೆಗಳಾಗಲಿ, ಕೆಳಕ್ಕೆ ಹಾಕಿ ಕೊಂಡು, ಅದರ ಮೇಲೆ ಕುಂತು[3] ಕೊಂಡು, ಬೀದಿಯಲ್ಲಿ ತಮ್ಮ ತಮ್ಮ ಅಂಗಡಿಗಳ ಮುಂದೆ ಬರುವ ಜನರ ಸುಮಾರು ತಾಳಿಕೆ ನೋಡಿ, ಏನಿರೈಯ್ಯಾ? ಏನಿರಪ್ಪಾ? ಏನಿ ಸ್ವಾಮಿ? ಏನು ದ್ಯಾವರು? ಏನಪ್ಪಾ? ಬನ್ನಿರಿ, ಬನ್ನಿ, ಬಾ, ಏನು ಬೇಕೆಂಬದಾಗಿ ಕೇಳುತ್ತಾ, ಅವರು ಕೇಳಿದ ಜಿನುಸುಗಳು ತಮ್ಮಲ್ಲಿ ಇಧೆ, ನಮ್ಮಲ್ಲಿ ಇಧೆ, ಎಂಬದಾಗಿ ಹೇಳುತ್ತಾ, ಇರುವ ಜಿನುಸುಗಳು ಬೇಕಾಗಿ ಬಂದ ಜನರನ್ನು ಮರ್ಯಾದೆಯಿಂದ, ಕೂತು ಕೊಳ್ಳಿ ಎಂಬದಾಗಿ ಹೇಳುವರು.

kinds of drugs, on shelves and boards, place their lamps near them, put down camblies folded square, stools, or boards, sit upon them; and, scanning the people in the streets as they approach their shops, ask them, "Well, squire;" "Well, Sirs;" "Well, my Lord;" "Well, your Lordship;" "Well, master;"—"Honour me;" "Favour me;" "Come;" "What do you want?"—The things they ask for —"I have them," "I v'e got them," they reply, and politely invite those who have come requiring the things they have, to "be seated."

3. ಕೂತು.

ಬಂದ ಜನರು ಏನು ಶೆಟ್ರೇ? ಏನು ಶೆಟ್ಟೇ? ಏನ್ಸೈಯ್ಯಾ? ನಿಮ್ಮ ಅಂಗಡಿಯಲ್ಲಿ ಯಾಲಕ್ಕಿ, ಕಾಯಿ, ಲವಂಗ, ಪತ್ರೆ ಮುಂತಾದ ಜಿನುಸುಗಳು ಶಿಕ್ಕುವದೋ?

ಅದೆ, ಬನ್ನಿ, ಕೊಡುತ್ತೇನೆಂದು ಹೇಳುವದುನ್ನು; ಆ ಜಿನುಸುಗಳ ಕ್ರಯಗಳ ವಿಚಾರಿಸಿ, ಆಯಾ ದಿನಸುಗಳ ಮಾದರಿಗಳನ್ನು ತೆಗಸಿ, ನೋಡುತ್ತಾ,

ಯಾಲಕ್ಕಿ ದೇಶಾವಾರವಲ್ಲದ ಹಾಗೆ ತೋರುತ್ತೆ.

ಚನ್ನಾಯಿತು. ದೇಶಾವಾರವಲ್ಲದೆ ಇದೇನು? ತಿರುಪತಿ ಕಾಳೋ?[4] ಅಲ್ಲ; ಬಾಯಿಯಲ್ಲಿ ಹಾಕಿ ಕೊಂಡು, ನೋಡ ಬಹುದು.

ಯಾತಕ್ಕೆ ಬಂಣ ಸ್ವಲ್ಪ ಕಿರುದಾಗಿ ತೋರುತ್ತೆ?

The purchasers address them: "Well, Mr. Merchant;" "Well, Dealer;" "Well, Sir;" "Have you cardamums, nutmegs, cloves, mace and such things in your shop?"

On their replying, "I have; come here, Sir; I'll supply you," they enquire the price of the articles, ask for and examine samples of various things, and say,

"The cardamums don't look like foreign."

"Well, well! if they are not foreign, what are they? Are they Tripetty cardamums? nothing of the sort; you may put them into your mouth and see."

"Why is the colour a little dull?"

4. An inferior kind of cardamum grows at Tripetty.

ಬಂಣ ಕಡಿಮೆಯಾಗಿ ತೋರಿದರೇನೇ, ಅದರ ಗುಣವೂ ಪರಿಮಳವೂ ಕಿರುದಾಗದು; ಒಳ್ಳೇ ಕಾಳು; ನೋಡಿ,

ಎಂಬದಾಗಿ ತೂಕಾ ಮಾಡಿ, ತಕ್ಕ ಕ್ರಯಗಳನ್ನು ತೆಗದು ಕೊಂಡು, ಬೇಕಾದ ಜಿನುಸುಗಳನ್ನು ಕೊಡುತ್ತಾ ಇರುವರು.

ಮತ್ತು ಕಾಯಿ ಅಂಗಡಿಗಳವರು ತೆಂಗಿನ ಕಾಯಿ, ಬಾಳೇಹಂಣು, ನಿಂಬೇ ಹಂಣು, ಕಿತ್ತಳೇ ಹಂಣು, ಚಪ್ಪರ ದ್ರಾಕ್ಷ, ಅಂಜೂರ, ಹಲಸಿನಹಂಣು, ರಸ ಬಾಳೆ ಮುಂತಾದ ಹಂಣುಗಳು ಸಾಲು ಸಾಲಾಗಿ, ರಾಶಿಗಳಾಗಿ, ಗುಡ್ಡೆಗಳಾಗಿ ಇಟ್ಟು ಕೊಂಡು, ಬಂದ ಬಂದ ವ್ಯಾಪಾರಸ್ತರಿಗೆ, ಸುಮಾರರಿತು,[5] ಕ್ರಯಗಳ ಹೇಳುತ್ತಾ, ಹೇರುಗಟ್ಲೆ,[6] ಚಿಲ್ಲ್ರಯಾಗಿ ಸಹಾ ಮಾರುತ್ತಾ ಇರುವರು.

"What if the colour seem a little less than usual, the quality and fragrance are not the less for that. See, Sir, they are good seed."

With this, they weigh it out, take the proper price, andsupply whatever is wanted.

The fruiterers arrange cocoanuts, plantains, limes, oranges, grapes, figs, jack-fruits, sweet bananas, and other fruits in rows, piles, and heaps; and, fixing the price according to the quality, sell to their trader-customers both by wholesale and retail.

5. ಸುಮಾರು ಅರಿತು. 6. By the ox-load.

ಮತ್ತು ಹುವ್ವಾಡಿಗರು ಮಲ್ಲಿಗೆ, ಶಾವಂತಿಗೆ, ಇರುವಂತಿಗೆ, ಜಾಜಿ, ಸುಗಂಧರಾಜ, ಮೊಲ್ಲೆ, ಗೇದಿಗೆ, ಮರುಗ, ದವನ ಮುಂತಾದ ಹುವ್ವುಗಳನ್ನು; ಇದಲ್ಲದೆ, ಒಳ್ಳೇ ಗಂಧದ ಬಿಲ್ಲೆಗಳು, ಬುಕ್ಕಿಟ್ಟು, ಅತ್ತರು ಮುಂತಾದ ಪರಿಮಳದ ವಸ್ತುಗಳು ಬಹಳವಾಗಿ ಇಟ್ಟು ಕೊಂಡು, ಬರುವ ವ್ಯಾಪಾರಸ್ತರಿಗೆ ಅಘ್ಘವಾಗಿ ತೋರುವ ಹಾಗೂ, ತಮಗೆ ಬಹಳವಾಗಿ ಲಾಭಾ ಬರುವ ಹಾಗೂ, ಮಾರುತ್ತಾ ಇರುವರು.

ಮತ್ತು ವಿಳೇದೆಲೆ ಅಂಗಡಿಯುವರು ಪೆಂಡೆ ಪೆಂಡೆಗಳಾಗಿ ಎಲೆಗಳು ಮುಂದೆ ಇಟ್ಟು ಕೊಂಡು, ಚಿಗರೆಲೆ[7] ಬುತ್ತಿಗಳು ಕಟ್ಟುತ್ತಾ, ಸಾಧಾರಣವಾದ ಬಿಳೀ ಎಲೆಗಳು ಬೇರೆ ಬೇರೆ ವಿಂಗಡಿಸುತ್ತಾ, ನೋಡಿದವರಿಗೆ ಒಳ್ಳೇ

The florists have by them large quantities of jasmin, chrysanthemum, Arabian jasmin, the great flowered jasmin, white jasmin, the many flowered jasmin, calder leaves, mint, *davana*, and other flowers; also cakes of fine sandal, sandal powder, essence of sandal and other perfumery, which they sell so as to appear cheap to their customers, and yield an immense profit to themselves.

Also the throng of the betel sellers, who with large bundles of betel leaves before them, are tying up the young leaves into small packets; sorting out the ordinary white leaves; putting show-leaves at the back and front of each packet of

7. The best leaves.

ಎಲೇ ಅನ್ನುವ ಹಾಗೆ, ಕರೀ[8] ಎಲೆಗಳಿಗೆ ಕವಳಿಗೆ ಕವಳಿಗೆಗೂ ಕಂಣು ಎಲೆಗಳು ಹಿಂದು ಮುಂದು ಜೋಡಿಸಿ, ಕ್ರಯ ಸ್ವಲ್ಪವಾದದ್ದನ್ನು ಕೇಳಿ, ಪರಿಕ್ಷೆ ಮಾಡಿ,[9] ಬೇಕಾದ ಎಲೆಗಳನ್ನು ಕ್ರಯಕ್ಕೆ ತೆಗದು ಕೊಂಡು ಹೋಗತಕ್ಕ ಜನಗಳಿಗೆ ಅಂದಿಸಿ, ಅಂದಿಸಿ, ಕವಳಿಗೆಗಳನ್ನು ಲೆಖ್ಖಾ ಮಾಡಿ, ಕೊಡುತ್ತಾ ಇರುವ ಸಂದಣಿಯೂ;—

ಇನ್ನು ರಯಿತಾವೆ ಮಾಡುವಂಥಾವರು ದನಗಳ ಕಟ್ಟಿ ಹಾಕುತ್ತಾ, ಕುರಿಗಳನ್ನೂ ಮರಿಗಳನ್ನೂ ಮೇಕೆಗಳನ್ನೂ ದೊಡ್ಡಿಗಳಲ್ಲಿ ನಿಲ್ಲಿಸುತ್ತಾ, ಎಳೆ ಗರುಗಳ[1] ಹಸುಗಳನ್ನೂ ಎಮ್ಮೆಗಳನ್ನೂ ಬೇರೆ ಬೇರೆ ಕಟ್ಟುತ್ತಾ, ಹುಲ್ಲುಗಳ ಹಾಕಿ, ಎತ್ತುಗಳ ಉಜ್ಜಿ, ಹುಲ್ಲು ಒದರಿ ಹಾ

black leaves, that they may appear to the bystanders to be all good leaves, reaching out, counting and giving the packets to persons who, hearing the small price, examine them, and purchase what leaves they want.

Also farmers tying up their cattle; putting their sheep, lambs and goats into folds; tying up separately the cows and buffaloes that have young calves; giving them grass; rubbing down the bullocks; shaking up grass, and giving to them; then

8. The worst.

9. Suspecting the quality from the smallness of the price, yet unable to afford the best.

1. For ಕರುಗಳ.

ಕಿ, ಅಲ್ಲಿಂದ[2] ಕರೆಯುವ ದನಗಳಿಗೆ, ಎಮ್ಮೆಗಳಿಗೆ ಸಹಾ ಹುಲ್ಲು, ಹೊಟ್ಟು ಹೇರಳವಾಗಿ ಹಾಕಿ, ಕರುವುಗಳನ್ನು ಬಿಟ್ಟು, ಮುಂಚಿತವಾಗಿ ಕುಡಿಸಿ, ಕಟ್ಟಿ, ಆ ಮೇಲೆ ಮೊಗೆಗಳ[3] ಕೈಲಿ ತೆಗದು ಕೊಂಡು, ಹಾಲನ್ನು ಘುಂ ಘುಂ[4] ಎಂಬ ಶಬ್ದಗಳಿಂದ ಕರೆದು, ಹರಿವೆಗಳಲ್ಲಿ ತುಂಬಿ, ತಿರಿಗಿ ಎರಡನೇ ಸಾರಿ ಕರುವುಗಳನ್ನು ತಾಯಿಯ ಮೊಲೆಗಳ ಕುಡಿಯುವದಕ್ಕೆ ಬಿಟ್ಟು, ಕುಡಿದು ಆದ ಮೇಲೆ ಮತ್ತೂ ಕರುವುಗಳನ್ನು ಕಟ್ಟಿ ಹಾಕಿ, ಹಾಲು ಹರಿವೆಗಳ ತಂದು, ಮನೆಗಳ ಹೆಂಗಸರ ವಶಕ್ಕೆ ಕೊಟ್ಟ ಮೇಲೆ,[5]—ಆ ಹೆಂಗಸರು ಅದು ವರಿಗೆ ಬೇಕಾದ ಅಡಿಗಗಳನ್ನು ಮಾಡಿ, ಒಲೆಗಳಲ್ಲಿ ಬೆಂಕಿ ಸಿದ್ಧಾ ಮಾಡಿ ಇರುವರು. ಈ ಹಾಲು

giving to the milch-cows and buffaloes abundance of grass and husks of grain; putting the calf to the cow; letting it suck first; tying it up; then taking small cans into their hands, drawing the milk, sounding "ghum, ghum;" pouring it into large cans; and again, a second time, letting the calves suck the mothers' teats; and when they have drunk, tying the calves up again; bringing the milk-cans, and when they have given them into the care of the women of the house,—who in the mean time have finished the necessary cooking, and prepared the fire (to boil the milk) on the hearth.

2. For ಆ ಮೇಲೆ. 3. acc.
4. Imitative of the sound of the milk falling into the vessel.
5. The sentence is broken off here.

ಹರಿವೆಗಳನ್ನು ಒಲೆಗಳ ಮೇಲೆ ಇಟ್ಟು, ಹೆಚ್ಚಾಗಿ ಉರಿ
ಹಾಯದ ಹಾಗೆ ಕೊಂಚವಾಗಿ ಉರಿ ಹಾಕುತ್ತಾ, ಹಾಲು
ಉಕ್ಕಿ, ಚೆಲ್ಲಿ ಹೋಗದ ಹಾಗೆ, ನಿಧಾನವಾಗಿ ಕಾಸಿ, ಚ
ನ್ನಾಗಿ ಹಾಲು ಕಾಯುವದುನ್ನು ಕೆಳಗೆ ಇಳಿಸಿಟ್ಟು,[6] ಬಿ
ಸಿ ಆರಿದ ಮೇಲೆ, ಮಜ್ಜಿಗೆ ಹೆಪ್ಪು ಕೊಟ್ಟು, ಮುಚ್ಚಿ
ಟ್ಟು, ಆ ಮೇಲೆ ಹಿಟ್ಟೋ, ಅನ್ನವೋ ಅಡಿಗೆ ಮಾಡಿ ಇ
ರುವ ಪದಾರ್ಥಗಳನ್ನು ಮುಂಚಿತವಾಗಿ ಗಂಡಸರು ಉಂ
ಡು ಇರುವರು; ತಾವುನ್ನು ಸಂತೋಷವನ್ನು ಹೊಂದಿ,
ಭೋಜನ ಮಾಡಿ, ಮಕ್ಕಳಿಗೆ ಅನ್ನಗಳು ಉಂಣಿಸಿ, ಹಾ
ಲುಗಳು ಕುಡಿಸಿ, ಇನ್ನು ಚಿಕ್ಕ ಚಿಕ್ಕ ಮಕ್ಕಳಿಗೆ ಹಾ
ಲು ಕುಡಿಯ ಕೊಟ್ಟು, ಮಗ್ಗಲುಗಳಲ್ಲಿಯೂ ತೊಟ್ಲ

Placing the milk-cans upon the fire places, they make a slow fire that it may not blaze too much, and heat the milk gently lest it should boil over and be spilled. As soon as it is properly boiled, they take it off and put it away, and when it has cooled, they put in curds of buttermilk, and cover it up. Then the men first eat what has been cooked—*rāgi* pudding, or rice. After them, they themselves (the women) having taken their meal with gladness, feed the children with rice; give them milk, and give milk to drink to the very little ones; lay them down by their sides, and in cradles;

6. ಇಳಿಸಿ ಇಟ್ಟು.

ಗಳಲ್ಲಿಯೂ ಮಲಗಿಸಿ, ಹಾಡುತ್ತಾ, ತೂಗುತ್ತಾ, ನಿದ್ದೆ ಮಾಡಿಸಿ, ತಾವು ನಿದ್ದೆ ಮಾಡ ಮಲಗುವರು.

ಇಂಥಾ ಸಂದಣಿಗಳು ಅನೇಕವಾಗಿ ಹತ್ತು ಹನ್ನೆರಡು ಘಳಿಗೇ ಪರ್ಯಂತರವೂ ಕೇಳಿಸುತ್ತಾ ಇತ್ತು. ಆ ಮೇಲೆ ಅರ್ಧ ರಾತ್ರಿಯಲ್ಲಿ ಜನಗಳೂ ದನಗಳೂ ಪಕ್ಷಿಗಳೂ ಮುಂತಾದವುಗಳೆಲ್ಲಾ ನಿದ್ರಾ ವ್ಯಾಸಂಗದಲ್ಲಿ ಇರುವದ್ದರಿಂದ, ಮಾಟು ಮಣಗಿ ನಿಶ್ಶಬ್ದವಾಗಿ ಇತ್ತು. ರಾತ್ರಿ ಸಂಚಾರ ಮಾಡ ತಕ್ಕ ಗೂಬೆಗಳೂ, ಹಂದಿಕೀರಗಳೂ, ಹೆಗ್ಗಣಗಳೂ, ಸರ್ಪಗಳೂ ಮುಂತಾದ್ದು ಮನೆ, ಮಾರ್ಗ ಮೊದಲಾದ ಸ್ಥಳಗಳಲ್ಲಿ ತಿರುಗುತ್ತಾ, ತಮ್ಮ ತಮ್ಮ ಆಹಾರಗಳು ಮಾಡಿ ಕೊಳ್ಳುತ್ತಾ ಇದ್ದವು.

ಇಂಥಾ ರಾತ್ರಿಯಲ್ಲಿ ಈ ದೊಡ್ಡ ಮನುಷ್ಯನು ತಾನು ಇಳಿದು ಇದ್ದ ಬಂಗಲೇಲಿ ಮಲಗಿ, ಸುಖ ನಿದ್ರೆಯನ್ನು ಮಾಡಿ, ಸವುಖ್ಯವಾಗಿ ಇದ್ದು, ಆ ರಾತ್ರಿಯನ್ನು ಕ

sing and rock, and put them to sleep, and themselves lie down to sleep.

Many such busy sounds were heard till ten or eleven o'clock. After that, at midnight, men cattle, birds and all else being asleep, all was hushed and still. Owls, screech owls, bandicoots, snakes and other nocturnal animals, prowled about the houses and roads in search of food.

On such a night, this gentleman lay down in the bungalow where he had halted, slept soundly,

ಳದು, ಉದಯ ಕಾಲವಾಗುವ ಸಮಯಕ್ಕೆ ಮುಂಚಿತವಾಗಿ ಮುಂಜಾವಿನಲ್ಲಿ ಕೋಳಿ ಕೊಕ್ಕೊಕ್ಕೋ ಎಂದು ಕೂಗಿತು. ಸಂಗಡಲೇ ನಾಲ್ಕು ಘಳಿಗ್ಯೆ[7] ಸಮಸ್ತವಾದ ಪಕ್ಷಿಗಳು ತಮ್ಮ ತಮ್ಮ ಗೂಡುಗಳಲ್ಲಿ ಇದ್ದು ಕೊಂಡು, ರೆಕ್ಕೆಗಳು ಒದರಿಸಿ ಕೊಂಡು, ಸ್ವಂತವಾದ ಧ್ವನಿಗಳನ್ನು ಮಾಡ ಸಾಗಿದವು. ಸಂಗಡಲೇ ಕಾಗಿಗಳ ಕೂಗು ಬಹಳವಾಗಿ ಆಯಿತು; ಕಮಲದ ಹುವ್ವುಗಳು ಅರಳಿದವು; ನೈದಿಲೆ ಮುಂತಾದ ಹುವ್ವುಗಳು ಮುಚ್ಚಿಕೊಂಡು, ಮವುನವಾಗಿ ಇದ್ದವು. ಮೂಡ್ಲು ಕಡೆ ಅರುಣೋದಯವು ಆಯಿತು; ಎಲ್ಲಾ ಜನಗಳು ಎದ್ದು, ತಮ್ಮ ಸ್ವಂತ ಕೆಲಸಗಳಲ್ಲಿ ಪ್ರವರ್ತಿಸಿದರು. ಆಗಲೀ ದೊಡ್ಡ ಮನುಷ್ಯನು ಐದು ಘಂಟೆಗೆ ಎದ್ದು, ಕುದುರೇ ಭಂಡಿಯನ್ನು ಸಿದ್ಧಾ ಮಾಡಿಸಿ, ತನ್ನ ಸೇವಕರು, ತಾನು ಸ

and passed the night in comfort. Before sunrise, in the first watch, the cock crowed, " kok-kok-kō " Immediately, in about an hour and a quarter, all the birds being in their nests, shook their wings, and began to send forth their several notes. On this, the crows set up a great cawing ; the lotus flowers expanded ; the water lily and other flowers closed and were still ; dawn appeared in the east ; all the people arose and entered upon their work. Then this gentleman arose at five o'clock, ordered his carriage, and set forward with his servants.

7. See note 8, p. 81.

ಹಾ, ಮುಂದಕ್ಕೆ ಹೊರಟು, ಇನ್ನೂ ಕೆಲವು ದೂರಾ ಹೋಗಿ, ಅಲ್ಲಿ ಮಾತೃಗ್ರಾಮವಾಗಿಯೂ, ಅಲ್ಲಿ ಅಮುಲುದಾರನು ಇರುವ ಸ್ಥಳವಾಗಿಯೂ ಇರುವ ಡೆಂಕಣೀಕೋಟೆ ಎಂಬ ಪೇಟೆಯ ಸಮೀಪಕ್ಕೆ ಬಂದು, ಅಲ್ಲಿ ಇರುವ ಬಂಗಲೇಲಿ ಇಳಕೊಂಡನು. ಅದಕ್ಕೆ ಮುಂಚಿತವಾಗಿಯೇ ಆ ತಾಲೂಕಿನ ಅಮುಲುದಾರನು, ಒಬ್ಬ ದೊಡ್ಡ ಮನುಷ್ಯ ಸರದಾರ ಬರುತ್ತಾನೆಂದು, ಸಮಾಚಾರ ಕೇಳಿದ್ದವನಾಗಿ, ಆ ದಿವಸ ಬಂಗಲೇಲಿ ಬಂದಿಳಿದ ಸರದಾರನನ್ನು ಕಂಡು ಬರ ಬೇಕೆಂದು, ಆತನು ಬಂಗಲೇ ಶೇರುವದಕ್ಕೆ ಮುಂದಾಗಿಯೇ ಅಮುಲುದಾರನೂ, ಶಿರಸ್ತೇದಾರನೂ, ಕಿಲ್ಲೇದಾರನೂ, ಅಂಚೆ ಮುತ್ಸದ್ದೀ; ಇನ್ನೂ ಹೋಬಳಿದಾರರೂ, ದಫೇದಾರರೂ, ವಾಲೇಕಾರರೂ, ಕಂದಾಚಾರದ ಜನಗಳೂ, ಅಠವಣೆ ಪ್ಯಾದೆಗಳೂ, ಶೆಟ್ಟಿ, ವರ್ತಕರೂ ಸಹ, ಸಲಾಮುಗಳು ಮಾಡಿ,

When he had gone some distance, he came near to Denkanikōte, a market town and the residence of an amildar, and alighted at the bungalow there. Previous to this, the amildar of the district had heard that some great personage was coming ; and, resolving to visit the gentleman who was to halt at the bungalow that day, before he arrived at the bungalow, the amildar, sheristedar, killedar, postmaster; also the hobalidars, duffadars, peons, police and civil peons, merchants and tradesmen too,

ಹಂಣುಗಳು ನಜರು ಮಾಡಿದವರು, ಕೆಲಬರು; ಮಾಡ
ದೆ, ಸುಮ್ಮನೆ ಇದ್ದವರು ಕೆಲಬರು. ಈ ಮೋರಿಗೆ ಬಂ
ದು, ಕಾಣಿಸಿ ಕೊಂಡ ಆಮಿಾಲರು ಮುಂತಾದವರ ಸಂ
ಗಡ ಬಹಳ ಮರ್ಯಾದೆಗಳಿಂದ ಮಾತನಾಡುತ್ತಾ, ಅಲ್ಲಿಂ
ದ ಈ ದೊಡ್ಡ ಮನುಷ್ಯನು ಬಂಗಲೆಗೆ ಬಂದು, ಇಳಿದ
ನು. ಇಳಿದ ತರುವಾಯ ಕುರಿಚಿಗಳ ಮೇಲೆ ಅಮಲ
ದಾರ, ಶಿರಸ್ತೇದಾರ, ಕಿಲ್ಲೇದಾರ, ಅಂಚೆ ಮುತ್ಸದ್ದಿಗಳು
ಕುಳಿತು ಕೊಂಡರು. ತಾನುನ್ನೂ ಬಂದು ಕುರಿಚೀ
ಮೇಲೆ ಕುಂತು ಕೊಂಡು, ಬಂದ ಜನಗಳಿಗೆಲ್ಲರಿಗೂ ಅ
ಪ್ಪಣೀ ಕೊಟ್ಟು, ಕಳುಹಿಸಿ, ಅಮಲದಾರ, ಶಿರಸ್ತೇದಾರ
ಮೊದಲಾಗಿ ಮಿತ ಜನವನ್ನಿಲ್ಲಿಸಿ ಕೊಂಡು, ಆಗ ಅಮ
ಲದಾರನ ಕುರಿತು ಈ ದೊಡ್ಡ ಮನುಷ್ಯನು ಕೇಳುವ
ದೇನಂದರೆ—

came and made salaam. Some presented fruit ; some presented nothing. Having conversed very politely with the amildar and the rest who had thus come and visited him, the gentleman then came and alighted at the bungalow. After he had alighted, the amildar, sheristedar, killedar, and postmaster sat down upon chairs ; the gentleman himself having taken a chair, gave leave to all the people who had come, dismissed them, detained the amildar, sheristedar and a few other people, and then enquired of the amildar :—

ಧೊ. ಏನು ಅಮಲದಾರರೇ, ನಿಮಗೆ ಕ್ಷೇಮವೋ?

ಅ. ಹವುದೈಯ್ಯಾ, ಕ್ಷೇಮವಾಗಿ ಇದ್ದೇನೆ.

ಧೊ. ನಿಮ್ಮ ತಾಲೂಕು ಗ್ರಾಮಾನುಗ್ರಾಮಗಳ[8] ಬಳಿಯು ಮಳೇ ಚನ್ನಾಗಿ ಆಗಿ, ಕೆರೆ ಕುಂಟೆಗಳಿಗೆ ನೀರು ಬಂದು ಇಧೆಯೋ?

ಅ. ಈಗ ಎಂಟು ದಿವಸಕ್ಕೆ ಮುಂಚಿತವಾಗಿ ಮಘೆ ಮಳೆಯಲ್ಲಿ ಒಂದೆರಡು ಹದ ಮಳೆ ಆಯಿತು. ಅದರಿಂದ ಪೈರು ಪಚ್ಚೆಗಳಿಗೆ[9] ಒಳ್ಳೇದಾಯಿತು. ಅದಕ್ಕೆ ಮುಂಚಿತವಾಗಿ ಮುಂಗಾರಿನಲ್ಲಿಯೇ ಭರಣಿ ಕೃತ್ತಿಕೆ ಮಳೆಗಳಲ್ಲಿ ಬಹಳವಾಗಿ ಮಳೆಯಾಗಿ, ಕೆರೆಗಳೂ ಕಟ್ಟೆಗಳೂ ಯಾವತ್ತೂ ಭರಪೂರ ತುಂಬಿ, ಕೋಡಿಗಳು ಹಾದವು. ಆದದರಿಂದ ಕೆರೆಗಳಲ್ಲಿ ನೀರು ತುಂಬಾಗಿ ಇಧೆ ಅಯ್ಯಾ.

G. Well, Amildar, are you quite well?

A. Yes, Sir, I am quite well.

G. Has there been plenty of rain around the villages and hamlets of your district? And are the tanks and ponds supplied with water?

A. Eight days ago, in the September rains, we had one or two sufficient falls of rain; which have done good to the crops. Before that, in the first monsoon, the April rains, there was a great deal of rain, so that the large and small tanks were all completely filled, and running over the wiers. So the tanks are quite full, Sir.

8. ಗ್ರಾಮ ಅನುಗ್ರಾಮಗಳ. 9. A pleonasm.

ಧೊ. ಕಾರ್ತೀಕ[1] ಸಾಗುವಳಿ ನಿಮ್ಮ ತಾಲೂಕಿನಲ್ಲಿ ವಿಸ್ತಾರವಾಗಿ ಆಗಿ ಇಧೆಯೋ?

ಅ. ಒಂದೇ ಫಲವಾಗ ತಕ್ಕ ಚಿಕ್ಕ ಕೆರೆಗಳ ಕೆಳಗಣ ಭೂಮಿ ಯಾವತ್ತುನ್ನೂ ಕಾರ್ತೀಕಕ್ಕೆ ಸಾಗುವಳಿ ಆಗಿ, ಗದ್ದೆ ಬಿತ್ತನೆ ಬಿದ್ದು, ಈಗ ಕಳೆಗಳು ತೆಗಿಯುತ್ತಾರೆ. ಕೆಲವು ಕಡೆ ಹೊಡೆಗೂ ಬಂದು ಇಧೆ. ದೊಡ್ಡ ಕೆರೆಗಳ ಕೆಳಗೆ ವೈಶಾಖವೇ[2] ವಿಸ್ತಾರವಾಗಿ ಗದ್ದೆ ಸಾಗುವಳಿ ಆಗ ತಕ್ಕದ್ದು. ಆದಾಗ್ಯೂ ಆ ಕೆರೆಗಳ ಕೆಳಗೂ, ಮುನಾಸಬು ಅರಿತು, ಕಾರ್ತೀಕವೂ ಸಾಗುವಳಿ ಆಗಿ ಇಧೆ. ಇದಲ್ಲದೆ ಕಬ್ಬಿನ ಸಾಗುವಳಿಯು ಬಹಳವಾಗಿ ಎಲ್ಲಾ ಗ್ರಾಮಗಳ ಬಳಿಯಲ್ಲಿಯೂ ಆಗಿ ಇಧೆ.

G. Is there much Kārtika cultivation in your district?

A. All the land below small tanks that only suffice for one crop, were tilled in Kārtika, and sown with rice; and now they are weeding it. In some places it is coming into ear. Below large tanks, rice is chiefly cultivated in Vaishākha. Yet under these tanks, according to circumstances, there is also Kārtīka cultivation. Besides, there is a great deal of sugarcane cultivation around all the villages.

1. The first season, in which the crops planted in April, are ripe in October.

2. The second season, in which rice crops planted in October, are ripe in April.

ಗೌ. ಆ ಕಬ್ಬಿಗೆ ವರುಷವೂ ನೀರು ಕಟ್ಟ ಬೇಕಷ್ಟೆ. ಚಿಕ್ಕ ಕೆರೆಗಳು ಇರುವ ಗ್ರಾಮಗಳ ಬಳಿಯು ಕಬ್ಬು ಹಾಕಿ ಇದ್ದರೆ, ಅದಕ್ಕೆ ಆರು ತಿಂಗಳೋ, ನಾಲ್ಕು ತಿಂಗಳೋ, ಕೆರೆಯಲ್ಲಿ ನೀರು ಇರುವ ಪರ್ಯಂತ್ರ ಕಟ್ಟುತ್ತಾರೆ. ಆ ಚಿಕ್ಕ ಕಟ್ಟೆಗಳಲ್ಲಿ ನೀರು ಹೋದ ಮೇಲೆ, ಕಬ್ಬಿಗೆ ನೀರು ಕಟ್ಟುವದಕ್ಕೆ ಏನು ತರದೂದು ಮಾಡಿ ಇದ್ಧಾರೆ?

ಅ. ಅಂಥಾ ಕೆರೆಗಳು ಇರುವ ಗ್ರಾಮಗಳ ಬಳಿಯು ಧ್ರುವ ಜಲವಿರುವ ಭಾವಿಗಳೂ,[3] ಬಾಣೆಗಳೂ,[4] ತಲಪರಿಗಳೂ,[5] ಒಡಪುಗಳೂ ಉಂಟು. ಅವುಗಳ ನೀರಿನ ಆಧಾರ ನೋಡಿ ಕೊಂಡು, ಅಂಥಾ ಸ್ಥಳಗಳಲ್ಲಿಯೇ ಕಬ್ಬಿನ ಸಾ

G. The sugarcane must be watered for a whole year, must it not? If sugarcane be planted near villages having only small tanks, they water it for six months, or four months, as long as there is water in the tank. What contrivance have they for watering the sugarcane when the water in these small tanks is spent?

A. In the neighbourhood of villages that have such tanks, there are wells, long reservoirs, basket wells and pools of perpetual water. In such places, sugarcane is cultivated in dependence upon the

3. Wells built of stone, generally square.

4. Reservoirs made long to accommodate a larger number of contrivances or people for throwing the water into the channels that conduct it to the fields.

5. Wells sunk in sandy ground, in which, to prevent the sides falling in, cylinders of strong wicker work are let down as the well is being dug.

ಗುವಳಿ ಆಗಿ ಇಧೆ. ಆ ಚಿಕ್ಕ ಕೆರೆಗಳಲ್ಲಿ ನೀರು ಇರು
ವ ಪರ್ಯಂತರ, ಹರಿ ನೀರು ಕಟ್ಟುತ್ತಾರೆ. ಕೆರೆಗಳಲ್ಲಿ
ನೀರು ಹೋಗುವದುನ್ನು ಭಾವಿಗಳಿಗೂ ಬಾಣೆಗಳಿಗೂ
ಒಡಪುಗಳಿಗೂ ಯಾತಾ, ಗೂಡೆ,[6] ಕಪಿಲೆ ಮುಂತಾದ್ದು
ಹಾಕಿ, ಹದ[7] ಗಟ್ಲೆಯಾಗಿ ಕಬ್ಬಿನ ತೋಟಗಳಿಗೆ ನೀರು
ಕಟ್ಟುತ್ತಾರೆ.

ಧೊ. ಈ ಕಬ್ಬಿನ ತೋಟಗಳು ಸರಕಾರಕ್ಕೆ ವಾರ
ವೋ, ಕಂದಾಯುವೋ? ಇದರ ರಿವಾಜು ಹ್ಯಾಗೆ ಇಧೆ?

ಅ. ಈ ಕಬ್ಬಿನ ತೋಟಗಳು ಕೆಲವು ಗ್ರಾಮಗಳ
ಬಳಿಯು ಕಂದಾಯುವಾಗಿ ಇಧೆ; ಕೆಲವು ಗ್ರಾಮಗಳ ಬ
ಳಿಯು ವಾರವಾಗಿಧೆ; ಕೆಲವು ಗ್ರಾಮಗಳ ಬಳಿಯು ಮು

water of these. So long as there is water in the small tanks, they use running water. When the water in the tanks is done, they apply *yātas*, baskets, bullock-buckets and other things to the wells, reservoirs, and pools, and water the sugarcane gardens by proper quantities at intervals.

G. Are these sugarcane gardens let by Government on *wāra*, or rent? What is the usual method?

A. In some villages these sugarcane gardens are taken on rent; in some villages on *wāra;* in

6. Baskets covered with leather, held by two ropes at each side, and worked by two men. With these the water is laded over the bank rapidly and in large quantities.

7. The word signifies as much rain as will soften the ground sufficiently for ploughing or tilling; about six inches deep.

ಕ್ಕುಪ್ಪೆ ಕವುಲು ಮೇರಿಗೆ ತ್ರಿಜಾಯಿ ಸರಕಾರಕ್ಕೆ ಬರುತ್ತೆ.

ಧೊ. ಕಂದಾಯದ ರಿವಾಜು, ಸಾವಿರ ಕಬ್ಬಿಗೆ ಏಸು ಕಂದಾಯ?

ಅ. ಸಾವಿರ ಕಬ್ಬು ಹಾಕ ತಕ್ಕ ಭೂಮಿಗೆ ಒಂದು ವರೆ ರೂಪಾಯಿ, ಒಂದು ಮುಕ್ಕಾಲು ರೂಪಾಯಿ; ರಸ್ತಾಳಿ, ಪಟಾವಳಿ ಹಾಕಿ ಇದ್ದರೆ, ಎರಡು ರೂಪಾಯಿ. ಈ ಮೇರಿಗೆ ರಿವಾಜು ಇಧೆ.

ಧೊ. ಆದರೆ ಸಾವಿರ ಕಬ್ಬು ಹಾಕಿದರೆ, ಅದಕ್ಕೆ ಗದ್ದೇ ಭೂಮಿ ಎಷ್ಟು ಆಗುತ್ತದೆ?

ಅ. ಹುಲ್ಲು ಕಬ್ಬು ಒಂದು ಗುಳಿಗೆ ಅರ್ಧ ಗಜದ ಉದ್ದದ ಕಬ್ಬುಗಳು ಎರಡು ಹೂಳುತ್ತಾರೆ. ಆ ಮೇರಿ

some villages on *muk-kuppè ;* according to which, one third comes to Government.

G. On the plan of rent, what is the rent per thousand plants?

A. For as much land as will plant a thousand canes, the usual rent is one and a half, one and three quarters, or, if the large or striped cane be planted, two rupees.

G. But how much wet land is required to plant a thousand canes?

A. Of thin cane, they plant two canes of half a yard long each, in one hole. Thus a thousand

ಗೆ ಸಾವಿರ ಗುಳಿಗೆ ಐನೂರು ಗಜ ಭೂಮಿ ಆಗುತ್ತೆ. ಬಿಳೀ ರಸ್ತಾಳಿ ಆದರೆ, ಆರು ನೂರು ಗಜ ಆಗುತ್ತೆ. ಪಟಾವಳಿ ಮುಂತಾದ್ದಕ್ಕೆ ಏಳು ನೂರು ಗಜ. ಇನ್ನೂ ಕಪ್ಪು, ಕಾಲ್ವೆ[8] ದೇಖೀಲು ಎಂಟು ನೂರು ಗಜ ಭೂಮಿ ಆಗುತ್ತೆ. ಆ ಭೂಮಿಗೆ ರಯಿತ ತೆರ ತಕ್ಕ ಕಬ್ಬಿನ ಕಂದಾಯ ಎರಡು ರೂಪಾಯಿ.

ಧೊ. ಈ ಕಂದಾಯ ಸರಕಾರಕ್ಕೆ ಕಿಫಾಯಿತೋ?

ಅ. ಹೌದು; ಕಬ್ಬಿನ ಸಾಗುವಳಿಯೇ ಸರಕಾರಕ್ಕೆ ಕಿಫಾಯಿತಿ. ಅದು ಹ್ಯಾಗೆಂದರೆ, ಕಬ್ಬು ಹಾಕದೆ, ನೆಲ್ಲು ಬಿತ್ತಿದರೆ, ಅದೇ ಭೂಮಿಗೆ ಒಕ್ಕಳಕ್ಕೆ[9] ಒಂದೇ ರೂಪಾಯಿ ಕಂದಾಯವಾದರೆ, ಬಹಳವಾಯಿತು. ಆದ್ದ

holes take five hundred yards of land. If it be the white thick cane, it will take six hundred yards. The striped and other kinds require seven hundred yards. With drains and channels besides, it will require eight hundred yards of land. For that (amount of) land the ryot has to pay sugarcane rent, two rupees.

G. Is this rent more profitable to Government?

A. Yes; the sugarcane cultivation is most profitable to Government; because if rice be sown instead of sugarcane, for the same land, for one *kolaga*, one rupee would be high rent. So that

8. ಕಾಲಿವೆ.

9. A *Kolaga* of seed sows five hundred yards of land.

ರಿಂದ ಕಬ್ಬಿನ ಸಾಗುವಳಿಯಿಂದ ಸರಕಾರಕ್ಕೆ ಫಾಯಿದೆ ಉಂಟು.

ಧೊ. ವಾರದ ತೋಟಗಳಾದರೆ, ಅದು ಹ್ಯಾಗೆ?

ಅ. ವಾರಕ್ಕೆ ಸಾಗುವಳಿ ಆದರೆ, ಭೂಮಿ ಸರಕಾರ ದ್ದಾಯಿತಷ್ಟೆ. ಇದಕ್ಕೆ ಕಷ್ಟ ಪಟ್ಟು, ವ್ಯವಸಾಯಾ ಮಾಡಿ, ಪಯಿರು ಮಾಡ ತಕ್ಕವನು ರಯಿತನು ಆದನಷ್ಟೆ. ಇದಕ್ಕೆ ಲಾಗವಡು, ಮುಟ್ಟುವಳಿ, ಬೀಜದ ಕಬ್ಬಿನ ಕ್ರಯದಲ್ಲಿ ಅರೆವಾಶಿ ಸರಕಾರದಿಂದ ಕೊಡ ಬೇಕು. ಈ ಮೇರಿಗೆ ಪೈರು ಆದ ಕೂಡ್ಲೇ ಬೆಲ್ಲಾ ಮಾಡುವದಕ್ಕೆ ಆಲೆ ಕಟ್ಟಿ, ಕಬ್ಬನ್ನು ಗಾಣವಾಡ ಬೇಕಷ್ಟೆ. ಅದಕ್ಕೆ ಕೊಂತಗಳ ಬಾಡಿಗೆ ಎಂತಲೂ, ಕೊಪ್ಪರಿಗೆ ಬಾಡಿಗೆ ಎಂತಲೂ, ಲೋಹಾರನ ಮಜೂರಿ ಎಂತಲೂ,[1] ಸುಂಕ

Government gains by the cultivation of sugar-cane.

G. How is it when they are *wāra* gardens?

A When cultivated on *wāra*, the land is Government's, you see. He who works and tills it, and raises the crop, is the ryot, you see. Half of the outlay, expenses, and cost of the seed-cane must be paid by Government. Thus when the crop is ready, it is necessary, you see, to erect a mill and press the cane, in order to make jaggory. For this there are expenses, such as mill rent, hire of boilers, pay of blacksmith, and duty. If an even

1. A blacksmith must be in constant attendance during the cane-pressing, to repair the mill if it get out of order.

ಸಹಾ ಬೀಳ ತಕ್ಕ ಲಾಗವಡು, ಅವುಗಳಲ್ಲಿ ಸರಿಯಾಗಿ ಅರೆವಾಶಿ ಸರಕಾರದಿಂದ ಕೊಟ್ಟರೆ, ಆದ ಬೆಲ್ಲಗಳಲ್ಲಿ ಮಣುವು ಗಟ್ಟಿಯಾಗಲಿ, ಉಂಡೆಗಳಾಗಲಿ, ಅಚ್ಚುಗಳಾಗಲಿ, ಚಿಲ್ರೆ ಖರ್ಚು ವೆಚ್ಚಗಳು ಕಳದು, ನಿಂತದರಲ್ಲಿ ಅರೆವಾಶಿ ರಯಿತನಿಗೆ, ಅರೆವಾಶಿ ಸರಕಾರಕ್ಕೆ ತೆಗದು ಕೊಳ್ಳುವದೇ ವಾರದ ರಿವಾಜು.

ಧೊ. ಮುಕ್ಕುಪ್ಪೆ ತ್ರಿಜಾಯಿ ಎಂನುವದು ಹ್ಯಾಗೆ?

ಅ. ಅದೇ ಮೋರಿಗೆ ಭೂಮಿ ಪಾಲು ಸರಕಾರಕ್ಕೆ ಬರ ತಕ್ಕದ್ದರಲ್ಲಿಯೂ, ಮೋಣಿ ಪಾಲು ರಯಿತನಿಗೆ ಸಲ್ಲ ತಕ್ಕದ್ದರಲ್ಲಿಯೂ, ಖರ್ಚು, ವೆಚ್ಚ, ಬಾಡಿಗೆ, ಸುಂಕ ಮುಂತಾದ್ದೆಲ್ಲಾ ರಯಿತನ ವಶಕ್ಕೆ ಬಿಟ್ಟು, ಆದ ಬೆಲ್ಲದಲ್ಲಿ ಮೂರು ಪಾಲಿನಲ್ಲಿ ಒಂದು ಪಾಲು ಸರಕಾರಕ್ಕೆ ತೆಗದು ಕೊಂಡು, ಎರಡು ಪಾಲು ರಯಿತನಿಗೆ ಕೊಟ್ಟರೆ,

half of these be defrayed by Government, after paying trifling expenses out of the jaggory produced, either by maund or by balls, or by cakes, half of the remainder falls to the ryot, and Government takes half. This is the method of *wāra*.

G. What is the custom of *muk-kup-pè*, or third part?

A. In the same way, when Government throws the outlay, expenses, hire, duty and all such things upon the ryot,—which otherwise would fall equally upon the land's share that comes to Government, and the plough's share paid to the ryot,—takes

ಖರ್ಚು ವೆಚ್ಚದ ಪಾಲು ಒಂದು, ಅವನ ಮೇಹಣಿ ಪಾಲು ಒಂದು, ಈ ಮೋರಿಗೆ ನಡೆಯು ತಕ್ಕ ರಿವಾಜು ತ್ರಿಜಾಯಿ ಎಣಿಸಿ ಕೊಳ್ಳುವದು. ಆದ್ದರಿಂದ ಈ ಮೂರು ರಿವಾಜುಗಳಲ್ಲಿಯೂ ಶುದ್ಧವಾಗಿ ರೈತನು ಕಂದಾಯಕ್ಕೆ ಕಬೂಲಾಗಿ, ಸಾಗುವಳಿ ಮಾಡಿ ಕೊಂಡರೆ, ಸರಕಾರಕ್ಕೆ ಕಿಫಾಯತಿ. ಕಡಮೆ ಎರಡು ಪಕ್ಷವೂ ಮಧ್ಯಸ್ತವಾಗಿ ಇರುವದು.

ಧೊ. ಆದರೆ ರಯಿತನು ಕಂದಾಯಕ್ಕೆ ಕಬ್ಬು ಸಾಗುವಳಿಗೆ ಕಬೂಲಾಗ ತಕ್ಕದ್ದು ಕಷ್ಟವೋ?

ಅ. ಕಷ್ಟವೇನು? ಕೊಂಚಕ್ಕೆ ಕಬೂಲಾಗುವದಿಲ್ಲವೈಯ್ಯಾ.

ಧೊ. ಅದೇಕೆ?

one third of the jaggory produced, and gives two thirds to the ryot—that is, one share for the expenses, and one share for his labour—this method is called *trijāi, (or muk-kup-pè.)* So of these three modes, if the ryot agree to cultivate on pure rent, it is best for Government. The other two methods are middling.

G. Then is there any difficulty to prevent the ryot's agreeing to cultivate sugarcane on rent?

A. What difficulty can there be? But he will not easily consent, Sir.

G. Why is that?

ಅ. ಹಣ ತೆರ ಬೇಕಷ್ಟೆ.

ಧೊ. ಹಣ ತೆತ್ತರೆ, ಅದರಲ್ಲಿ ಅವನಿಗೆ ಲಾಭವಿಲ್ಲವೋ?

ಅ. ಲಾಭವಾಗಲಿ, ನಷ್ಟವಾಗಲಿ, ರೈತನ ಮರ್ಜಿ ಏನಂದರೆ, ತನ್ನ ಹೊಲದ ಕಂದಾಯವು—ಹತ್ತು ವರಹಾವೋ, ಅಯಿದು ವರಹಾವೋ—ಕಿಸ್ತಿನ ಮೇರಿಗೆ ಸರಕಾರಕ್ಕೆ ಕಟ್ಟಿ, ಆದ ದವಸ ಹಗೆಗೆ ತುಂಬ ಬೇಕು. ಕಡಿಮೆ ಪೈರು, ನೆಲ್ಲು, ಜೋಳ, ಕಡ್ಲೆ, ಕಬ್ಬು ಮುಂತಾದ್ದು ಬೆಳದು, ಇದಕ್ಕೆ ತಾನೇ ಕೈಯಿಂದ ತೆರ ತಕ್ಕದ್ದು ಒಂದು ದುಡ್ಡು ಇಲ್ಲದೆ, ಬೆಳದಷ್ಟರಲ್ಲಿ ವಾರಾ ತೆಗದು ಕೊಂಡು ಇರುವದು ತನಗೆ ಸುರಕ್ಷಿತವೆಂದು, ಎಣಿಸುತ್ತಾನೈಯ್ಯಾ.

ಧೊ. ಅವನಿಗೆ ಬುದ್ಧಿ ಸಾಲದು. ಅದು ಹ್ಯಾಗಂದರೆ, ಎಲ್ಲಾ ಪೈರುಗಳು ಚನ್ನಾಗಿ ಮಾಡಿ, ಅದರಲ್ಲಿ ಬೆಳೆ

A. He has to pay money, you see.

G. If he does pay money, doesn't he gain by it?

A. Whether he gains or loses, the ryot likes to pay the rent of his field—ten or five pagodas—to government by instalments, and put the produce into his granary; and to grow other crops, such as rice, millet, Bengal gram, sugarcane, &c. without having a *dud* to lay out himself, and take half the produce. This he thinks to be best for himself, Sir.

G. He knows no better. For which is easier, to cultivate all his crops well, and sell the pro-

ದ ದವಸವನ್ನು, ಆ ಯಾ ಭೂಮಿಗಳಿಗೆ ಕಟ್ಟ ತಕ್ಕ ಕಂದಾಯುಗಳಿಗೆ ಆ ಯಾ ಭೂಮಿಯು ದವಸ ಏನುಂಟೋ, ಆಗಿನ ಧಾರಣೇ ಪ್ರಕಾರಕ್ಕೆ—ನೆಲ್ಲು ಹಶಿ, ಬೆಲ್ಲ ಬಿಸಿ,[2] ಅನ್ನುವ ಗಾದೆಯಾಗಿ ಮಾರಿ ಬಿಟ್ಟು, ಸರಕಾರಕ್ಕೆ ಕಂದಾಯಾ ಕಟ್ಟಿ ಬಿಟ್ಟು, ಒಬ್ಬರ ತಂಟೆ ಇಲ್ಲದೆ, ಆದ ದವಸವನ್ನು ಮನೆಗೆ ಹಾಕಿ ಕೊಂಡರೆ, ಇದು ನೆಂಮದಿಯೋ? ಆದ ದವಸಗಳೆಲ್ಲಾ ವಾರವಿಟ್ಟು, ಅರ್ಧ ತೆಗದು ಕೊಂಡು ಹೋಗುವದು ನೆಮ್ಮದಿಯೋ?

ಅ. ಹೌದಯ್ಯಾ, ನಮಗೆ ನೋಡಿದರೆ, ಈಗ ನೀವು ಹೇಳಿದ ಪ್ರಕಾರಕ್ಕೆ ಎಲ್ಲಾ ಭೂಮಿಯೂ ಕಂದಾಯಕ್ಕೆ ಮಾಡಿ ಕೊಂಡರೆ, ಅವನಿಗೂ ಒಳ್ಳೇದೇ, ಸರಕಾರಕ್ಕೆ ಫಾಯಿದೆಯೇ, ಸರಿ. ಇದಕ್ಕಾಗಿ ಎಲ್ಲಾ ಭೂಮಿ

duce—the produce of each field, whatever it be, to pay the rent of that field—at the current price, "paddy green, jaggory hot," as the saying is,—pay his rent to Government, and house his grain without any bother from any body,—or give half and take half of all the produce?

A. Yes, Sir; it seems indeed to us that if, as you have just now said, he took all his land on rent, it would be both better for himself, and more profitable to Government. On this subject he

2. *i. e.* new paddy measures more than when dried; and fresh jaggory weighs heavier than when kept; both, therefore, fetch more when sold off as soon as produced.

ಯು ಕಂದಾಯಕ್ಕೆ ಮಾಡಿಕೊಂಡರೆ, ಆ ಬಗ್ಯೆ ಅವನು
ಮಾಡುವ ಆಲೋಚನೆಯೇ ಬೇರೆ, ಅವನ ಬುದ್ಧಿಯೇ
ಬೇರೆ. ಅದು ಹ್ಯಾಗೆಂದರೆ, ಕಾಲಾವಧಿಯಲ್ಲಿ[3] ಎಲ್ಲಾ
ಪೈರುಗಳು ಮಾಡುವದಕ್ಕೂ ಭೂಮಿ ಸಾಗುವಳಿ ಮಾ
ಡಿ, ಮುಸಲಾ ಒಬ್ಬ ರಯಿತನಿಗೆ ಹೊಲ ಕಂದಾಯವಿಷ್ಟು,
ಗದ್ದೇ ಕಂದಾಯವಿಷ್ಟು, ಕಬ್ಬು ತೋಟದ ಕಂದಾಯವಿ
ಷ್ಟು, ಮೆಣಸಿನ ತೋಟದ ಕಂದಾಯವಿಷ್ಟು; ಹರಳು
ಹೊಲ, ಜೋಳದ ಹೊಲ, ಸಾಮೇ ಹೊಲ, ಎಲೆ ತೋ
ಟ, ಅಡಿಕೆ ತೋಟ, ತೆಂಗಿನ ತೋಟ, ಬಾಳೆ ಕಂದಾಯ,
ಚಿಲ್ರೆ ಕಂದಾಯ ಇಷ್ಟು ಎಂಬದಾಗಿ ಲೆಖ್ಖವಾದರೆ, ಹ
ತ್ತು ವರಹಾದ ಕಂದಾಯದ ಹೊಲ ಮಾಡ ತಕ್ಕ ರಯಿ
ತನ ಕಡೆಯಿಂದ ಸರಕಾರಕ್ಕೆ ಅವನ ಉಳಿಮೆಯಾದ

thinks and reasons very differently about taking all his land on rent. In this way : when all the land is let out for farming at the end of the season, suppose there be reckoned for one ryot so much for rent of field, so much for rent of wet land, rent of sugarcane garden so much, rent of chili garden so much; castor oil plant field, millet field, *śāmè* field, betel garden, areka garden, cocoanut garden, rent of plantain garden, and rent of sundries so much,—from a ryot who cultivates to the amount of ten pagodas rent, the Government

3. The end of one season is the time for re-letting land for the next.

ವಾರದ ಭೂಮಿಯಲ್ಲಿ ವರುಷಕ್ಕೆ ಇಪ್ಪತ್ತು ವರಹಾ ಕಿಫಾಯಿತು ಬರುತ್ತದೆ. ಆ ಇಪ್ಪತ್ತು ವರಹಾವನ್ನು ಭೂಮಿಯ ಲೆಖ್ಖದ ಮೇರೆಗೆ ಕಾಲಾವದಿಯಲ್ಲಿಯೇ ನಿಗದೀ ಮಾಡಿ, ಇವನ ಹೊಲ ಕಂದಾಯ ಹತ್ತು ವರಹಾ ಶಿವಾಯಿ, ಲಾಗಾಯಿತಿನಿಂದ ಈ ರೈತನು ವಾರಕ್ಕೆ ಉಳುತ್ತಾ ಬಂದ ಗದ್ದೆ ಮುಂತಾದ ಭೂಮಿಯ ಕಂದಾಯ ಇಪ್ಪತ್ತು ವರಹಾ, ಅಂತು ಮೂವತ್ತು ವರಹಾ. ಈ ಮೇರೆಗೆ ಕುಳವಾರು ಕಾಲಾವದೀ ಸಾಗುವಳಿ ಕಂದಾಯದ ಪಟ್ಟಿ ಶ್ಯಾನಭಾಗ ಶೇಖುದಾರರ ಮುಖಾಂತ್ರದಿಂದ ಕಚೇರಿಗೆ ಬಂದು, ದಾಖಲಾಗಲೂ; ಆಯಾ ತಿಂಗಳಿನ ಸಾಗುವಳೀ ಮೇರೆಗೆ ಲೆಕ್ಕಗಳು ಹಜೂರಿಗೆ ರಿಪೋರಟು[4] ಆಗುತ್ತವೆ. ಈ ಮೇರೆಗೆ ಒಂದು ವರುಷ

will gain from the land he ploughs on *wāra*, twenty pagodas a year. This twenty pagodas the *sheikdar* and *shanabhāga* settle, according to the ground, at the end of the season, and send to the office a lease document for the end of the season, to the effect that, "in addition to ten pagodas rent for this man's field, the rent of the wet and other land that he has for a long time ploughed on *wāra*, is twenty pagodas,—total, thirty pagodas." This is registered; and according to the cultivation each month, the accounts are reported to the head office. Thus if one year there be abundance of

4. Eng.

ಮಳೆ ಚನ್ನಾಗಿ ನಡಿಸಿ, ಬೆಳೆಯಾದರೆ, ಬಹಳ ಶ್ರಮದಿಂ ದ ಬಡವನಾದ ರಯಿತನು ತಾನು ಅಷ್ಟೋ ಇಷ್ಟೋ ಬೆಳ ದ ದವಸವನ್ನೆಲ್ಲಾ ಕ್ರಯ ವಿಕ್ರಯ ಮಾಡಿ, ಸರಕಾರ ಕ್ಕೆ ಹಣ ಕಟ್ಟುತ್ತಾನೆ. ಎರಡನೇ ವರುಷವು ಆ ಕುಳ ಕ್ಕೆ ಅದೇ ಕಂದಾಯ ದಾಖಲಾಗುತ್ತೆ. ಆ ಸಂವತ್ಸರ ಮಳೆ ಕಡಿಮೆಯಾದ್ದರಿಂದಲೂ, ಇದಲ್ಲದೆ ಭೂಮಿ ಕೇ ಡಾದ ಪೈರು ಪಚ್ಚೆಗಳಿಗೆ ರೋಗದಿಂದಲೂ, ಬೆಳೆ ಕೆ ಟ್ಟು ಹೋದರೆ, ಅವನಿಗೆ ದವಸ ಕಾಣುವದಿಲ್ಲ. ಸರ ಕಾರದ ಕಂದಾಯ ಮೂವತ್ತು ವರಹಾವೆಂತು ಬಿಡುವ ದಿಲ್ಲ. ಇದಕ್ಕಾಗಿ ಹಿಂದಣ[5] ದವಸವೂ ಮಾರಿ, ಜೀವ ನಕ್ಕಾಗಿ ಇಟ್ಟಿದ್ದ ಕಂದಾಯದ ಹೊಲದಲ್ಲಿ ಆದ ದವಸ ವೂ ಮಾರಿ, ಅದೂ ಸಾಲದೆ, ಎತ್ತುಗಳು ಮಾರಿ, ಕಂದಾ

rain, and the crop succeeds, with great difficulty the poor ryot sells all the grain, whatever it happens to be, that he has grown, and pays the money to Government. The second year, the same rent is entered for the same portion. If that year, through failure of rain, or disease from the ground attacking the crops, the crop is spoiled, he sees no grain at all, and the government rent, thirty pagodas, is not remitted. To meet this, he sells his old grain, sells the grain of his rented field which he had reserved for his support; that not being enough, he sells his oxen,—if he has the rent to pay, what can

5. Of former years.

ಯು ಕಟ್ಟ ತಕ್ಕದ್ದಾದರೆ, ಏನು ಮಾಡ ಬೇಕು? ಅದರಿಂ ದ ತಾನು ತೆರ ತಕ್ಕ ಕಂದಾಯು ಸ್ವಲ್ಪವಾಗಿ ಇರ ಬೇಕು. ಕಾಲಾವದಿಯಲ್ಲಿ ವಾರದ ಭೂಮಿ ವಿಸ್ತಾರವಾಗಿ ತನ್ನ ಆರಂಬಕ್ಕೆ ಉತ್ತು, ಪೈರು ಮಾಡಿದರೆ, ತನ್ನ ಪುಣ್ಯದಿಂದ[6] ಬೆಳದಷ್ಟು ದವಸಾ ಬೆಳಿಯುಲಿ. ತನಗೂ ಬಂದಷ್ಟೇ ಸಾಕು. ಕುಡಿಕೆ ಹೊನ್ನು[7] ಕೊಟ್ಟು, ಕುಳ ಕಂದಾಯು ತಗ್ಗಿಸಿ ಕೊಳ್ಳೋ, ಮಗನೇ, ಎಂದು ತಂದೆ ಮಗನಿಗೆ ಹೇಳಿದ ಹಿಂದಣ ಗಾಥೆಯನ್ನು ನೆನಸಿ ಕೊಂಡು, ಎರಡು ಏರು ಉಳುವ ರಯಿತನು ಎಂದಿಗೂ ಅಯಿದು ಆರು ವರಹಾದಕ್ಕಿಂತ ಹೆಚ್ಚಾಗಿ ಕಂದಾಯು ಕಬೂಲಾಗುವದಕ್ಕೆ ಬಹಳ ಅನುಮಾನ ಪಡುತ್ತಾನೆ. ಅದರಿಂದ ಈ ತಾಲೂಕಿನಲ್ಲಿ ಆದ ಜಮಾಬಂದಿಗೆ ಅರ್ಧ

he do? On this account he wants to have as little rent to pay as possible. If, at the letting season, he plough largely on *wāra* on his own account, and raise the crop, then let as much corn grow as his good luck brings; and whatever he gets satisfies him. He recollects the old proverb that a father uttered to his son, "Give your gold, and lessen your rent, my boy," and a ryot who works two ploughs always hesitates greatly to agree to more rent than five or six pagodas. On this account, the last settlement in this district was

6. His merit derived from virtue in former births.

7. *i. e.* spend the money you have hoarded in bribes, &c. At any cost get the amount of your rented ground lessened.

ಪಾಲೇ ಐನು ಕಂದಾಯ ಆಗಿ ಇಧೆ, ಅರ್ಧ ಪಾಲು ವಾರದ ಹುಟ್ಟುವಳೀ ದವಸದ ಕ್ರಯವಾಗಿ ಇಧೆ.

ಧೊ. ಆದರೂ ಅಮುಲುದಾರನು ಬುದ್ಧಿವಂತನಾದರೆ, ತಾಲೂಕಿನಲ್ಲಿ ಸಾಗುವಳಿ ಸಂತುವಳಿ[8] ಚನ್ನಾಗಿ ಆಗಿ, ಸರಕಾರಕ್ಕೆ ಆದಾಯ ಕಂಡು ಕೊಡುತ್ತಾನೆ. ಇಲ್ಲದಿದ್ದರೆ, ಇಲ್ಲ.

ಅ. ಸರಕಾರದಲ್ಲಿ ಚಾಕರನಾಗಿ, ನಿರ್ವಂಚನೆಯಿಂದ ಸರಕಾರದ ಕೆಲಸ ಮಾಡದೆ, ಎರಡನೆ ಹರುಬು ಏನು ಉಂಟೈಯ್ಯಾ? ರಾತ್ರಿ ಹಗಲೂ ಸರಕಾರಕ್ಕೆ ಕೂಡಿ ಬರುವಂತೆ[9] ಸರಕಾರದ ಕೆಲಸಗಳೇ ಮಾಡುತ್ತಾ ಇರುವದೇ ಚಾಕಿರಿ ಮಾಡ ತಕ್ಕವರಿಗೆ ನ್ಯಾಯ. ಅದನ್ನರಿತು, ಮಾನದಿಂದ ಸಂರಕ್ಷಣೆ ಮಾಡಿ ಕೊಂಡು ಬರುವ ಕೆಲಸ ಧೊರೆಗಳ ಸ್ವಾಧೀನವು,

half in net rent, and half in value of grain cultivated on *wāra*.

G. But if the amildar be a clever man, the district will be well cultivated, and he will see that the government is profited. If not, he won't.

A. If any one in the service of Government, does not honestly attend to the affairs of Government, what else is there for him to do, Sir? It is just that those employed should attend day and night to those things that serve the Government. Knowing this, the business of graciously caring for them is in the hands of their masters.

8. A pleonasm.

9. ಬರುವ ಹಾಗೆ.

ಎಂದು ಹೇಳುವ ಅಮುಲುದಾರನಂ[1] ಕುರಿತು ಆ ದೊಡ್ಡ ಮನುಷ್ಯನು ಹೇಳುವದೇನಂದರೆ—

ಧೊ. ಇನ್ನೂ ನಿಮ್ಮ ಸಂಗಡ ಬಹಳವಾಗಿ ಮಾತನಾಡ ಬೇಕೆಂಬ ಭ್ರಮೆ ಇಧೆ. ಅದಕ್ಕೆ ಸಾವಕಾಶ ಉಂಟೋ? ನೀವು ಸರಕಾರದ ಕೆಲಸದಲ್ಲಿ ಇರ ತಕ್ಕವರು; ನಮ್ಮಲ್ಲಿ ಮಾತನಾಡುವದಕ್ಕೆ ಕೂತು ಕೊಂಡರೆ, ಹ್ಯಾಗೆ?

ಅ. ತಮ್ಮಂಥಾ ದೊಡ್ಡ ಮನುಷ್ಯರ ಸಂಗಡ ಮಾತನಾಡುವದಕ್ಕಿಂತಲೂ ಇನ್ನೊಂದು ಕೆಲಸ ದೊಡ್ಡದಲ್ಲ. ಆದರೆ ಸರಕಾರದ ಕೆಲಸ ಎಲ್ಲಾ ಕೆಲಸಕ್ಕೂ ದೊಡ್ಡದೇ, ಸರಿ. ನಾನು ಎಲ್ಲಿ ಕುಳಿತು ಇದ್ವಾಗ್ಯೂ, ಅಲ್ಲಿಯೇ ಸರಕಾರದ ಕೆಲಸವೇನು ಇದ್ದಾಗ್ಯೂ, ನಡಿಯುವ ಹಾ

To the amildar thus speaking, the gentleman then said,

G. I am anxious to have a good deal more conversation with you. Have you time for it? You have to attend to public business. How if you sit talking with me?

A. There is no work of greater importance than conversing with great men like yourself. True, the business of Government is more important than all other business; but the authorities have commanded that wherever I sit down, whatever government business there may be there, shall pro-

1. Acc.

ಗೆ ಧಣಿತನ ಮಾಡುವವರು ಹುಕುಂ ಕೊಟ್ಟು ಇದ್ಧಾ
ರೆ.[2] ಇದಲ್ಲದೆ ಕಚೇರಿಯಲ್ಲಿ ಪೇಷ್ಕಾರರು[3] ಇಧಾರ.
ಅಮುಲುದಾರರು ಕಚೇರಿಯಲ್ಲಿ ಇಲ್ಲದಾಗಲೂ, ಇದ್ದಾ
ಗಲೂ ಸಹ, ಸರಕಾರದ ಕೆಲಸ ಏನು ಬಂದಾಗ್ಯೂ,
ಕಾಯಿದೆ ತಪ್ಪದ ಹಾಗೆ ಮಾಡುವದಕ್ಕೆ ಅವರಿಗೂ ಸ್ವ
ತಂತ್ರ ಉಂಟು. ಖಾಂಖಾ ಅಮಲದಾರನಿಂದಲೇ ಆಗ
ತಕ್ಕ ಅರ್ಜೀ ಮುಂತಾದ ಕೆಲಸಗಳಿಗೆ ಅಮಲದಾರನಿ
ದ್ದ ಬಳಿಗೆ ತಿಳಿಸಿ, ನಡಿಸುವಂತೆಯೂ, ಯಾರಾದರೂ
ದೊಡ್ಡ ಸರದಾರೀ ಮನುಷ್ಯರು ತಮ್ಮಂಥಾವರು ಮಾ
ರ್ಗ ವಶಾತು ಬಂದರೆ, ಅವರನ್ನು ಮರ್ಯಾದೆಯಿಂದ
ಕಂಡು ಮಾತನಾಡುವ ಹಾಗೆಯೂ, ಖಾವಂದರ ಹು
ಕುಂ ಉಂಟು. ಅದಕ್ಕೆ ತಾವೆಷ್ಟು ಮಾತ್ರವೂ ಯೋಚ

ceed. Besides, there is a Pēshkār in the office, who also has power to transact whatever public business comes in, not contrary to law, whether the amildar be absent or present in the office. The governor's order is, that petitions and other business, which it is necessary for the amildar himself to attend to, he is to transact after informing the amildar; and that if any persons in high authority, like yourself, be travelling this way, he is respectfully to visit and converse with them. You need not be at all concerned on that

2. The Amildar must go about a great deal to look after things.
3. pl. honorific.

ನೆ ಮಾಡ ತಕ್ಕದ್ದಿಲ್ಲ. ಏನೇನು ಮಾತನಾಡ ಬೇಕೆಂಬ ಅಭಿಲಾಷೆ ತಮ್ಮ ಬುದ್ಧಿಗೆ ತೋರಿದಾಗ್ಯೂ, ಸಾವಕಾಶವಾಗಿ ಮನಸ್ಸಮಾಧಾನವಾಗಿ ಮಾತನಾಡ ಬಹುದು. ನಾನು ನನಗೆ ತೋರುವ ಮಟ್ಟಿಗೆ ಹೇಳುವ ಪ್ರತ್ಯುತ್ತರವನ್ನು ಮನಸ್ಸಿಗೆ ತಂದು, ಅದರಲ್ಲಿ ಏನಾದರೂ ಹೆಚ್ಚು ಕಡಿಮೆ ತೋರಿದರೆ, ಹಾಗಲ್ಲ, ಹೀಗೆ ಎಂದು, ತಾವು ನನಗೆ ಹೇಳ ಬಹುದು,

ಎಂದು ಬಹಳ ವಿನಯದಿಂದ, ಮರ್ಯಾದೆಯಿಂದ ಮಾತನಾಡುವ ಅಮಲದಾರನ ಮಾತುಗಳನ್ನು ಕೇಳಿ, ಆ ದೊಡ್ಡ ಮನುಷ್ಯನು ಬಹು ಸಂತೋಷ ಪಟ್ಟವನಾದನು. ಸಂತೋಷ ಪಟ್ಟು, ಮತ್ತು ಕೇಳುವದೇನಂದರೆ—

ಧೊ. ಈ ವರುಷ ಈ ತಾಲೂಕಿನ ಜಮಾಬಂದಿ ಎಷ್ಟು ವರಹಾ?

account. Whatever you wish to say, you may say at your own leisure and pleasure. You may also consider the replies which I shall give to the best of my knowledge, and if you perceive any errors in them, you may tell me, "Not so, but so."

The gentleman was much pleased on hearing the amildar's exceedingly modest and courteous address, and being pleased, enquired of him further:

G. How many pagodas does the assessment of this district amount to for this year?

ಅ. ಈ ವರುಷಕ್ಕೆ ಇನ್ನು ಪೂರಾ ಜಮಾಬಂದಿ ಆಗಲಿಲ್ಲ. ಕಾಲಾವದೀ ಗುತ್ತಿಗೆ, ಕಾಯಂ ಗುತ್ತಿಗೆ, ಜೋಡಿ[4] ಮುಂತಾದ ಗ್ರಾಮಗಳು ಅಲ್ಲದೆ, ಇನ್ನು ಅಯಿದು ಆರು ಹೋಬಳಿಗಳ ವರಿಗೂ ಜಮಾಬಂದಿ ಆಗಬೇಕು. ಪ್ರಾಕು ಸಂವತ್ಸರದ ಮೇರಿಗೆ ಜಮಾಬಂದಿ ಫಡಾಯಿಸೀತು. ವೈಶಾಖದ ಫಸಲು ಪೈರಿನ ಮೇಲೆ ಗ್ರಾಮಗಳ ಜಮಾಬಂದಿ ಫೈಸಲು ಆಗ ತಕ್ಕದ್ದು. ಇನ್ನು ತಿಂಗಳ ಮೇಲೆ ವೈಶಾಖಧ ಸಾಗುವಳೀ ಷುರು ಆಗುತ್ತೆ. ಆದ ಕೂಡ್ಲೆ ಜಮಾಬಂದಿಯೂ ಪ್ರಾರಂಭಿಸಿ, ಫೈಸಲಾಗ ಬೇಕು.[5]

A. The assessment of this year is not yet completed. Besides the annual contracts, permanent leases, villages lightly assessed and others, five or six smaller districts have yet to be assessed. The assessment may come up to what it was last year. The assessment of the villages for the Vaishàkha crop is settled when the crop is on the ground. In a month hence, the Vaishàkha cultivation begins. On which the assessment must commence and be settled.

4. According to this method, part of the rent is remitted as a gratuity to brahmans, or those who have done special service to Government.

5. The value of the crop is determined and contracted for, when the ground has been planted, and the probable harvest estimated from the quantity of water in the tanks.

ಧೊ. ಆದರೆ ಪ್ರಾಕಿನ ಬೇರೀಜು ಏನು?

ಅ. ಪ್ರಾಕಿನ ಬೇರೀಜು ತೊಂಭತ್ತೊಂಭತ್ತು ಸಾವಿರ ವರಹಾವು ಚಿಲುವಾನವಾಗಿ ಇಧೆ. ಅದಕ್ಕೆ ಈಗ ಸುವರ್ನಾದಾಯು, ಕಾಲಾವದೀ ಗುತ್ತಿಗೆ, ಮುಂತಾದ್ದು ಅರವತ್ತು ಸಾವಿರ ವರಹಾದ ಪರ್ಯಂತರ ಲೆಖ್ಖಕ್ಕೆ ದಾಖಲಾಯಿತು. ಇನ್ನು ನಾಲ್ವತ್ತು ಸಾವಿರ ವರಹಾ ವಾರಾದಾಯುವಾದ ಕಾಡಾರಂಬ, ನೀರಾರಂಬ, ನೆಲವಳಿ, ಫಲ ವೃಕ್ಷಗಳಲ್ಲಿ ಕಾಣ ಬೇಕಾಗುತ್ತೆ. ಬಹು ತರ ಕಂಡೀತು. ಇದಲ್ಲದೆ ಸುಂಕ ಪ್ರತ್ಯೇಕ ಎಂಟು ಸಾವಿರ ವರಹಾವಿಧೆ. ಅದು ಹಜೂರಿನಲ್ಲಿಯೇ ಜುಲಾಯಿ ತಿಂಗಳಲ್ಲಿ ಫಯಿಸಲಾಯಿತು. ಅದಕ್ಕೆ ಇಜಾರದಾರ ಬೇರೆ ಏರ್ಪಟ್ಟು ಇದ್ಧಾನೆ. ತಿಂಗಳು ಗಟ್ಲೆ ಖಿಸ್ತುಬಂದೀ ಪ್ರಕಾ

G. But what was the total assessment last year?

A. Last year's assessment was ninety nine thousand and odd pagodas. Towards that, rent, annual contracts, &c. to the amount of sixty thousand pagodas, have been already entered in the accounts. Forty thousand pagodas more ought to come from dry cultivation, wet cultivation, under-ground produce, held on *wāra*, and fruit trees. It will doubtless be realized. Besides, there are eight thousand pagodas from the customs alone. This was settled in the head office in July. There is a separate contractor for that; and the money is

ರಕ್ಕೆ ಹಣ ಸರಕಾರಕ್ಕೆ ಬರುತ್ತಾ ಇಧೆ. ನಿಂತ ವಾರಾದಾಯದ ದವಸದ ಕ್ರಯ ಮೊಬಲಗು ಇಷ್ಟು ಎಂದು ಲೆಖ್ಖಕ್ಕೆ ತಿಳಿಯ ಬೇಕು. ತಿಳಿದರೆ, ಅದನ್ನು ಗ್ರಾಮಾನುಗ್ರಾಮದ ಗವುಡಗಳ ಗುತ್ತಿಗೆಗಳು ಆಗುತ್ತೆ. ಆ ಮೇಲೆ ಗೋಷ್ವಾರೆ ಇಷ್ಟು ವರಹಾವೆಂದು ಲೆಖ್ಖವಾಗುತ್ತೆ. ಈ ಸಂವತ್ಸರಕ್ಕೂ ಪ್ರಾಕು ಮೇರಿಗೆ ಬೇರೀಜು ಫಡಾಯಿಸೀತು.

ಧೊ. ಪ್ರಾಕು ಸಂವತ್ಸರ ಹಣ ಬೇಬಾಕಿಯಾಗಿ ವಸೂಲು ಆಯಿತೋ, ಇನ್ನು ನಿಂತು ಇಧೆಯೋ?

ಅ. ಇನ್ನು ಸಾವಿರ ವರಹಾದ ವರಿಗೂ ಬಾಕಿ ಇಧೆ.

ಧೊ. ಅದೇಕೆ? ಜೂನ್ ತಿಂಗಳು ಆಖೈರು ವರಿಗೆ ಬಾಕಿ ಝಾಡೆಯಾಗ ಬೇಕಲ್ಲ?

being paid to Government by monthly instalments. The total value of the remaining *wàra* grain has to be ascertained. When known, it is given on contract to the *gowdas* of the several villages. The total is then reckoned, so many pagodas. This year the total assessment may be as the last.

G. Is last year's money all collected, or is there still some outstanding?

A. There is still a balance of a thousand pagodas or thereabouts.

G. Why is that? Must not the balance be paid up by the end of June?

ಅ. ಆಗ ತಕ್ಕದ್ದೇ ಸರಿ. ಆದರೆ ನಾದಾರ ರೈತರ ಕಡೆ ಕೆಲವು ಜಿನಸೀ ಬಾಕಿ, ಕೆಲವು ನಗದು ನಿಂತು ಇಧೆ.

ಧೊ. ವಸೂಲಾದ ಐವಜು ಗ್ರಾಮಸ್ತರು ದಸ್ತು ಮಾಡಿ ಕೊಂಡು, ಕುಳ ಬಾಕಿ ಎಂದು ಬರೆಸಿದ್ದಾರು.[6] ಅಷ್ಟೇ ಹೊರ್ತು, ರೈತರ ಕಡೆ ಬಾಕಿ ನಿಲ್ಲುವದಕ್ಕೆ ಏನು ಕಾರಣ?

ಅ. ಇಲ್ಲ; ಅದೆಲ್ಲಾ ಕುಳವಾರು ಫರದೆ ಫರದು ದರಿಯಾಪ್ತಿ ಮಾಡಿ, ರಯಿತರ ಕಡೆಯೇ ಕಬ್ಬಿನ ಪೈರು ಲುಕ್ಸಾನು ಮುಂತಾದ ಬಾಕಿ ಸಾಬೂತಾಯಿತು. ಅದಕ್ಕೆ ಜೋರು ತಗಾದಿ ಮಾಡಲಿಕ್ಕಾಗಿ, ಕೆಲವರು ರೈತರು ಹಜೂರಿಗೆ ಫಿರ್ಯಾದು ಮಾಡಿದ್ದರಿಂದ, ಅವರವರ

A. It ought to be, of course; but there is still a balance against the poorer ryots, partly in goods, partly in money.

G. Perhaps the village authorities have kept back the money collected, and entered it as still outstanding. Otherwise what cause is there for a balance outstanding against the ryots?

A. No; the ryots were examined separately, and it was found that with the loss of their sugar-cane crop and other balances against the ryots, the whole was accounted for. On being hard pressed for payment, some of the ryots having complained to the head office, an order came from

6. ಬರೆಸಿ ಇದ್ದಾರು.

ಅಹವಾಲ ತಿಳಿದು, ವಾಯಿದೆ ಕೊಟ್ಟು, ಆ ಮೇರಿಗೆ ಹಣ ವಸೂಲು ಮಾಡುವಂತೆ ಹಜೂರು ಹುಕುಂ ಸಾದರಾಗಿತ್ತು. ಇಷ್ಟರಲ್ಲೇ ಹಜೂರು ಕಚೇರಿಯು ತಾಲೂಕು ಮುಜುಕೂರಿಗೆ ಬಂದು ಇದ್ದಾಗ, ಅವೇ ರಯಿತರು ಯಾವತ್ತೂ ತಮ್ಮ ತಮ್ಮ ನಾದಾರಿ ಸಬಬನ್ನು ಚನ್ನಾಗಿ ಧಣಿಗಳಿಗೆ ತಿಳಿಯುವ ಹಾಗೆ ಶೃತ ಪಡಿಸಿದ್ದರಿಂದ, ನನ್ನನ್ನೂ ಕೇಳಿ, ನಾನು ಹೇಳಿದ ರೈತರ ಅಹವಾಲನ್ನು ಖಾವಂದರು ಚಿತ್ತಕ್ಕೆ ತಂದು, ನಾಳೆ ಕಾರ್ತೀಕ ಫಸಲು ಕಾಡಾರಂಬ, ರಾಗಿ ಮುಂತಾದ ಮಹಸೂಲು ಆಗುವ ಪರ್ಯಂತ್ರವೂ, ರೈತರಿಗೆ ವಾಯಿದೆ ಮಾಡಿ ಕೊಟ್ಟು, ಸುದಾರಿಸಿ, ವಸೂಲು ಮಾಡಿ ಕೊಳ್ಳುವ ಮೇರಿಗೆ ಅಪ್ಪಣೆ ಆಯಿತು. ಅದೇ ಮೇರಿಗೆ ಈಗ ಎರಡು ಕಿಸ್ತಿನ ಹಣಾ

the office to ascertain their circumstances, give them a term, and collect the money accordingly. In the meantime the head office had come into the district, and all the same ryots having fully explained to the governor the cause of their poverty, the gentleman enquired of me, took into consideration the circumstances of the ryots, which I related, and ordered that I should give the ryots a term till the next Kārtika dry crops—*rāgi* and other crops—are ready, allow them time to breathe, and then collect the money. Accordingly, two instalments of money have been already collected,

ವಸೂಲಾಗಿ, ನಿಂತ ಬಾಕಿಯೂ ಅದೇ ಮೋರಿಗೆ ವಸೂ ಲಾಗುತ್ತಾ ಇಧೆ. ಆ ಬಗೆ ಬಾಕಿಯೇ ಇನ್ನು ಸಾವಿರ ವರಹಾದ ಪರಿಯಂತರವಿಧೆ.

ಧೊ. ಆದರೆ ಸಂವತ್ಸರ ಪ್ರತಿ ಹಜೂರು ಕಚೇರಿ ಬಂದ ವೇಳೆಯಲ್ಲಿ, ಹಿಂದಣ ಬಾಕಿ ನಿಂತು ಇದ್ದರೆ, ಅದಕ್ಕೆ ವಾಯಿದೆ ಸಾಯಿದೆ[7] ಕೊಡುವದುಂಟೋ?

ಅ. ಆಹಾ, ವಾಯಿದೆ ಕೊಡದೆ ಇದ್ದರೆ, ರೈತರ ನಿ ಭಾವು ಹ್ಯಾಗಾದೀತು? ವಾಜಿಬೀ ರೈತರ ಕಡೆ ಬಾಕಿ ಇದ್ದಲ್ಲಿ, ರೈತ ಮುನಾಸಬು, ಹಾಲು ಅಹವಾಲು ವಿಚಾ ರಣೆ ಮಾಡಿ, ವಾಯಿದೆ ಆಗುತ್ತೆ. ಆ ವಾಯಿದೇ ಮೋರಿ ಗೆ ಹಣವೂ ವಸೂಲಾಗುತ್ತೆ. ಈ ವರುಷ ಕಬ್ಬಿನ ಪೈ

and the remaining balance is being collected in the same way. Such balance still amounts to a thousand pagodas.

G. Then if there be outstanding balances every year when the head office comes, is a further term given?

A. Of course, if time were not given, how could the ryots manage? Where there is really a balance against the ryots, after enquiry into his present circumstances, time is given according to the ability of each ryot; and the money collected according to that time. This year the sugarcane crops

7. A pleonasm.

ರಿಗೆ ರೋಗ ತಗಲಿ, ಪೈರು ನಷ್ಟವಾದ್ದರಿಂದ, ಕಾಲಾವಧಿಯಲ್ಲಿ ಕಂದಾಯಕ್ಕೆ ಮೊಕರೂರು ಆಗಿ ಇದ್ದ ಪ್ರಯುಕ್ತ, ಹಣ ಬೇರೆ ಬಿಡ ಕೂಡದು. ರೈತರಿಗೆ ಬಾಕಿ ನಿಲ್ಲಿಸಿ ಕೊಳ್ಳುವದಕ್ಕೂ, ತಮ್ಮ ಅಹವಾಲು ಹೇಳಿ ಕೊಂಬುವದಕ್ಕೂ, ಆಕರವಾಯಿತು. ಅದರಿಂದ ಬಾಕಿ ನಿಂತು ಬಂತು. ಸಬಬು ಇಲ್ಲದೆ ರೈತರು ಮುಂತಾದವರು ಬಾಕೀ ನಿಲ್ಲಿಸಿ ಕೊಳ್ಳ ಕೂಡದು. ಅಥವಾ ಮೊಂಡಾಗಿಯಿಂದ ನಿಲ್ಲಿಸಿ ಕೊಂಡರೆ, ಅದಕ್ಕೆ ತಕ್ಕ ತರದೂದು ಹುಡುಕಿ, ಸರಕಾರದ ಐವಜು ಬರ ಮಾಡ ಬಹುದು. ಸಬಬು ಕಂಡು ಇದ್ದರೆ, ಅದಕ್ಕೆ ತಕ್ಕ ಸಮಜಾಯಿಷೀ ಮಾಡಿ, ಹಣ ಮಾನದಿಂದ[8] ವಸೂಲು ಮಾಡ ಬೇಕೇ

having been attacked by disease and destroyed,—the rent having been fixed at the end of the season, the payment of the money cannot be remitted,—the ryots had cause for withholding balances, and representing their circumstances. On this account balances have been left. Without some cause, the ryots and others cannot withhold balances. Or if any, from obstinacy, withhold them, some fitting expedient may be sought out, and the Government money brought in. If good cause be found, it must be suitably alleviated, and the money collected only with civility. If

8. *i. e.* they must be persuaded, not coerced by punishment, torture, or imprisonment.

ಹೊತ್ರ್ಗ, ಸಖ್ತಿ ತಗಾದಿ ಹಚ್ಚಿದರೆ, ರೈತರು ಬಹಳ ಗಾಬರಿ ಪಟ್ಟು, ಮುಂದಿನ ಸಾಗುವಳೀ ಬಗ್ಯೆ ಬಹಳವಾಗಿ ತೊಂದರೆ ಪಡುವ ಹಾಗೆ ಮಾಡುತ್ತಾರೆ.

ಧೊ. ಅದು ಹ್ಯಾಗೆ? ಸರಕಾರದ ಸಾಗುವಳಿಗೆ ರೈತರು ತೊಂದರೆ ತೋರುವ ಹಾಗೆ ಮಾಡುವದು ಏನು?

ಅ. ಹ್ಯಾಗಂದರೆ, ಪ್ರಾಕು ಸಂವತ್ಸರ ನಮ್ಮ ಪೈರು ಕೆಟ್ಟು ಹೋದ್ದರಿಂದ, ಸರಕಾರಕ್ಕೆ ಹಣ ತೆರಲಾರದೆ, ಬಹಳ ಲಾಚಾರಿ ಕೆಳಗೆ ಬಂದು, ಒಂದು ವಾಯಿದೆ ಸಾಯಿದೆಯಾದರೂ ಕೊಟ್ಟು, ಹಣ ವಸೂಲು ಮಾಡಿ ಕೊಳ್ಳ ಬೇಕೆಂದು, ಅರ್ಜಿ ಮಾಡಿದ್ದಕ್ಕೆ ಚಿತ್ತಕ್ಕೆ ತಾರದೆ, ಸಖ್ತಿ ಮಾಡಿ, ನಮ್ಮ ಜೆಂದಿಗಿಯಾದ ಎತ್ತು ಕರುಗಳನ್ನು ಮಾರಿಸಿ, ಹಣ ವಸೂಲು ಮಾಡಿ ಕೊಂಡಿರಿ. ಈ

harsh measures be adopted, the ryots will be greatly alarmed, and will give us a great deal of trouble about the cultivation next season.

G. How is that? What can the ryots do to hinder the Government's cultivation?

A. Why, you see, making the suffering they endured for the money an excuse, they will say, "Last year, when, in consequence of our crops being spoiled, we could not pay the money to Government, and became exceedingly poor, we petitioned you to give us some little time, and then collect the money; but without heeding us, you distrained upon us, sold up our property, bullocks and calves, and thus collected the money. This

ವರುಷವೂ ನಮ್ಮನ್ನ ಈ ಊರಿಂದ ಓಡಿಸ ಬೇಕೆಂಬ ಮನಸ್ಸಿನಿಂದ ನಮ್ಮ ಕೊರಳಿಗೆ ಈ ಸಾಗುವಳಿ ಎಂಬ ದೊಡ್ಡ ಚಾಪೇ ಕಲ್ಲನ್ನು ಕಟ್ಟುತ್ತೀರಿ. ಆದ್ದರಿಂದ ನಮಗೆ ಭಯವಾಗುತ್ತೆ ಎಂದು, ಹಣಕ್ಕೆ ಬಹಳ ತಗಾದಿ ಬಿದ್ದ ಭಾನೆಯನ್ನು ತೋರಿಸಿ, ಮಾತನಾಡುತ್ತಾರೆ. ಆದ್ದರಿಂದ ಒಂದು ದಿವಸದಲ್ಲಿ ಫೈಸಲು ಆಗ ತಕ್ಕ ಕಬೂಲಾತಿ ಸಾಗುವಳಿ ತಿಂಗಳು ಒದ್ದಾಡಿದರೂ ಆಗುವದಿಲ್ಲ. ಅದಕ್ಕೆ ಅವರ ಹಾಲು ಅಹವಾಲು ವಿಚಾರಿಸಿ, ಬಾಕೀ ಸಾಕೀ[9] ನಿಂತ ಐವಜಿಗೆ ಒಂದು ವಾಯಿದೇ ಸಾಯಿದೇ ಮೇರಿಗೆ ಸಮಜಾಯಿಷೀ ಮಾಡಿ, ಸುದಾರಿಸಿ, ವಸೂಲು ಮಾಡಿ ಕೊಂಡರೆ, ಮೇಲೆ ಹೇಳಿದ ಮೇರಿಗೆ ಭಾನೆ ಮಾತುಗಳು ರಯಿತರಿಂದ ಹೊರಡುವದಕ್ಕೆ ಆಸ್ಪದವಿಲ್ಲದೆ,

year you tie this great flag-stone, cultivation, round our necks, to drive us away from this village. This frightens us." Thus a rent-roll that might be satisfactorily settled in a single day, will not be settled by a month's struggling. For this reason, if one enquire into their circumstances, and soothe them by giving them a time for paying the outstanding balances, allow them to recover themselves, and then collect the money, there will be no ground for the excuses, as I have mentioned before, from the ryots; and it will be easy for

9. A pleonasm.

ಸರಕಾರದಿಂದ ರೈತರ ರಾಜೀಯಾಗಿ ಕಬೂಲಾತಿ ಸಾಗುವಳಿ ಮಾಡುವದಕ್ಕೆ ಸರಿಯಾಗಿ ಇರುತ್ತದೆ.

ಧೊ. ಆಹಾ! ಹಾಗೋ? ಎಲ್ಲಿ ಹೋಗಿಯೂ[1] ರೈತರ ಸಮಜಾಯಿಷೀ ನೆಟ್ಟಗೆ ಮಾಡ ಬೇಕು. ಅದರಿಂದ ಅವರಿಗೆ ಭರವಸೇ ಹುಟ್ಟಿ, ಸಾಗು ಸಂತು[2] ನೆಟ್ಟಗೆ ಮಾಡುತ್ತಾರೆ. ಅದರಿಂದಲೇ ಸರಕಾರಕ್ಕೆ ಫಾಯಿದೆ ಆಗುವದು.

ಅ. ರೈತರಿಂದಲೇ ಸರಕಾರಕ್ಕೆ ಹಣಾ ಕಾಣಿ ಬೇಕಾದರೆ, ರೈತರ ಸಮಜಾಯಿಷಿಯೇ ನೆಟ್ಟಗೆ ಇರ ಬೇಕೆಂದು, ಈ ಮಾತು ಯಾರು ಹೇಳರು?

ಮತ್ತು ಆ ದೊಡ್ಡ ಮನುಷ್ಯನು ಬೇಕಾದ ಪ್ರಸ್ತಾಪಗಳನ್ನು ಅಮುಲುದಾರನನ್ನು ಕೇಳುತ್ತಾ ಇರುವಲ್ಲಿ, ಹತ್ತು ಘಂಟೆ ಆಯಿತು. ಆಗುವದುನ್ನು,

Government to settle a rent-roll that will satisfy and please the ryots.

G. Ah! is it so? Whatever comes, the ryots must be contented. By that they gain confidence, and cultivate properly. And by this Government is profited.

A. If Government must be supplied with money from the ryots, who won't say that the ryots must be quite satisfied?

Whilst the gentleman was making various enquiries of the amildar, ten o'clock came. When it was past, he said,

1. *lit.* wherever you go. 2. A pleonasm.

ಧೊ. ಸ್ನಾನ ಭೋಜನದ ಹೊತ್ತಾಯಿತೋ? ಆದರೆ ಸ್ನಾನಕ್ಕೆ ನಡಿಯಿರಿ; ನಾವುಸ್ನೂ ಸ್ನಾನಾ ಮಾಡಿ, ಭೋಜನ ಮಾಡಿ ಕೊಂಡು, ಬಿಸಲು ತಗ್ಗುವದುನ್ನು ನಿಮ್ಮ ಕಚೇರಿಗೆ ಬರುತ್ತೇವೆ,

ಎಂದು ಹೇಳಿದ ಮಾತು ಕೇಳಿ, ಆಮೀಲರು ಬಹಳ ಸಂತೋಷ ಪಟ್ಟು, ಅಪ್ಪಣೆ ತೆಗದು ಕೊಂಡು, ಮನೆಗೆ ಬಂದು, ಜಾಗ್ರತೆಯಿಂದ ಸ್ನಾನ ಭೋಜನ ತೀರಿಸಿ ಕೊಂಡು, ಕಚೇರಿಗೆ ಬಂದು, ಕೂತು ಕೊಂಡು, ಕಚೇರೀ ಮುಂದು ಗಡೆ ಯಾವತ್ತು ಗುಡಿಸಿಸಿ, ತಣ್ಣಗೆ ಇರುವ ಹಾಗೆ ನೀರನ್ನು ಚಿಮಿಕಿಸಿಸಿ, ಕಚೇರೀ ಮುಂದಣ ಚಪ್ಪರಕ್ಕೆ ಹಶಿ ತೆಂಗಿನ ಗರಿ ಮುಂತಾದ್ದು ಹೊಚ್ಚಿಸಿ, ಹಚ್ಚಗೆ ಇರುವ ಹಾಗೆ ಅಲಂಕಾರ ಮಾಡಿಸಿ, ತಾನು ಒಳ್ಳೇ ವಸ್ತ್ರಗಳನ್ನುಟ್ಟು ಕೊಂಡು, ತೊಟ್ಟು ಕೊಂಡು, ಶಿ

G. Is it time to bathe and breakfast? Well, do you go to your ablutions; and I too shall bathe and take breakfast, and come to your office when the heat is abated.

Hearing which, the amildar was much pleased; took leave; came home; quickly despatched his ablutions and breakfast; came to his office; sat down; had all the front of the office swept and sprinkled with water to make it cool; had the pandal in front of the office covered with fresh cocoanut branches, &c.; adorned it that it might be green; put on and dressed himself in his best

ರಸ್ತೇದಾರರು, ಕಿಲ್ಲೇದಾರರು, ಇನ್ನು ಇರ ತಕ್ಕ ಕಚೇರಿ ಮಂಡಲೀ ಯಾವಜ್ಜನರು[3] ಶುಭ್ರವಾದ ವಸ್ತ್ರಗಳನ್ನುಟ್ಟು ಕೊಂಡು, ತೊಟ್ಟು ಕೊಂಡು, ತಮ್ಮ ತಮ್ಮ ಮಿಸಿಲಿನ ಜಾಗದಲ್ಲಿ ಕುಳಿತು ಇರುವ ಹಾಗೆಯೂ, ಕೆಲಸಗಳ ನೋಡುವ ಹಾಗೂ ನೇಮಿಸಿ, ಕೆಲವು ಜನ ಶೆಟ್ಟಿ ವರ್ತಕರ ಕರಿಸಿ, ಕಚೇರಿ ಭರಾಯಿಸಿ ಕೊಂಡು, ಒಂದು ಕಡೆ ಹಣದ ಪರಖಾವಣಿ, ಒಂದು ಕಡೆ ಲೆಖ್ಖದ ಸಮಜಾಯಿಷಿ, ಒಂದು ಕಡೆ ಮೇಜಸ್ಟ್ರೇಟು[4] ವಿಚಾರಣೆ, ಒಂದು ಕಡೆ ಬಾಕೀ ಸಾಕೀ ದರ್ಯಾಪ್ತಿ, ಒಂದು ಕಡೆ ಫಿರ್ಯಾದಿ, ಒಂದು ಕಡೆ ರೈತರ ವಿಚಾರಣೇ ಮಾಡುತ್ತಾ, ಸಂತೋಷದಿಂದ ಕಾರಭಾರ ಮಾಡುತ್ತಾ ಇದ್ದನು. ಆ ಸಮಯದಲ್ಲಿ ಈ ದೊಡ್ಡ ಮನುಷ್ಯನು ಸಾ

clothes; ordered the sheristedar, killedar, and all the office people to put on and dress themselves in clean clothes, to be sitting in their respective places, and attending to their duties; called a few merchants and tradespeople, and filled the office. He himself was gladly superintending, on one side the counting of money; on another the settling of accounts; on another side magistrate's business; on another enquiries into outstanding balances; on another the hearing of complaints; on another examination into farmers' cases; when about half past five o'clock, the pleasant time of evening, the

3. ಯಾವತ್ತು ಜನರು.

4. Eng.

ಯಂಕಾಲಕ್ಕೆ ಎರಡು ಘಳಿಗೆ ಹೊತ್ತು ಇರುವ ಒಳ್ಳೇ ಗುಜರೀ ಹೊತ್ತಿನಲ್ಲಿ ತಾನು ಇಳಿದಿರುವ ಬಂಗಲೆಯಿಂದ ಹೊರಟು, ಮುಂದೆ ಇಬ್ಬರು ಸೇವಕರು ನಡೆಯಲಾಗಿ, ಪಾದಚಾರಿಯಾಗಿಯೇ ತನ್ನ ವಸ್ತ್ರಗಳು ಅಲಂಕಾರ ಮಾಡಿ ಕೊಂಡು, ಕೈಲಿ ಒಂದು ಬೆತ್ತದ ಛಡೀ ಹಿಡಿ ಕೊಂಡು, ಹೊರಟು, ಪೇಟೆಯೊಳಗೆ ಬರುತ್ತಾ, ಎರಡು ಕಡೇ ಅಂಗಡಿಗಳೂ, ಮುಂಗಟ್ಟುಗಳೂ,[5] ಮನೆಗಳೂ, ಮಠಗಳೂ, ದೇವಸ್ಥಾನಗಳೂ, ಮುಸಾಫರ ಖಾನೆಗಳೂ, ರಚ್ಚೆಗಳೂ,[6] ಜಗತಿಗಳೂ, ಕೈಸಾಲೆಗಳೂ, ಸಾಲಾಗಿರುವ ತೆಂಗಿನ ಮರಗಳೂ, ಅದರಲ್ಲಿ ಗೊನೆ ಗೊನೆಯಾಗಿ ಬಿಟ್ಟಿರುವ ಕಾಯಿಗಳೂ, ಹುವ್ವಿನ ಹೊಂಬಾಳೆಗಳೂ, ಆ ಮರಗಳ ಮೇಲೆ ಕೂತು ಕೊಂಡು, ಹೊಂಚಿ, ಹೊಂಚಿ, ಕೆ

gentleman having set out from the bungalow where he was staying, with two servants before him, on foot, handsomely dressed, and a small cane in his hand, came through the town, looking on both sides at the shops, front shops, houses, schools, temples, travellers' rest houses, platforms round trees, raised seats, verandahs, rows of cocoa-nut trees, with their clusters of nuts and bunches of flowers; and the pranks of the monkeys upon the trees, sitting, peeping about, jumping down

5. The verandahs in which things are sold, as distinct from the shop behind, where they are stored at night.

6. The raised platforms around the foot of trees.

ಳಗೆ ಇರುವ ಅಂಗಡಿಗಳಲ್ಲಿ ಇಳೀ ಬಿದ್ದು, ಕೈಗೆ ಶಿಕ್ಕಿ
ದ ಭಕ್ಷಣಗಳ ಎತ್ತಿ ಕೊಂಡು ಹೋಗಿ, ಮರಗಳ ಮೇ
ಲೆ ಹಾರಿ, ಕೂತು ಕೊಂಡು, ಹಲ್ಲು ಕಿರಿಯುವದೇ ಕೆ
ಳಗೆ ಹೋಗುವ ಜನಗಳ ಅಣಕಿಸುವ ಹಾಗೆ ಕುಂದಾ
ಟಗಳಾಡುವ ಕಪಿಗಳ ತಮಾಷೆಗಳೂ ಮುಂತಾದವುಗಳ
ನ್ನು ನೋಡುತ್ತಾ, ನೋಡುತ್ತಾ, ಪೇಟೆ ದಾಟಿ, ಕೋ
ಟೆ ಬಾಗಿಲ ಬಳಿಗೆ ಬಂದು, ಹೊಕ್ಕು, ಬಾಗಿಲಿನಲ್ಲಿ ಪ
ಹರೆ ಇರುವ ಕಂದಾಚಾರದ ಜನಗಳು ಮುಂತಾದವರು
ಬಾಗಲುಗಳ ಜಗಲಿಗಳಿಂದ ಕೆಳಕ್ಕೆ ಧುಮಿಕಿ, ಸಲಾ
ಮುಗಳು ಮಾಡಲೂ; ಅವರಿಗೆ ಬದುಲಾಗಿ ಸಲಾಮು ಕೊ
ಡುತ್ತಾ, ಕೋಟೇ ಒಳಗಣ ಬೀದಿಯಲ್ಲಿ ಹೊರಟು, ಆ
ಕೋಟೇ ಒಳಗೆ ಮಧ್ಯ ರಂಗದಲ್ಲಿ ಇರುವ ಕಚೇರೀ ಬಳಿ
ಗೆ ಬರುವ ದೊಡ್ಡ ಮನುಷ್ಯನ ಸಮಾಚಾರ ಮುಂಚೆ

into the shops below, carrying off whatever eatables they could lay hands upon, springing up into the trees, sitting, grinning and making antics in mimicry of the passers by below. Looking at these and other things, he passed through the town; came to the fort gate; and as he entered, the peons guarding the gate, and others jumped down from the seats in the gateway, and made salaam. Returning their salaam, he entered the street within the fort. The amildar having heard before that the gentleman was coming towards his office,

ತವಾಗಿಯೇ ತಿಳಿದು, ಅಮುಲುದಾರನು ಎದ್ದು, ಬಂದು,
ಮೆಟ್ಟ್ಲುಗಳನ್ನು ಹತ್ತುತ್ತಿರುವ ಸರದಾರನ ಕೈಗೆ ಕೈಗೊ
ಟ್ಟು, ಮರ್ಯಾದೆಯಿಂದ ಕಚೇರೀ ಒಳಕ್ಕೆ ಕರದು ಕೊಂ
ಡು ಬಂದು, ಕುರ್ಚಿ ತರಿಸಿ, ತಾನು ಕೂತು ಕೊಳ್ಳುವ
ಸ್ಥಳದಲ್ಲಿ ಹಾಕಿಸಿ, ಕುರ್ಚೀ ಮೇಲೆ ಈ ಸರದಾರನನ್ನು
ಕುಳ್ಳಿರಿಸಿ, ತಾನು ಕೆಳಗೆ ಹಾಸಿಕೇ ಮೇಲೆ ಕೂತು ಕೊ
ಳ್ಳುವದಕ್ಕೆ ಪ್ರಯತ್ನ ಮಾಡುವ ಆಮೀಲನ[7] ಕಂಡು,
ಮರ್ಯಾದೆ ಎಣಿಸಿ, ಇನ್ನೊಂದು ಕುರಿಚಿ ತರಿಸ ಬಹು
ದೆಂಬದಾಗಿ, ಸರದಾರ ಹೇಳಲೂ; ತಕ್ಷಣದಲ್ಲಿ ಮತ್ತೊಂ
ದು ಕುರಿಚಿಯನ್ನು[8] ತರಿಸಿ, ಆ ಸರದಾರನ ಬಲಗ
ಡೆ ಬಾಜುನಲ್ಲಿ ತಾನು ಕೂತು ಕೊಂಡನು. ಕಚೇರೀ
ಜನಗಳು ಯಾವತ್ತು ತಮ್ಮ ತಮ್ಮ ಮಿಸಿಲಿನ ಸ್ಥಳ

which was situated in the centre of the fort, rose (from his seat,) came forward, and giving his hand to the gentleman who was ascending the steps, politely conducted him into the office, called for a chair, ordered it to be placed where he himself was accustomed to sit, seated the gentleman upon it, and was about to seat himself on the carpet. The gentleman observing the amildar, recollected politeness, and said, "Have another chair brought." Immediately he ordered another chair, and himself sat down at the gentleman's right hand. All the office people, without mov-

7. Acc. 8. Which he had ready for the purpose.

ಗಳನ್ನು ಬಿಟ್ಟು ಈಚೆಗೆ ಬಾರದೆ, ಅಲ್ಲಿಯೇ ನಿಂತು ಕೊಂಡು, ಸರದಾರನಿಗೆ ಸಲಾಮುಗಳು ಮಾಡಿ, ಯಥಾ ಪ್ರಕಾರ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತು ಕೊಂಡರು.

ಈ ಮೇರಿಗೆ ಲಕ್ಷಣವಾಗಿ ಇರುವ ಅಮಲದಾರನ ಕಚೇರಿಯನ್ನು ನೋಡಿ, ಬಹಳ ಸಂತೋಷ ಪಡುತ್ತಾ, ನಾಲ್ಕು ಕಡೆಯೂ ನೋಡುತ್ತಾ, ಒಳ್ಳೇ ಆಯುಕಟ್ಟಾದ ಕಚೇರಿ ಎಂದು, ಮನಸ್ಸಿನಲ್ಲಿ ತಿಳಿದು, ಬಾಯಿಯಿಂದಲೂ ಕಚೇರಿ ಒಳ್ಳೇ ಸ್ಥಳದಲ್ಲಿ ಚನ್ನಾಗಿ ಕಟ್ಟಿಸಿ ಇಧೆ, ಎಂದು ಹೇಳುತ್ತಾ, ಲೋಕಾಭಿರಾಮವಾಗಿ ಪ್ರಸ್ತಾಪಗಳು ಮಾಡುತ್ತಾ ಇರುವ ಅಷ್ಟರಲ್ಲೇ ಸಾಯಂಕಾಲದ ಹೊತ್ತಾಯಿತು. ತಕ್ಷಣದಲ್ಲಿ ಕಚೇರಿಯಲ್ಲಿ ದೀಪಸ್ತಂಭಗಳ ಮೇಲೆ ದೀಪಗಳನ್ನಿಟ್ಟರು. ಮಾಮಲೇದಾರನು ನೋ

ing from their places, stood up where they were, made salaam to the gentleman, and sat down in their places as before.

When he saw the amildar's office which was so neat, he was delighted, looked round on all sides, and perceiving what a well arranged office it was, said, "the office is in a good situation, and well built;" and was conversing pleasantly on current topics, when evening closed in. Instantly they lighted lamps in the office, and set them upon stands; and as the amildar was looking around,

ಡುತ್ತಾ ಇರಲಾಗಿ, ಎಲ್ಲಾ ಕಡೆ ವರದೀ ಜನಗಳು[9] ಬಂದು, ಸಾಲಾಗಿ ನಿಂತು ಕೊಂಡರು.

ಮಶಾಲಚಿ ಬಂದು, ಮಶಾಲು ಹಚ್ಚಿಸಿ, ಮುಂಚಿತವಾಗಿ ಸರದಾರನಿಗೆ, ಅಮಲದಾರನಿಗೆ ಸಹ, ಸಲಾಂ ಮಾಡಿದನು.[1] ಸಂಗಡಲೇ ಬಾರಿನ ಶಿಫಾಯಿಗಳು ತಮ್ಮ ದಿರಸುಗಳು[2] ಸುದಾ, ಹವಾಲದಾರರ ಮುಂದಿಟ್ಟು, ಕೊಂಡು, ಅದೇ ಮೋರಿಗೆ ಸರದಾರನಿಗೂ ಅಮಲದಾರನಿಗೂ ಸಹ ಸಲಾಂ ಮಾಡಿದರು. ಆ ಮೇಲೆ ಅಠವಣೆ ದಫೇದಾರರು, ಸಂಗಡಲೇ ಪೇದೇರು[3] ಸಹ ಸಲಾಂ ಮಾಡಿದರು. ಸಂಗಡಲೇ ಕಂದಾಚಾರದ ಹೋಬಳಿದಾರರೂ[4] ದಫೇದಾರರೂ[5] ಪೇದೇರು ಸಹಾ ಸಲಾಂ ಮಾಡಿದರು.

the reporters from all quarters came, and stood in a line.

The torch-bearer came forward, lit his torch, and made salaam first to the gentleman then to the amildar. On this, the armed soldiers in their uniforms, with the havildar at their head, in like manner saluted both the gentleman and the amildar. After them, the civil duffadars, accompanied by their peons, made salaam. Then the military hobalidars, duffadars, and policemen made their

9. Persons sent out to look after and bring intelligence of what is being done in their several departments. All bring their reports in the evening to the amildar.

1. This is called the "lamp's salutation."

2. Eng. "dress."

3. pl. for ಪೇದೆಯರು, more commonly ಪೇದೆಗಳು.

4. An officer over thirty or forty men.

5. An officer over ten men.

ಎಲ್ಲಾ ಆದ ತರುವಾಯು, ಹಲಗೆಯುವರು, ಕೊಂಬಿನವರು[6] ದೂರದಿಂದ, ದೀರ್, ದೀರ್ ಎಂದು ಸಲಾಂ ಮಾಡಿದರು.

ಆ ಮೇಲೆ ಮಶಾಲು ತೆಗೆದು ಕೊಂಡು, ಮಶಾಲಚಿ ಹಿಂದಕ್ಕೆ ಹೋದನು.[7] ಸಂಗಡಲೇ ವರದೀ ಜನಗಳಲ್ಲಿ ಮೊದಲು ಬಾರಿನ ಹವಾಲದಾರರು, ಕಚೇರಿ ಪಹರೆ ಎಂಬದಾಗಿ ಇಷಾರೆ ಕೊಟ್ಟು, ಹೋಬಳಿಯಿಂದ ಹಣ ಬಂದದ್ದೂ; ಪರಖಾವಣಿ ಆದದ್ದೂ; ಆಗದೆ, ಅಮಾನತ್ತು ತೋಷೇ ಖಾನೆಯಲ್ಲಿ ಇರುವದೂ; ಕಚೇರಿಯಲ್ಲಿರುವ ಸಾಮಾನುಗಳೂ; ಪೆಟಾರೆಗಳೂ; ಮೊಹರಿನ ಬಂದೋಬಸ್ತೂ; ಪಹರೆಯಲ್ಲಿರುವ ಆಸಾಮಿಗಳೂ; ದರಿಯಾಪ್ತಿ

salaams. When all had done, the drummers and trumpeters called out from a distance, "my lord, my lord," and made salaam.

Then the torch-bearer, taking his torch, retired. Upon which, first of the reporters, the military havildar announced, "office guard!" reported everything briefly or in detail,—the arrival of money from the district; what had been counted; what had been deposited in the treasury uncounted; things in the office; boxes; what things had been sealed; persons in custody; persons who had

6. The drummers, usually two, are chucklers; the trumpeters, who blow the long horn in front of the amildar to announce him, are pariahs. Consequently, they are not allowed to enter the office, but make their salutations from the street.

7. Retires and puts out his torch.

ಯಾಗಿ ಬಿಡುಗಡೆಯಾದ ಆಸಾಮಿಗಳೂ; ಇನ್ನು ಹೆಚ್ಚು ಗಟ್ಲೆ ಏನಾದರೂ ಕಚೇರಿಯಲ್ಲಿ ನಡದ ಸಂಗತಿಗಳು ಯಾವತ್ತೂ ಮೊಗವಾಗಿಯೂ ಖುಲಾಸಾಗಿಯೂ ವರದಿ ತಿಳಿಸಿ, ವರದೀ ಪಟ್ಟಿಗೆ ಅಮಲದಾರರು ದಸಕತ್ತು ಮಾಡಿದ ಹಾಗೂ, ಇನ್ನೂ ಏನೋ ರಹಸ್ಯದ ಮಾತು ತಮ್ಮ ಕಿವಿಯಲ್ಲಿ ಅಮಲದಾರರು ತಿಳಿಸುವ ಹಾಗೂ ಕೇಳಿ, ಸಲಾಂ ಮಾಡಿ, ಹೊರಡುವರು.

ಆ ಮೇಲೆ ಅಠವಣಿ ದಫೇದಾರರ ವರದೀ, ಸಾಗುವಳೀ ವಿಚಾರಣೆಯು ಮೇಲೆ ಇರುವಂಥಾವರು; ಫಲಾನಾ ಇಂಥಾ ಗ್ರಾಮದ ಇಂಥಾ ಕೆರೇ ಕೆಳಗೆ ಫಲಾನೆ ರೈತರು ಬಂದು, ಇಷ್ಟು ಖಂಡುಗ ಗದ್ದೆ ಉತ್ತು ಇಧಾರೆ. ಎರಡು ಶೆಬ್ಬಿ[8] ಆಯಿತು; ಮೂರನೇ ಶಾಡೆಗೆ ಗದ್ದೇ ಉಳುತ್ತಾ ಬೀ

been released after examination ; and any thing else of importance that had taken place in the office. Then made as though the amildar was signing his report, listened as though the amildar was telling something secret into his ear, made salaam, and departed.

Then came the report of the civil duffadars, who superintend the arrangements for cultivation :— "Below such and such a tank of such and such a village, such and such ryots have come and ploughed so many *khandugas* of wet land. Two ploughings are over; they are ploughing for the third

8. A ಶೆಬ್ಬಿ is ploughing the field once lengthwise, and once crosswise. After five such ploughings the land should shake with the wind, somewhat like jelly. It is then fit to receive the seed.

ಜಾ ಕಟ್ಟುತ್ತಾರೆ. ನಾಲ್ಕನೇ ಐದನೇ ಶೆಬ್ಬಿ ಆಗುವದು ನ್ನು ಗದ್ದೆ ಚನ್ನಾಗಿ ಗಳುಗು ಮಾಡಿ, ಮೊಳೆ ಚೆಲ್ಲುತ್ತಾ ರೆ. ಅದಕ್ಕೆ ಸಮೀಪವಾಗಿಯೇ ಇಂಥಾ ಗ್ರಾಮದ ರೈ ತರಿಗೆ ಇಷ್ಟು ಖಂಡುಗ ಗದ್ದೇ ಸಾಗುವಳಿ ಆಗಿ ಇಧೆ. ಅದಕ್ಕೆ ಮೇಲೆ ಇರುವ ಕಾರ್ತೀಕ ಗದ್ದೆ ಕೊಯಿಲಿಗೆ ಬಂದು ಇಧೆ. ನಾಲ್ಕಾರು ದಿನದಲ್ಲಿ ಕಟಾವು ಮಾಡಿಸ ಬೇಕು. ಈಗ ನಾಲ್ಕು ದಿನಕ್ಕೆ ಮುಂಚಿತವಾಗಿ ಬಿತ್ತಿ ದ ಗದ್ದೆ ಯಾವತ್ತು ಚನ್ನಾಗಿ ಪೈರು ಕಟ್ಟೆ ಇಧೆ. ಆ ಗದ್ದೇಲಿ ನಿನ್ನೆಯಿಂದ ಮೂಗಿ ಕಳೆ ಹಿಸುಕುತ್ತಾರೆ.[9] ಹ ರಿ ನೀರು ಗುತ್ತಿಗೇ ಗದ್ದೆಗಳು ಇಪ್ಪತ್ತು ಖಂಡುಗ ವರಿ ವಿಗೂ ಸಾಗುವಳಿ ಆಗಿ ಇಧೆ. ಗೂಡೇ ಗದ್ದೆಗಳೂ,

ploughing, and tying up the steeped seed. When the fourth and fifth ploughings are finished, they will make the land of the proper consistence, and sow the sprouted seed. Near the same place, so many *khandugas* of wet land are let to the ryots of such a village. The Kàrtika crop situated above that, is ready for cutting, and must be cut in four or six days. All the rice planted four days ago, has come up nicely. They have been choking the young weeds in that ground since yesterday. The contract rice grounds that are supplied with running water (from the tanks,) are let to the extent of twenty *khandugas*. Also the

9. The land is infested with very small weeds, which must be killed in the earliest stage, by squeezing them with the hand; care being taken to avoid injuring the young rice plants.

ಯಾತದ ಗದ್ದೆಗಳು ಸಹ, ಹತ್ತೆಂಟು ಕಡೆ ಸಾಗುವಳಿ ಆಗಿ ಇಧೆ. ಮೇಲಿನ[1] ತೂಬಿನಿಂದ ಈ ದಿನ ನೀರು ಬಿಡಿಸಿ ಇಧೇನೆ. ಆ ಕಾಲಿವೆಯೂ ಸಾಗುವಳಿ ಆಗ ಬೇಕು. ನೀರಿನ ಸುಮಾರು ನೋಡಿ ಕೊಂಡು, ಗದ್ದೇ ಸಾಗುವಳೀ ಮಾಡ ಬೇಕೆಂಬ ಅಂದೇಶೆಯಿಂದ ಇಧೇನೆ. ಅಪ್ಪಣೆಯು ಪ್ರಕಾರ ನಡಿಯುತ್ತೇನೆ,

ಎಂದು, ವರದೀ ಹೇಳಲು; ಆಮಿಲ್ದಾರು ಹುಕುಂ ಮಾಡುವದೇನಂದರೆ—

ದಫೇದಾರಾ, ನೀನೂನ್ನೂ ಇನ್ನೂ ಅಮಾನಿ ಕೆರೆ[2] ತೈನಾತಿ ಇರುವ ಜವಾನರು ಸುದಾ ದಿನ ಚರಿಯಲ್ಲೂ ಗದ್ದೇ ವಿಚಾರಣೆ ಚನ್ನಾಗಿ ತೆಗದು ಕೊಳ್ಳ ಬೇಕು.

ground watered by means of baskets, and the grounds watered by means of *yātas*, are let in eight are ten places. I have let on the water from the upper sluice to day. (The ground along) that channel is yet to let. Guessing the quantity of water, I am in doubt whether it should be let as wet land, but will do as you command."

When he had delivered his report, the amildar gave this order :—

"Duffadar! You and the peons that have charge of the government tank, must look well after the wet lands every day. During the present

1. *i. e.* on the higher level.
2. *i. e.* tanks that do not belong to or are assessed with the village, but let separately.

ಈ ಮಳೆ ಆಗುವ ವರಿಗೆ[3] ಗದ್ದೆಗಳು ಯಾವತ್ತುನ್ನು ಐದು ಶೆಬ್ಬಿಗಳು ತೀರಿ, ಬಿತ್ತನೆ ಬೀಳ ಬೇಕಾಗುತ್ತೆಯಾಗಿ, ಜಾಗ್ರತೆಯಿಂದ ಚನ್ನಾಗಿ ಉಳಿಸ ಬೇಕು. ಇನ್ನೂ ಮಳೆಗಳು ಬರುತ್ತವೆ; ಕೆರೆಗೆ ನೀರು ಭರ್ತಿಯಾಗುತ್ತೆ. ಮೇಲಿನ ಕಾಲಿವೆಯನ್ನು ಗ್ರಾಮಾನುಗ್ರಾಮಗಳ ರೈತರಿಗೆ ಸಾಗುವಳೀ ಮೊಕರೂರು ಮಾಡುವದು.[4] ಕೆಳಗೆ ಬಿತ್ತಿರುವ ಗದ್ದೆಯನ್ನು ಚನ್ನಾಗಿ ನೋಡಿ, ಎಂಟು ದಿವಸಕ್ಕೆ ಒಂದಾವರ್ತಿ ಕಳೆಯನ್ನು ಚನ್ನಾಗಿ ತೆಗಿಸುವದು. ಕಳೆ ಬಲಿತು ಹೋದರೆ, ಗದ್ದೆ ಕೆಟ್ಟು ಹೋಗುತ್ತೆ. ಹರಿ ನೀರು ಗುತ್ತಿಗೆ ಗದ್ದೆಗಳೂ, ಯಾತದ ಗದ್ದೆಗಳೂ, ಗೂಡೇ ಗದ್ದೆಗಳೂ, ಈಗ ಸಾಗುವಳಿ ಆಗಿ ಇರುವದು

rain, all the rice grounds ought to be ploughed five times, and the seed sown. So be quick, and get them well ploughed. More rains are coming, and the tank will be filled. Settle with the ryots of the different villages for the cultivation of the (lands along the) upper channel. Also look well after the land that is sown below, and have it well weeded once a week. If the weeds grow up, the crop will be spoiled. And get the accountant to write out a detailed list of each tank, as to how much contract grounds with running water, how much ground watered by *yātas*, how much watered

3. Each rain lasts about a fortnight.
4. A form of the imperative.

ಎಷ್ಟು? ಅಯಿಂದಾ ಸಾಗುವಳಿ ಆಗ ತಕ್ಕ ಜಮೀನು ಎಷ್ಟು? ಈ ಬಗ್ಯೆ ಕಾರುಕೂನರ ಕಡೆಯಿಂದಾ ಆಯಾ ಕೆರೆಗಳ ತಪಸೀಲು ಪಟ್ಟಿ ಬರೆಸಿ ಕೊಂಡು ಬರುವದು.[5] ಸಾಗುವಳೀ ವಿಷಯದಲ್ಲಿ ಲೇಶ ಸುಸ್ತಿಯಾದ ವರ್ತಮಾನ ಕೇಳಿದಾಗ್ಯೂನ್ನೂ, ನಿಮ್ಮ ಚಾಕರಿಗಳು ಬರತರ್ಫ ಆಗುವದರಲ್ಲಿ ಅಂತರವಿಲ್ಲ. ಈ ಅರ್ಥ ತಿಳಿದು, ನಿಮ್ಮ ನಿಮ್ಮ ಚಾಕರಿಗಳಲ್ಲಿ ನೀವು ಹಾಜರಾಗಿ ಇದ್ದು ಕೊಂಡಿರುವದು. ನಾವುನ್ನು ನಾಳಿದ್ದು ಸಾಯಂಕಾಲಕ್ಕೆ ಸಾಗುವಳೀ ನೋಡುವದಕ್ಕೆ ಬರುತ್ತಾ ಇಧೇವೆ,

ಎಂದು ಹೇಳಿ, ಕಳುಹಿಸಿದರು.

ತಹಶೀಲಿಗೆ ಹೋಗಿ ಇದ್ದ ವಾಲೇಕಾರರ ವರ್ದಿ;—

ಬುದ್ಧೀ, ನಾನು ಫಲಾನಾ ಹೋಬಳಿಗೆ ಹೋಗಿ ಇ

by baskets, is let. And how much land may yet be let. If I hear that you are at all idle about the cultivation, your situations are gone, and no mistake. So mind this, and be always at your posts. I am coming myself the day after to morrow in the evening, to inspect the cultivation."

With this, he dismissed them.

The report of the peons who had gone to collect revenue :—

" My lord, I went to such a district. The

5. Imp.

ದ್ದೆನು. ಶೇಕದಾರ್ರು ಶಾನುಭಾಗರು ಯಾವತ್ತುನ್ನು ಈ ಕಿಸ್ತಿನ ಹಣವೆಲ್ಲಾ ವಸೂಲು ಮಾಡುತ್ತಾರೆ. ನಾಳಿದ್ದು ಸಾಯಂಕಾಲಕ್ಕೆ ಇರಸಾಲು ತೆಗದು ಕೊಂಡು ಬರುತ್ತಾರೆ. ಈ ಬಗ್ಯೆ ಶೇಕುದಾರರು ಬಿನ್ನವತ್ತಲೆ ಬರೆದು ಇದ್ಧಾರೆ,

ಎಂಬದಾಗಿ ಹೇಳುವದುನ್ನು, ಮುಸಿಷಿ, ಆ ಶೇಕದಾರನ ಬಿನ್ನವತ್ತಲೆಯುನ್ನು ಸುನಾವಣೀ ಮಾಡುವದೇನಂದರೆ;—

ಮಹಾ ರಾಜೇಶ್ರಿ ಸುಬೇದಾರ್ರು ಸ್ವಾಮಿಯುವರ ಚರಣ ಸನ್ನಿಧಾನಂಗಳಿಗೆ ಆಜ್ಞಾಧಾರಕ ಆಯೆಂದೂರು ಹೋಬಳೀ ಶೇಕುದಾರ ಮಲ್ಲಿಕಾರ್ಜನಯ್ಯನು ಮಾಡುವ ಬಿನ್ನಹ, ಸ್ವಾಮೀ;—

sheikdars, shānabhàgas and all of them are collecting all the money of the present instalment. The evening after to morrow they will bring the remittance. The sheikdar has written a petition about it."

As soon as he said this, the moonshee read the sheikdar's petition as follows :—

*To the presences of the feet of the Most Illustrious Emperor, my lord Subadar, your humble servant Mallikārjuna, Sheikdar of the district of Ayendùr, presents his petition, my Lord :—*

ಸನ್ ೧೮೪೨ನೇ ಇಸವಿ ಶಪಟಂಬರು ತಾರೀಖು ೨೦ ವರಿವಿಗೆ ಸರಕಾರದ ಚಾಕರಿಯಲ್ಲಿ ಹಾಜರು ಇಧೇನೆ, ಸ್ವಾಮಿ. ಹೋಬಳಿ ಮಜಕೂರಿನ ಈ ಖಿಸ್ತಿನ ಹಣವ್ಯಾವತ್ತು ವಸೂಲು ಮಾಡುವದಕ್ಕೆ ಗ್ರಾಮಾನುಗ್ರಾಮ ಶ್ಯಾನಭಾಗರಿಗೆ ಸಖ್ತು ತಾಕೀತೀ ಮಾಡಿ, ಇದು ವರಿವಿಗೂ ಜಮೇಯಾಗಿ ಇರುವ ಅಯಿವಜು ೫೮೮ ವರಹಾ, ಬಾಕಿ ಈ ಖಿಸ್ತಿಗೆ ಭರತಿಯಾಗಿ, ೧೨೦ ವರಹಾ ಆಗ ಬೇಕು. ಅದನ್ನು ನಾಳೆ ನಾಳಿದ್ದು ಸಾಯಂಕಾಲದ ಒಳಗಾಗಿ ವಸೂಲು ಆಗಿ ಬರುತ್ತೆ. ಭರತೀ ಆದ ಕೂಡ್ಲೆ ಇರಸಾಲು ಗಂಟು ಕಟ್ಟಿಸಿ, ಸನ್ನಿಧಾನಕ್ಕೆ ತೆಕ್ಕೊಂಡು ಬರುತ್ತೇನೆ, ಸ್ವಾಮಿ. ಅಷ್ಟು ಸಾವಕಾಶವಿಲ್ಲ; ಈ ದಿನವೇ ಕಚೇರಿಗೆ ಬರ ಬೇಕೆಂದು, ಬೋರನಾಯಕನು ತಿಮ್ಮನಾಯಕನು ಸಹಾ ಬಹಳ ತಗಾದಾ ಮಾಡುತ್ತಾ

*Up to the 20th of September A. D.* 1842, *I am intent on Government business, my lord. I have given strict orders to the Shānabogas of the different villages to collect all the money of this instalment for the above mentioned district. The money collected up to this time is* 588 *pagodas. The balance to complete this instalment is* 120 *pagodas ; which will be collected to-morrow, or within the evening of the day after. As soon as it is complete, I shall have the remittance packed up, and bring it to your presence, my lord. Both Boranāik and Timmanāik urgently insist that I must not delay so long,*

ರೆ. ಈ ಬಗ್ಯೆ ತಿಮ್ಮನಾಯಕನು ಸನ್ನಿಧಾನಕ್ಕೆ ಬಂದು ಇದ್ದಾನೆ. ಬೋರನಾಯಕ ಇಲ್ಲಿಯೇ ಇದ್ದಾನೆ. ನಾಳಿದ್ದು ವರಿವಿಗೂ ಇದ್ದು, ಖಿಸ್ತಿನ ಹಣ ಭರತೀ ಮಾಡಿ ಕೊಂಡು, ಇರಸಾಲು ತರುವ ಮೇರಿಗೆ ಬೋರನಾಯಕಗೆ ತಾಕೀದೀ ಅಪ್ಪಣೆ ಆಗ ಬೇಕು, ಸ್ವಾಮಿ.

ಹೋಬಳಿ ಮಜಕೂರು ಗ್ರಾಮಾನು ಗ್ರಾಮಗಳ ಬಳಿಯು ನಿಂನೇ ರಾತ್ರಿ ಒಳ್ಳೇ ಮಳೆಯಾಗಿ, ಇದು ವರಿವಿಗೂ ಬಿತ್ತಿ ಇರುವ ಯಾವತ್ತು ಪೈರುಗಳೂ ಚಂನಾಗಿ ಇಧೆ.

ಮೊಂನೇ ದಿವಸ ರಾತ್ರಿ ಚೀಲೇನ ಹಳ್ಳಿಯ ಬಳಿಯ ಇರುವ ಮುಸಾಫರ ಖಾನೆಗೆ ಸಾಯಂಕಾಲದಲ್ಲಿ ಕೆಲವರು ಮುಸಾಫರರು ಬಂದು, ಇಳಿದು ಇದ್ದರು. ಅವರನ್ನ ಗ್ರಾಮಸ್ಥರೂ, ತೋಟಿ, ತಳವಾರರೂ, ಕಾವಲುಕಾ

*but come to the office to day. On this account Timmanāik has come to your presence. Boranāik is still here; and I beg you will order Borānāik to stay till tomorrow, to make up the instalment money, and bring the remittance, my lord.*

*In the villages and hamlets of the aforesaid district, there was a good fall of rain last night, and all the crops sown up to this time are looking well.*

*They say that the night before last some travellers came in the evening, and put up in the travellers' rest house near Chīlēnahully. The villagers, the village servant, watchmen, policemen, and peons, all*

ರರೂ, ಪಾಳೇಕಾರರೂ ಎಲ್ಲರು ಕಂಡು, ನೀವು ಯಾರು? ಎಲ್ಲಿ ಹೋಗುತ್ತೀರಿ? ಎಂಬದಾಗಿ ಕೇಳಿದ್ದಕ್ಕೆ ನಾವು ಕೊಯಿಮುತ್ತೂರಿಂದ ಬರುತ್ತೇವೆ; ಗದ್ದವಾಲಿಗೆ ಹೋಗುತ್ತೇವೆ ಎಂಬದಾಗಿ, ಹೇಳಿದರಂತೆ. ಆ ಜನಗಳು ಛಡೇ ಜನಗಳಾಗಿ[6] ಇರುವ ಮುಂತಾದ ರೀತಿಯನ್ನು ನೋಡಿ, ಈ ಕಾವಲುಕಾರರು ಮುಂತಾದವರು, ಈ ಜನಗಳ ರೀತಿ ನೋಡಿದರೆ, ಮೋಸಗಾರರಾಗಿ ತೋರುತ್ತಾರೆಂದು ತಿಳಿದು, ಗ್ರಾಮದ ಬಂದೋಬಸ್ತಿನಲ್ಲಿ ಹುಷಾರೆಯಾಗಿ, ತಮಗೆ ಸಮೀಪ ಗ್ರಾಮಸ್ತರನ್ನ ಸಹ ಕೂಡಿಸಿ ಕೊಂಡಿದ್ದರು.

ಈ ಮೇರೆಗೆ ಇರುವಲ್ಲಿ, ರಾತ್ರಿ ಹನ್ನೆರಡು ಘಳಿಗ್ಯೆ ಊರು ಮುಂದೆ ಮುಸಾಫರ ಖಾನೆಯಲ್ಲಿ ಇಳಿದು ಇದ್ದ

*saw them, and asked them, "Who are you? Where are you going?" To which they replied, "We come from Coimbatoor; and are going to Gadwāl." Observing that the people were all men, and other circumstances, the policemen and the rest suspecting that they were rogues, took every care for the safety of the village, and collected also some of the neighbouring villagers.*

*Whilst things were in this state, about eleven o'clock at night, the aforesaid men, who had alighted at the travellers' rest house in front of the village,*

6. *i. e.* men without their families, and therefore not like travellers, who have their families along with them.

ಸದರಿಯುವರು ಇಪ್ಪತ್ತು ಇಪ್ಪತ್ತೈದು ಜನವು ಒಗ್ಗಟ್ಟಾಗಿ ಹತ್ಯಾರುಗಳು ಸುದಾ ಊರು ಸುಗ್ಗುವದಕ್ಕೆ ಬಂದರು. ಬರುವಾಗ್ಯೆ, ಕಡೇ ಊರು ಬಾಗಲಿಗೆ ತಟ್ಟೇ ಹಾಕಿ, ಬಿಗಿಸಿತ್ತು. ಈಚೇ ಒಳ ಬಾಗಲಿಗೆ ಕದಗಳು ಬಂದೋಬಸ್ತಾಗಿ ಉಬ್ಬಲು ಮರಗಳು ಹಾಕಿ ಇತ್ತು. ಸದರಿ ಜನಗಳು ತಟ್ಟೇ ಬಾಗಲ ಬಳಿಗೆ ಬಂದ ಸದ್ದು ಕೇಳಿ, ಆ ಬಾಗಿಲಿನ ಚಾವಡಿಯಲ್ಲಿ ಇದ್ದ ಮುಂಗಾವಲಿಯುವರು ಎದ್ದು, ಬುರಿಜಿನ ಮೇಲೆ ಹತ್ತಿ ನೋಡಿ, ಇಪ್ಪತ್ತು ಮೂವತ್ತು ಜನ ಒಟ್ಟಾಗಿ ಬಾಗಲಿಗೆ ಬಂದು, ಫೇರಾಯಿಸಿ ಇರುವದು ಕಂಡು, ಸಂಗಡಲೇ ಒಳಗಿನ ಬಾಗಲಿನಿಂದ ಚಾವಡೀ ಒಳಗಿದ್ದ ಜನಗಳಿಗೆ ಇಷಾರೆ ಮಾಡಿದರು. ಮಾಡಲು, ಆ ಜನದಲ್ಲಿ ನಾಲ್ಕು ಬಂದೂಕಿನವರು ದಿಡ್ಡೀ

*twenty or five and twenty persons, came all together, armed, to break into the village. When they came, the outer gate of the village was well secured with a gate of thorns. On this side, the doors of the inner gate were fastened with cross bars. Hearing the noise of the aforesaid people at the thorn gate, the outer guards, who were stationed at the guard house of that gate, got up, mounted the bastion, and looked, and saw twenty or thirty people collected about the gate. They immediately gave warning to the people in the guard house of the inner gate. On their doing so, four musketeers of their number opened the wicket gate, mounted the bastion near*

ಬಾಗಲು ತೆಗೆದು ಕೊಂಡು, ತಟ್ಟೀ ಬಾಗಿಲ ಬಳಿಯ ಬುರಿಜಿನ ಮೇಲೆ ಹತ್ತಿ ನೋಡಲು, ಈ ಜನಗಳು ತಟ್ಟೀ ಬಾಗಲು ಕೀಳುವದಕ್ಕೆ ಪ್ರಯತ್ನಾ ಮಾಡುವರು ಕೆಲವರು. ಇನ್ನೂ ಕೆಲವರು ಬೇಲಿಯಲ್ಲಿ ಎಲ್ಲ್ಯಾದರೂ ದಾರಿ ಇರುವದೋ? ನೋಡ ಬೇಕೆಂದು ಹೋಗಿ, ನೋಡಿ, ದಾರಿ ಎಲ್ಲಿಯೂ ಇಲ್ಲದೆ, ಬಂದೋಬಸ್ತಾಗಿ ಇರುವದು ಕಂಡು, ಅವರುನ್ನೂ ಪುನಹ ತಟ್ಟೀ ಬಾಗಿಲ ಬಳಿಗೆ ಬಂದು, ಈ ತಟ್ಟಿಗೆ ಬೆಂಕೀ ಹಚ್ಚಿ ಬಿಟ್ಟು, ಒಳಗೆ ಹೋಗ ಬೇಕೆಂದು, ಮಸಲತ್ತು ಮಾಡಿ, ಮಾತನಾಡಿ ಕೊಂಡು, ಚಕಮುಕಿ ಝಾಡಿಸುತ್ತಾ ಇರುವ ಸುಮಾರರಿತು, ಒಬ್ಬ ಬೇಡರ ರಂಗಾ ಎನ್ನುವ ಕಾವಲುಕಾರನು ಕೈಯಲ್ಲಿ ಬಾರು ಮಾಡಿ ತಯಾರಾದ ಬಂದೂಖನ್ನು ಎತ್ತಿ, ಚಕಮುಕಿ ಝಾಡಿಸುವವನ ಮುಂಗೈಗೆ ಸ

*the thorn gate, and when they looked, some of the people were trying to pull down the thorn gate. Others went to see if there was any other way through the fence. After looking and seeing that there was no way anywhere, but that all was secure, they too came back again to the thorn gate, talked amongst themselves, and proposed to get in by setting fire to the gate. Seeing them striking a light, one of the watchmen, named Bēdara Ranga, took up a ready loaded musket, took a good aim at the wrist of the man who was striking the steel, applied*

ರಿಯಾಗಿ ಗುರಿ ಇಟ್ಟು, ಬತ್ತೀ ಕೊಟ್ಟದ್ದರಿಂದ ಗುಂಡು ಹೊರಟು, ಅವನ ಮುಂಗೈ ಕೀಲಿಗೆ ಪೂರಾ ಪೆಟ್ಟು ತಗಲಿತು. ತಗಲಲು, ಆ ಚಕಮುಕಿ ಕೆಳಗೆ ಬಿಸಾಟು, ಬುರುಜಿನ ಮೇಲೆ ಬಂದೂಖುಗಳು ಸುದಾ ಇರುವ ಜನಗಳನ್ನು ನೋಡಿ, ಅಲ್ಲಿ ನಿಲ್ಲುವದಕ್ಕೆ ಸಾಮರ್ಥ್ಯವಿಲ್ಲದೆ, ಆ ಜನರು ಪಾರಾಗಿ ಹೊರಟು ಹೋಗುತ್ತಾ, ಯಾರಿರೋ, ಈ ಊರಿನ ಜನರು, ಕೇಳಿ, ಇನ್ನು ವರುಷಕ್ಕೆ ಆಗಲಿ, ಆರು ತಿಂಗಳಿಗಾಗಲಿ, ಈ ಊರು ಮೇಲೆ ಬಿದ್ದು, ಲೂಟೀ ಮಾಡದೆ ಇದ್ದರೆ, ನಮ್ಮ ಹೆಸರುಗಳು ಬದಲು ಹೆಸರು ಇಟ್ಟು ಕೊಂಡೇವು! ಎಂದು ಶಪಥಾ ಮಾಡಿ, ಹೋದರಂತೆ.

ಆ ಮೇಲೆ ರಾತ್ರಿಯೆಲ್ಲಾ ಜಾಗ್ರತೇಲಿ ಇದ್ದು, ಬೆಳಗಾಗುವದುನ್ನೂ, ಊರಿನಲ್ಲಿರುವ ಜನಗಳು ಯಾವತ್ತೂ ಗಾಬರೀ ಪಟ್ಟು, ನನ್ನಲ್ಲಿ ಬಂದು, ಈ ವರ್ತಮಾನ ತಿಳಿ

*the match, the ball went off, and hit him right on the wrist joint. As soon as he was hit, he threw down the flint and steel; and when they saw the people with guns on the bastion, unable to stay there any longer, as they were going away, they swore, "Whoever you are, you people of this village, listen. If, in a year or six months from this time, we do not attack this village and plunder it, we will change our names," and went off; so they say.*

*All the night after this they kept on the alert, and as soon as it was light, the people of the village all came to me in a great fright, and told me all*

ಸಿದ್ದರಿಂದ, ಅವರಿಗೆಲ್ಲಾ ಧೈರ್ಯ ಹೇಳಿ, ನಾನು ನಿನ್ನೇ ದಿನ ಆ ಊರಿನ ಬಳಿಗೆ ಹೋಗಿ, ಅವರು ಇದ್ದ ಸ್ಥಳ, ಬಂದ ಸ್ಥಳ, ಹೋದ ಸ್ಥಳವೆಲ್ಲಾ ವಿವರವಾಗಿ ನೋಡಿಕೊಂಡು ಬಂದೆನು, ಸ್ವಾಮೀ. ಆ ಗುಂಡಿನ ಪೆಟ್ಟು ತಗಲಿ, ಚಕಮುಕಿ ಕೆಳಗೆ ಬಿದ್ದು ಹೋದದ್ದನ್ನೂ ನನಗೆ ತಂದು ತೋರಿಸಿದ್ದರಿಂದ, ಆ ಕಲ್ಲೂ ಚಕಮುಕೀ ಸುದಾ ಕಚೇರಿಗೆ ಕಳುಹಿಸಿ ಇಧೇನೆ. ಪರಾಂಬರಿಸ ಬೇಕು, ಸ್ವಾಮೀ. ಇತ್ಯಾದಿ ಬಿನ್ನಹವನ್ನು ಚಿತ್ತಕ್ಕೆ ತಂದು, ಮುಂದೆ ನಾನು ನಡ ಕೊಳ್ಳ ತಕ್ಕ ಸರಕಾರದ ಕೆಲಸಗಳು ಅಪ್ಪಣೆ ಆಗ ಬೇಕು, ಸ್ವಾಮೀ. ಇಂತೇ ಬಿನ್ನಹಾ.

ಎಂಬದಾಗಿ ಈ ಮೋರಿಗೆ ಓದಿದ ಬಿನ್ನವತ್ತಲೆಯನ್ನು

*this. So I encouraged them all, and went yesterday to the village and saw particularly all the places; where they had put up, where they had come, and where they had gone off, my lord.*

*They brought and showed me the steel that had dropped when the ball struck; so I have sent both the flint and the steel to the office. I beg your attention, my lord. Be pleased to consider this and my other requests, and command me what public business I shall attend to hereafter, my lord.*

*Such is my petition.*

When the amildar had heard the petition thus

ಕೇಳಿ, ಆಶ್ಚರ್ಯ ಪಟ್ಟು, ಅಮಲದಾರನು ಸದರಿ ಹೋಬಳಿ ಶೇಕದಾರನಿಗೆ ಜವಾಬು ಬರೆಸಿ, ಕಳುಹಿಸಿದ ತಾಕೀದಿ ಏನಂದರೆ;—

ರಾಜೇಶ್ರೀ ಆಯೆಂದೂರು ಹೋಬಳೀ ಶೇಕದಾರ ಮಲ್ಲಿಕಾರ್ಜುನೈಯ್ಯನವರಿಗೆ ಸುಬೇದಾರು ಲಿಂಗಪ್ಪಯ್ಯನವರು ನಮಸ್ಕಾರಾ. ಅದಾಗಿ,

ನೀವು ಬರೆದ ಬಿನ್ನವತ್ತಲೆ ತಲಪಿ, ಬರೆದ ವರ್ತಮಾನವೆಲ್ಲಾ ಸವಿಸ್ತಾರವಾಗಿ ತಿಳಿಯಲಾಯಿತು. ಹೋಬಳಿ ಮಜಕೂರಿನಿಂದ ಬರ ತಕ್ಕ ಈ ಖಿಸ್ತಿನ ಹಣವನ್ನು ಬೇಬಾಕಿಯಾಗಿ ವಸೂಲು ಮಾಡಿಕೊಂಡು, ಇಪ್ಪತ್ತೈದನೇ ತಾರೀಕಿಗೆ ಇರಸಾಲು ಸುದಾ ಕಚೇರಿಗೆ ದಾಖಲಾಗುವದು. ಹಜೂರಿಗೆ ಇರಸಾಲು ರವಾನೆ ಆಗ ತಕ್ಕ

read, he was much astonished, and had the following order written, and sent to the sheikdar of the aforesaid district, in reply :—

*To the most Illustrious Mallikārjuna, Sheikdar of the District of Ayendūr, Subadar Lingappa sends his respects :—namely,*

*The petition you wrote has come to hand, and I have fully understood all the intelligence written therein. You must collect without arrears the money of this instalment due from the above district, and the remittance must be paid into the office by the 25th instant. As the remittance must be*

ಜರೂರು ಇರುವದ್ದರಿಂದ, ಸುಸ್ತೀ ಮಾಡದೆ, ಸದರಿ ಬರೆದ ತಾರೀಖಿಗೆ ಬಂದು, ದಾಖಲಾಗುವದು.

ಗ್ರಾಮಾನುಗ್ರಾಮಗಳ ಬಳಿಯ ಮಳೆ ಚನ್ನಾಗಿ ಆಗಿ ಇರುವದ್ದರಿಂದ, ಹುರುಳಿ ಮುಂತಾದ ಸಾಗುವಳೀ, ರಯಿತವಾರು, ಮೊದಲು ಬರೆದು ಕಳುಹಿಸಿ ಇರುವ ಕಲಮೀವಾರು ತಾಕೀದು ಪ್ರಕಾರಕ್ಕೆ, ಮಾಡಿ, ಕೈಕಾಗದಗಳು ತೆಗದು, ಗ್ರಾಮಸ್ತರ ದಸ್ತೈವಜು ನಿಶೀಬಜ್ಜಿನಸು ಮುಚ್ಚಲಿಕೆಗಳು[7] ಫೇರಿಸ್ತಿನ ತಖ್ತೆ ಬೀಜವರಿ ಮೊಕರರೂರು ಸಹಾ ಬರೆದು, ಕಚೇರಿಗೆ ರವಾನೆ ಮಾಡುವದು.

ಚೀಲೇನಹಳ್ಳೀ ಬಳಿಯ ರಹಾ ಚೋರಿಯವರ ವಿದ್ಯಮಾನಕ್ಕೆ ಗ್ರಾಮದ ಜನಗಳು ಬಹಳ ಬೇದಿಲ್ಲಾಗಿ

*sent immediately to the head office, you must not delay, but bring it on the above mentioned date.*

*As there has been a good fall of rain in the neighbourhood of the villages, you must let out the gram and other cultivation according to the orders previously sent to you, take notes of hand with the signatures of the villagers attached, make out a summary list of these agreements, including the amount of seed to be sown by each, and forward them to the office.*

*The villagers must be in great alarm at the affair of the robbers at Chīlēnahally. This very day a*

7. For acc.

ಇರುವರು. ಈ ಬಗ್ಯೆ ಈ ದಿವಸವೇ ಹಜೂರಿಗೆ ಅರ್ಜಿ ಜಾಹೀರು ಮಾಡುತ್ತಾ ಇಧೆ. ಶಿಲೇದಾರಿ ಕುದುರೆಗಳು ಮುಂತಾದ್ದರಿಂದ ಆ ಪ್ರಾಂತ್ಯ ಯಾವತ್ತುನ್ನೂ ಪೂರಾ ಬಂದೋಬಸ್ತು ಮಾಡುವ ಹಾಗೂ, ಜನಗಳಿಗೆ ಧೈರ್ಯವಾಗುವ ಹಾಗೂ, ಹಜೂರು ಹುಕುಂ ಸಾದರಾಧೀತು. ಕೂಡ್ಲೆ ಬಂದೋಬಸ್ತು ಆಧೀತೆಂದು, ಹರ ಹರ ಗ್ರಾಮಗಳ ರೈತರು ಮುಂತಾದವರಿಗೆ ಭರವಸಗಳು ಕೊಡುವದು. ನಾವುನ್ನು ಇಷ್ಟರಲ್ಲೇ ಸಾಗುವಳೀ ಮುಂತಾದ ವಿಚಾರಣೇ ಬಗ್ಯೆ ಹೋಬಳಿ ಮುಜುಕೂರಿಗೆ ಬರುತ್ತಾ ಇಧೇವೆ.

ಬತಾರೀಖು ೨೧ ನೇ ಮಾಹೆ ಶಪಟಂಬರು ಸನ್ ೧೮೪೨ ನೇ ಇಸಿವಿ.

ಇಷ್ಟರ ಒಳಗಾಗಿ ಕಂದಾಚಾರದ ಹೋಬಳಿದಾರರು, ದಫೇದಾರರು ಸಹಾ, ಮುಂಚಿತವಾಗಿ ಕಿಲ್ಲೇದಾರರಿಗೆ

*petition is being sent to the Head Office about it. Most likely an order will come from the Head Office to secure well all that part of the country, and give confidence to the people, by Silladar cavalry and other means. You must immediately assure the ryots and others of the several villages, of safety. I myself am coming shortly into that district, to look after the cultivation.*

*This 21st day of September, A. D.* 1842.

In the meantime, the military hobalidars and duffadars,—who, if the killedar be in the military

ಕಂದಾಚಾರದ ಕಚೇರಿಯಲ್ಲಿ ಅವರು ಇದ್ದರೆ ಅಲ್ಲಿಯೇ
ವರದಿ ಹೇಳಿ, ಅಲ್ಲಿಂದಾ ತಾಲೂಕು ಕಚೇರಿಗೆ ಬಂದು,
ಆಮೀಲರಿಗೆ ವರದಿ ಹೇಳುವರು. ಆ ದಿವಸ ಕಿಲ್ಲೇದಾ
ರರು ಈ ಕಚೇರಿಯಲ್ಲಿಯೇ ಇದ್ದದರಿಂದ, ಇಬ್ಬರಿಗೂ
ಒಂದೇ ಸಾರಿ ವರದೀ ಹೇಳುವದೇನಂದರೆ;—

ಕಿಲ್ಲೇ ಪಹರೆ ಚೌಕಿ ಬಂದೋಬಸ್ತಾಗಿ ಇಧೆ.
ಬಾಗಲು ಬೀಗ ಮುದ್ರೆ ಖುಲ್ಲಾ ಆಗಿ ಇಧೆ. ಬೀಗದ
ಕೈ ಕಚೇರಿಯಲ್ಲಿ ಹಾಜರು ಇಧೆ. ಬಾಗಲು ಪಹರೇ
ದಲ್ಲಿ ಹದಿನಾರು ಆಸಾಮಿಗಳು ಖುಲಾಸಾ ಆಗಿ, ಹೋಗಿ
ಇಧಾರೆ. ಈಗ ಹಾಜರು ಆಸಾಮಿಗಳಲ್ಲಿ ಮೂರು ಜ
ನ ಕಾಯಿಲೆ ಇಧಾರೆ. ಅವರ ವಾರಸುದಾರರು ಒಬ್ಬ
ರೂ ಇಲ್ಲದ್ದರಿಂದ, ಅನ್ನ ನೀರಿಗೆ ಬಹಳ ಕಷ್ಟ ಪಡು
ತ್ತಾರೆ. ಮಿಕ್ಕ ಜನರು ತಮ್ಮ ತಮಗೆ ನೇಮಿಸಿದ ಕೆಲ

office, first make their report to him there, and thence to the amildar in the District Office,—on that day the killedar being in the amildar's office, made their report to both at once, as follows:—

"The fort and other guards are all secure. The gate is unlocked, and the key is in the office. In the gate guard house sixteen persons have been set at liberty. Three of those now in custody are sick; and having no relatives, they suffer greatly for want of victuals. The rest of the people have finished the works severally appointed them, and

ಸಗಳು ಮಾಡಿ ಕೊಂಡು, ಪಹರೇದಲ್ಲಿ ಹಾಜರು ಇದ್ಧಾರೆ. ರಸ್ತೇ ಕಾಮಗಾರೀ ಬಗ್ಯೆ ಬಂದೀವಾನರು ಎಂಟು ಮಂದಿ ಹೋಗಿ ಇದ್ದರು. ಈ ದಿವಸ ರಸ್ತೇಲಿ ಎರಡು ಕಡೆ ಕಾಲಿವೆಗಳ ಮಂಣು ತೆಗಿಸಿ, ನಾಲೇ ದುರಸ್ತು ಮಾಡಿದ್ದು ಹದಿನೆಂಟು ಬಾರು ಲೆಖ್ಖವಾಗಿ ಇಧೆ. ಇದಲ್ಲದೆ ಸೇತುವೇ ಕಾಮಗಾರಿಯುವರು ಮಜೂರೀ ಜನಗಳು ೩೫, ಹೆಂಣಾಳು ಸುಂಣಾ ಕುಟ್ಟುವವರು ೪೦ ಜನಾ ಶಿವಾಯಿ, ಬೇಗಾರಿ ಆಳುಗಳು ೯೦, ಅಂತೂ ೧೬೫ ಜನವೂ. ಇಟ್ಟಿಗೇ ಗೂಡಿನ ಕಾಮಗಾರಿ ಮಾಡಿ, ಇಟ್ಟಿಗೆಗಳೆಲ್ಲಾ ಗೂಡಿನಲ್ಲಿ ಪೇರ್ಚಿಟ್ಟು, ಮೇಲೆ ಮಣ್ಣಿನ ಕೆಲಸ ಸಹಾ ತಯಾರು ಮಾಡಿ ಇದ್ಧಾರೆ. ನಾಳೇ ದಿವಸದಿಂದ ಇಟ್ಟಿಗೆ ಸುಡ ಬೇಕಾಗುತ್ತೆ. ಚಂಗೂಲಿ ಜನಗಳಿಗೆ ಬಟವಾ

are now in custody. Eight prisoners were out repairing the road. To day they cleared the earth out of the gutters on both sides of the road, and made the gutter properly, for the length of eighteen fathoms. Besides, the people employed on the bridge were thirty five paid workpeople, forty women pounding chunam ; and, in addition to these, ninety impressed persons ; in all, a hundred and sixty five people. They have built the brick kiln, piled up all the bricks in the kiln, covered them with earth, and made all ready. To morrow they ought to begin to burn them ; and the hired la-

ಡೆ ನಾಳೆ ದಿವಸವಾಗ ಬೇಕು, ಎಂಬ ವಿವರಗಳಾಗಿ ವರದಿ ಹೇಳಿ, ಅದಕ್ಕೆ ಜವಾಬು ತಿಳಿದು, ತಮ್ಮ ತಮ್ಮ ಕೆಲಸಕ್ಕೆ ಹೋಗುವರು.

ಇಷ್ಟರಲ್ಲೇ ಗ್ರಾಮಾನುಗ್ರಾಮದ ಗೌಡ ಶಾನಭಾಗರು ಬಂದು, ಅಮಲದಾರನಿಗೂ ಶಿರಸ್ತೇದಾರನಿಗೂ ಕೈಮುಗಿದು, ಕಾಣಿಸಿ ಕೊಂಡು, ತಾವು ಕೂಡ ತಕ್ಕ ಸ್ಥಳಗಳಲ್ಲಿ ಕೂತು ಕೊಂಡರು. ಅವರನ್ನ ನೋಡಿ, ಅಮಲದಾರನು,

ಅ. ಏನಿರ್ರೈಯ್ಯಾ, ಗೌಡಗಳು, ನಿಮ್ಮ ನಿಮ್ಮ ಹಣ ಎಷ್ಟು ಬಂದು ಇಧೆ?

ಗೌ. ವಾಯಿದೇ ಮೋರಿಗೆ ಹಣಗಳು ಕೊಟ್ಟು ಇಧೇವೆ, ಸ್ವಾಮಿ.

bourers must be paid to morrow." When they had reported these particulars, and received an answer, they went to their several duties.

In the meantime, the gowdas and shānabhāgas of the respective villages came, made their obeisance and presented themselves to the amildar and sheristedar, and sat down in their proper places. The amildar addressed them :—

A. Well Sirs, Gowdas! How much of your monies has been paid in?

G. We have paid our monies according to instalment, my lord.

ಆ ಮಾತಿನ ಮೇಲೆ ಶಾನಭಾಗರ ಲೆಖ್ಖಾ ವಿಚಾರಣೆ
ಮಾಡಿ, ಅವರ ವಾಯಿದೇ ಪ್ರಕಾರ ಹಣ ಬಂದು ಇದ್ದ
ರೆ, ಸರಿ; ಕಂಮೀ ಆದಲ್ಲಿ, ಆಳುಗಳ ಮೊಹಸಲೆ ಹಚ್ಚಿ,[8]
ವಾಯಿದೆಗೆ ಬೇಬಾಕಿಯಾಗಿ ಹಣಾ ಬರ ಮಾಡುವರು.
ಹಣವೆಲ್ಲಾ ಪರಖಾವಣಿ ಆದ ಕೂಡ್ಲೆ, ಇರಸಾಲು ಪಟ್ಟಿ
ಗಳು ಗ್ರಾಮಸ್ತರಿಂದಲೂ ಶೇಕುದಾರ್ರ ಕಡೆಯಿಂದಲೂ
ದಪ್ತರಕ್ಕೆ ತರಿಸಿ ಕೊಂಡು, ಒಟ್ಟು ಮೊಬಲಗು ಗ್ರಾಮ
ಗಳ ತಪಸೀಲಿನ ಪ್ರಕಾರ ದಾಖಲೇ ನೋಡಿ ಕೊಂಡು,
ಕಂಮೀ ಜಾಸ್ತೀ ತೋರಿದಲ್ಲಿ, ತನಖೇ ಮಾಡಿ, ಪೈಸಲು
ಮಾಡಿ, ದುಬಾರಾ ಜಾಸ್ತೀ ವಸೂಲು ಬರೆದು ಇದ್ದಲ್ಲಿ,
ಪಟ್ಟಿಗಳು ಹಿಂದಕ್ಕೆ ತಿರಿಗಿಸಿ, ಬದಲಾಗಿ ಪಟ್ಟಿಗಳು ಬರೆ

On this they examine the shánabhágas' accounts; and if the money has been paid in according to their instalment, well and good. If short, they set peons over them, and make them pay the money till there be no balance left. When the money is all passed, they take lists of remittances from the villagers and the sheikdars, examine the total amount by the particulars from each village, examine and correct them where they differ. Where the receipts have been twice entered, they return the lists, and have other lists written; which

8. When accounts are behindhand, a peon is set over the defaulter, to dun him; and the defaulter has to pay the peon's wages, so much per day, until payment of the debt releases him.

ಸಿ ಕೊಂಡು, ಸರಿಯಾಗಿ ಇದ್ದರೆ, ಇಟ್ಟು ಕೊಂಡು, ಕಂ
ಮಿಯಾಗಿ ಬರೆದು ಇದ್ದರೆ, ಫಲಾನೆ ಗ್ರಾಮದ ಹಣ ಪ
ರಭಾರೆ ಕಚೇರೀ ಪರಖಾವಣಿ ಆದದ್ದು ಇರಸಾಲು ಪ
ಟ್ಟಿಗೆ ಪಾಯಿನವಲಿಗೆ ಕಟ್ಟಿಸಿ, ಕುಲ್ಲು ತೇರೀಜು ತಾಳೆ
ಹಾಕಿ, ನಾಣ್ಯವಾರು, ಸಾಲುವಾರು,[9] ಬಾಬುವಾರು ಸು
ದಾ, ತಪಸೀಲು ಚನ್ನಾಗಿ ಬರಿಸಿ, ದಪ್ತರಕ್ಕೆ ದಾಖಲು
ಮಾಡಿ ಕೊಂಡು, ಆ ಮೇರಿಗೆ ರಸೀತಿಗಳು[1] ಬರೆದು,
ರುಜುವು, ಮೊಹರು, ದಪ್ತರು ದಾಖಲೇ ನಿಶೀ,[2] ಫರದೇ
ಫರದು ಗ್ರಾಮಸ್ತರ ವಶಕ್ಕೆ ಕೊಡುತ್ತಾ, ಲೆಖ್ಖಗಳು ಬ
ರಿಸ ತಕ್ಕ ಸಬಬು ಇದ್ದಲ್ಲಿ, ಶಾನಭಾಗರನ್ನ ಇಟ್ಟು

if correct, they keep. If the amount entered be too little, they add in a postscript to the list of remittances, that the money of such a village was paid into the office separately ; make the totals agree ; make a clear account of particulars, giving the amounts, the sums for each year, and the items; file it, give receipts accordingly, affix the signature of the amildar, the government seal, and the file endorsement of the sheristadar, and give them to the different villagers. If any accounts are to be written, they detain the shànabhàgas, and, by their

9. A list of the annual amounts realized for several years, is kept as a document of easy reference.

1. Eng.

2. Every document of the kind must have the amildar's signature, the seal of the government, and be endorsed by the registering sheristadar.

ಕೊಂಡು, ಅವರ ದಾಖಲೆಯಿಂದ ಸುವರ್ಣಾದಾಯು ಕಂ
ಮೀ, ಜಾಸ್ತಿ ಗೋಷ್ವಾರೆ ತಖ್ತೆಗೆ ಕುಳವಾರು ಬಾಬು
ವಾರು ಸಹಾ ವಿಂಗಡಿಸಿ, ಆ ಮೇರಿಗೆ ಕಂಮಿ ಜಾಸ್ತಿ
ಮೊಕಾಬಿಲೆ ಪರಿಶೋಧನೆ ಮಾಡಿ, ಕಂಮಿ ಆದ ಬೇರೀ
ಜಿಗೆ ಸಬಬು ಕಾಣಿಸಿ, ವರ್ಗ ದಾಖಲು ಕಂಮಿ, ಬಟಾ
ಯಿ ದಾಖಲು ಕಂಮಿ, ಬಂಜರು ಕಂಮಿ, ನಾದಾರೀ ಸ
ಬಬು ಮುನಾಸಬು ಐನು ಕಂಮಿ, ಎಂಬ ವಿವರಗಳಾ
ಗಿ ಬರೆಸಿ, ದಪ್ತರಕ್ಕೆ ಲೆಖ್ಖಗಳು ತೆಗದು ಕೊಳ್ಳುವರು.

ಜಾಸ್ತೀ ಅಮಲಿಗೂ ಇದೇ ಮೇರಿಗೆ—ವರ್ಗ ಜಾಸ್ತಿ
ಬಟಾಯಿಯಿಂದ ಸಾಗುವಳಿ ಜಾಸ್ತಿ, ಬಂಜರಿಂದ ಸಾಗು
ವಳಿ ಜಾಸ್ತಿ; ಜಮೀನು ಬೀಜವರಿ ಇಷ್ಟು ಖಂಡುಗ; ಅ
ದಕ್ಕೆ ದರ ಕೊ. ೧ಕ್ಕೆ ೦೪೦ ದ ಪ್ರಕಾರ ರಿವಾಜಿಗೆ

examination, separate the individual accounts and the different items in the account of decrease, increase and totals, compare the items of increase and decrease, find out the cause of decrease,—decrease by exchange of land; decrease by rented lands being let on *wāra;* decrease by non-cultivation; and decrease by money remitted on the ground of the ryots' poverty. These particulars being written, the accounts are filed.

The increase is entered in the same way:—increase by exchange of land; increase by *wāra* lands being rented; increase from fallow lands being cultivated; that is, so many *khandugas* of land sown. The regular value of such land is half a

ಮೂರು ವರುಷ ಕ್ರಯವಾದ ಸಬಬು ಸಂವತ್ಸರಕ್ಕೆ ದರ ಕೊ. ೧ಕ್ಕೆ ಕಂದಾಯ ಕಂಠೀರಾಯಿ ೩ ಹಣದ ಪ್ರಕಾರ, ಅಯಿಂದಾ ಮುಂದಿನ ವರುಷಕ್ಕೆ ೪ ಹಣ, ಆಚೆ ವರುಷ ರಿವಾಜು ಪ್ರಕಾರ ಬೇರೀಜು ಭರ್ತಿ. ಇದಕ್ಕೆ ಕಚೇರಿಯಿಂದ ಬರಿಸಿಕೊಟ್ಟ ಕವುಲು ಚೀಟು, ಶೇಕುದಾರರ ಕವುಲು ಚೀಟಿ, ಇಲ್ಲದ ಗ್ರಾಮಸ್ತರ ಕವುಲು ಚೀಟಿ. ಈ ಮೇರಿಗೆ ಚನ್ನಾಗಿ ತನಖೀ ಮಾಡಿ, ಆಗಿಂದಾಗ್ಯೆ ಈ ಸಬಬುಗಳು ಯಾವತ್ತುನ್ನೂ ಆಮಿಲರಿಗೆ ಶಿರಸ್ತೇದಾರರಿಗೆ ತಿಳಿಸುತ್ತಾ, ಗುಮಾಸ್ತೇರು ದಪ್ತರಕ್ಕೆ ಲೆಖ್ಖಗಳು ತೆಗದು ಕೊಳ್ಳುತ್ತಾ ಇರುವರು.

ಗೌಡರ ನೋಡಿ, ಆಮಿಲರು ಹೇಳ ತಕ್ಕ ಮಾತು;

ಅ. ಏನ್ಯೆಯ್ಯಾ, ಗೌಡಾ? ನಿನ್ನ ಗ್ರಾಮ ಫೈಸಲು ಮಾಡಿ ಕೊಂಡು, ಹೋಗು.

pagoda per *kolaga ;* but it must be advanced gradually for three years. The first year the rent is three fanams per *kolaga ;* the next year four fanams; the year after, the full rent, as usual. There must be a written agreement to this effect, given either from the office, or by the sheikdar, or by the villagers. After thus carefully investigating the matter, and every now and then refering every thing to the amildar and sheristedar, the writers file the accounts.

The amildar addressing the gowdas, says,

A. Well, Mr. Gowda, settle for your village and go.

ಗೌ. ಅಪ್ಪಣೆ ಆದರೆ ಮಾಡಿ ಕೊಳ್ಳುತ್ತೇನೆ.

ಅ. ವೈಶಾಖದ್ದು ಶಿವಾಯಿ, ನಿನ್ನ ಗ್ರಾಮದ ಅಂದಾಜಾ ಎಷ್ಟು ವರಹಾ ಆಗಿ ಇದೆಯೋ, ಅಷ್ಟಕ್ಕೆ ಮುಚ್ಚಲಿಕೆ ಬರದು ಕೊಡು.

ಗೌ. ಅಷ್ಟಕ್ಕೆ ಮುಚ್ಚಲಿಕೆ ನಾನು ಬರೆದು ಕೊಟ್ಟದ್ದರಿಂದ ಏನು ಆಗುತ್ತೆ? ವೈಶಾಖದ ಸಾಗುವಳಿಯೂ, ದಾಖಲು ಮಾಡಿಸಿ; ಒಟ್ಟಿಗೆ ಅಪ್ಪಣೆ ಆದರೆ, ಮುಚ್ಚಲಿಕೆ ಬರೆದು ಕೊಡುತ್ತೇನೆ.

ಅ. ವೈಶಾಖದ ಗದ್ದೆ ಈಗ ಸಾಗುವಳಿ ಆಗಿ ಇರುವದೇನು? ಅಯಿಂದಾ ಆಗ ತಕ್ಕದ್ದೆಷ್ಟು?

ಗೌ. ಎಷ್ಟು ಸಾಗುವಳಿ ಆದಾಗ್ಯೂ, ಪ್ರಾಕು ಮೇರಿಗೆ ವೈಶಾಖದ ಸಾಗುವಳಿಯಲ್ಲಿ ಹಣ ಕಾಣುವದು ಕಷ್ಟ ಇದೆ, ಸ್ವಾಮಿ.

G. I will, if you wish it.

A. Then write and give an agreement for as many pagodas as your village was estimated at, exclusive of the Vaishākha crop.

G. What's the use of giving an agreement for that much? Have the Vaishàkha crop entered too, and I will give an agreement for the whole, if you like.

A. How much Vaishàkha wet land is already cultivated? and how much is yet to be cultivated?

G. No matter how much be cultivated, it will be very difficult to get the same money as last year out of the Vaishàkha crops, my lord.

ಅ. ಅದೇಕ್ಕೈಯ್ಯಾ, ಹಾಗೆ ಹೇಳುತ್ತೀ?

ಗೌ. ಪ್ರಾಕು ಸಂವತ್ಸರ ಬಿತ್ತಿದ ಗದ್ದೆ ಮೂರು ವರುಷದಿಂದ ಬಂಜರು ಬಿದ್ದು ಇತ್ತು. ಅಂಥಾ ಗದ್ದೆ ಸಾಗುವಳಿ ಆದದರಿಂದ, ನೆಲ್ಲು ಹುಲಸು ಕಂಡಿತು. ಧಾರಣೆವಾಶಿಯು ನೆಟ್ಟಗೆ ಇತ್ತು. ಅದೇ ಗದ್ದೆ ಈ ಸಂವತ್ಸರಕ್ಕೆ ಸಾಗುವಳಿ ಆಗಿ ಇರುವದರಿಂದ, ಹೋದ ವರುಷ ಕಂಡ ಹುಲಸು ಈ ವರುಷ ಕಾಣುವದಿಲ್ಲ. ಧಾರಣೆವಾಶಿ ಹ್ಯಾಗಾಗುತ್ತೋ, ತಿಳಿಯ ಕೂಡದು.

ಅ. ಸುಮ್ಮನೆ ಇಲ್ಲದ ಭಾನೆ ಮಾತುಗಳ ಹುಟ್ಟಿಸಿ, ಹೇಳ ಬೇಡ. ಗದ್ದೆ ನೆಟ್ಟಗೆ ಉಳಿಸಿ, ಸೊಪ್ಪು ಸೋದೆ[3] ಹಾಕಿ, ಗದ್ದೆ ಬಿತ್ತಿಸಿದರೆ, ಪ್ರಾಕಿನ ಹುಲಸು ಕಾಣುತ್ತೆ; ಧಾರಣೆವಾಶಿಯೂ ಪ್ರಾಕು ಮಾರಿದ ಮೋರಿಗೆ ಈ ವ

A. Why do you say so, Sir?

G. The land sown last year had lain fallow for three years. Land like that being cultivated, the paddy came on well; and prices were good. The same land being cultivated this year, there won't be such a crop this year as last. How prices will be, we cannot tell.

A. Don't frame idle excuses. If you plough the land well, throw in plenty of greens, and sow it, it will produce the same crop as last year. So far this year prices are the same as last year;

3. A pleonasm. Rice ground, are not manured, but dressed by treading in leaves, green stalks, &c. of succulent plants.

ರುಷವೂ ಇದು ಪರಿವಿಗೂ ಮಾರುತ್ತೆ. ಹಣವ್ರೋ, ಅ
ಷ್ಟವ್ರೋ ಕಂಮಿ ಜಾಸ್ತಿ, ಈ ಧಾರಣೆಯೇ ಮಾರುತ್ತೆ.
ಅದಕ್ಕೇನು ಯೋಚನೆ ಮಾಡ ಕೆಲಸವಿಲ್ಲ. ಒಟ್ಟು ಮು
ಚ್ಚಲಿಕೆ ಸರಕಾರಕ್ಕೆ ಬರದು ಕೊಡು;

ಎಂದು ಆಮಿಲರು ಸಮಜಾಯಿಷೀ ಮಾಡಿ, ಹೇಳಿ
ದ ಮಾತಿನ ಮೇರಿಗೆ ತಮ್ಮ ತಮ್ಮ ಗ್ರಾಮಗಳ ಗುತ್ತಿಗೆ
ಗಳು ಫೈಸಲು ಮಾಡಿ ಕೊಂಡು, ಗೌಡ ಶಾನಭೋಗರು
ಅಪ್ಪಣೆ ತೆಗದು ಕೊಂಡು, ಸ್ಥಳಗಳಿಗೆ ಹೊರಡುವರು.

ಈ ಮುಂತಾದ ಕಾರುಭಾರವೆಲ್ಲಾ ನೋಡಿ, ಸಂ
ತೋಷ ಪಡುತ್ತಾ, ಆ ರಾತ್ರಿ ಕಚೇರಿಯಿಂದ ಏಳು ಎಂ
ಟು ಘಳಿಗೆ ಒಳಗಾಗಿ ಹೊರಟು, ಅಮಲದಾರನ ಕಡೇ
ಜನರು ಸಹಾ ತಾನು ಇಳಿದಿರುವ ಬಂಗಲೆಗೆ ಬಂದು, ಅ

and will continue the same, a fanam or half a fanam less or more. There is no need to be anxious about that. Write and give your agreement to the Government for the whole.

When the amildar had got them to consent, the gowdas and shânabhâgas settled the contracts of their several villages as they had agreed, took leave, and set out for their homes.

The gentleman witnessed this and other business with great pleasure, left the office about nine o'clock, and came to the bungalow where he was staying, accompained by some of the amildar's peo-

ಲ್ಲಿಂದ ಕಚೇರೀ ಆಳುಗಳಿಗೆ ಅಪ್ಪಣೆ ಕೊಟ್ಟು, ಭೋಜನವನ್ನು ಮಾಡಿ, ಸುಖವಾಗಿ ನಿದ್ರೆಯನ್ನು ಮಾಡಿದ ಈ ದೊಡ್ಡ ಮನುಷ್ಯನಿಗೆ ಆರೋಗ್ಯವಾಗಿ ಆ ದಿವಸದ ರಾತ್ರಿ ಬೆಳಗಾಗಿ, ಸೌಖ್ಯವನ್ನು ತೋರ ಮಾಡಿತು.[4]

ಆ ಮರು ದಿವಸವು ಅದೇ ಊರಿನಲ್ಲಿ ಇದ್ದು, ಕೆರೆ ಮುಂತಾದ ಕಡೆ ಸ್ವಾರಿ ಹೊರಡ ಬೇಕೆಂದೆಣಿಸಿ ಹೊರಟ ದೊಡ್ಡ ಮನುಷ್ಯನ ಸಮಾಚಾರವನ್ನು ಕೇಳಿ, ಉದಯಕ್ಕೆ ಅಮಲದಾರನು ಕುದುರೇ ಮೇಲೆ ಹತ್ತಿ ಕೊಂಡು, ಹೊರಟು ಬಂದು, ಈ ಸರದಾರನ ಕಂಡು, ಸಲಾಂ ಮಾಡಿದನು. ಬದುಲಾಗಿ ಸಲಾಂ ಮಾಡಿ, ಕ್ಷೇಮಲಾಭಗಳು ಕೇಳುತ್ತಾ, ಎಲ್ಲಿ ವರಿವಿಗೂ ಹೋಗಿ ಬರೋಣವಾಗುತ್ತೋ?[5] ಎಂದು ಅಮಲದಾರನು ಕೇಳಲು; ಕೆರೇ

ple. Dismissing the office people thence, he took supper; and having slept soundly, the night of that day healthfully lightened, and shewed him Comfort.

Hearing that the gentleman, resolving to stay the next day in the same village, and ride out to the neighbourhood of the tank and other places, had set out, the amildar mounted his horse at sunrise, set out, and seeing the gentleman, made salaam. The gentleman returning his salaam, enquired after his welfare. On which the amildar asked, "Whither are you going?" "I set out

4. A figurative mode of saying "the day broke and found him well."

5. An indirect and polite mode of asking: "I am not aware whither you are going."

ಕಡೆ ಹೋಗಿ ಬರ ಬೇಕೆಂದು, ಹೊರಟೆವೆಂದು, ಹೇಳಿದ
ಸರದಾರನಿಗೆ, ತಾನುನ್ನೂ ಕೆರೇ ಕಡೆ ಸಾಗುವಳಿ ನೋ
ಡುವ ಕೆಲಸವಾಗಿ ಬರುತ್ತೇನೆಂದು ಹೇಳಲೂ; ಸಂತೋ
ಷ ಎಂದು, ಉಭಯುತ್ರರೂ ಲೋಕಾಭಿರಾಮವಾಗಿ ಮಾ
ತನಾಡಿ ಕೊಳ್ಳುತ್ತಾ, ಕೆರೇ ಕಡೆ ಹೋಗಿ, ಆ ಕೆರೇ
ಕೋಡೀ ಬಳಿಯು ಒಂದು ಆಲದ ಮರ ದೊಡ್ಡದಾಗಿ,
ಬೇರುಗಳೂ, ಕೊಂಬೆಗಳೂ, ಕೊನೆಗಳೂ, ಊಡೆಗಳೆಂ
ತೂ ಎಣಿಸಿದರೆ, ಸಾವಿರದ ಮೇಲೆಯೇ ಲೆಖ್ಖವೇ ಹೊ
ರ್ತು, ಕಡಿಮೆ ಇಲ್ಲ. ಇಂಥಾ ದೊಡ್ಡ ಮರದ ನೆರಳು
ಸುತ್ತಲೂ ನೂರಾರು ಬಾರು ವರಿವಿಗೂ ಹರಡಿ ಕೊಂ
ಡು ಇರುವದು. ಅನೇಕ ಪಕ್ಷಿಗಳು ಆ ಮರದ ಮೇಲೆ
ವಾಸಾ ಮಾಡಿ ಕೊಂಡು ಇರುವದು. ಮರದ ಕೆಳಗೆ
ಪಕ್ಷಿಗಳು ಮೇದಂಥಾ[6] ಹಣ್ಣಿನ ಬೀಜಗಳು ಮೊಣ

with the intention of going to the tank," the gentleman replied. "I too am going to the tank for the purpose of looking after the cultivation," the amildar answered. "I am glad of it," the gentleman said, and talking very pleasantly together, they went towards the tank. Near the weir of the tank was a large banyan tree, whose roots, limbs, branches and pendents, if all counted, would not amount to less than over a thousand. The shade of this so large a tree spread for more than a hundred fathoms round. Many birds lived in the tree. Under the tree, the seeds of the fruit the

6. From ಮೇಯು.

ಕಾಲುದ್ದ ಉದುರಿ ಇರುವವು. ಈ ಮೋರಿಗೆ ಇರುವ ಮರವನ್ನು ಕಂಡು, ಈ ಸರದಾರನು,

ಧೊ. ಅಮಲದಾರ್, ಈ ಮರ ಎಷ್ಟು ವರುಷದ ಮರವಾಗಿದ್ಧೀತು?

ಅ. ಅಯ್ಯಾ, ಈ ಮರಕ್ಕೆ ಐನೂರು ವರುಷಕ್ಕೆ ಮೇಲೆ ಆಗಿ ಇದ್ಧೀತೇ ಹೊರ್ತು, ಕಡಿಮೆ ಇಲ್ಲ.

ಧೊ. ಅದು ಹ್ಯಾಗೆ ತಿಳಿಯಿತು?

ಅ. ಈ ಆಲದ ಮರದ ವರ್ತಮಾನ ತಿಳಿದವರು ಹೇಳುವದೇನಂದರೆ, ಈ ಊಡೆಗಳು ಬಿಡುವ ಮರ ಮನುಷ್ಯರು ಬೇಕೆಂದು ಕಡಿದು ಹಾಕಿದ ಹೊರ್ತು, ತಾನಾಗಿ ರೋಗಾದಿಗಳಿಂದ ಹೋಗುವದಿಲ್ಲ. ಅಥವಾ ದೊಡ್ಡ ಘಾಳಿಯಿಂದ ಒಂದು ಕೊಂಬು ಕೊನೆ ಏನಾದರೂ ಮುರಿದು, ಕೆಳಗೆ ಬಿದ್ದಾಗ್ಯೂನ್ನೂ, ಈ ಮರದ ಗೋಜೆ

birds had fed upon were scattered knee deep. Seeing such a tree, the gentleman said,

G. Amildar, what aged tree may this be?

A. Sir, this tree cannot be less than over five hundred years old.

G. How do you know that?

A. Those who understand these banyan trees say, that a tree that has these pendents, unless intentionally cut by some one, will not die of itself by disease, &c., and though an arm or branch or any thing be broken off by a high wind, not one of

ಗೆ ಇಲ್ಲಿನ ಜನರು ಒಬ್ಬರೂ ಹೋಗುವದಿಲ್ಲ. ಆದ್ದರಿಂದ ಆ ಮುರಿದು ಬಿದ್ದ ಕೊಂಬು ನೆಲದಲ್ಲಿ ಬೇರು ಬಿಟ್ಟು ಕೊಂಡು, ಪ್ರಬಲವಾಗುತ್ತೆ.

ಘೊ. ಅದೇನು? ಘಾಳಿಗೆ ಬಿದ್ದ ಕೊಂಬು ಕೊನೆ ಸಹಾ ಒಬ್ಬರೂ ತೆಗದು ಕೊಂಡು ಹೋಗುವದಕ್ಕೆ ಏನು ಭಯ ಉಂಟು?

ಅ. ಈ ಮರದಲ್ಲಿ ಒಂದು ಮುನೀಶ್ವರನೆಂಬ ದೇವತೆ ವಾಸಾ ಮಾಡಿ ಕೊಂಡು ಇರುವದು. ಅದಕ್ಕೆ ವರುಷಕ್ಕೆ ಒಂದಾವರ್ತಿ ದೊಡ್ಡದಾಗಿ ಜಾತ್ರೆ ಆಗುತ್ತೆ. ಆವಾಗ್ಯೆ ಬಹಳ ಜನಗಳು ಹರಿಕೆಗಳು ಮಾಡಿ ಕೊಂಡು ಇರುವವರು, ಹಿತ್ತಾಳೀ ಘಂಟೆಗಳು, ಕಂಚಿನ ಘಂಟೆಗಳು, ಕಬ್ಬಿಣ ಘಂಟೆಗಳು ಬಹಳವಾಗಿ ತಂದು, ಈ ಮರದ ಕೊಂಬುಗಳಿಗೆ ಕಟ್ಟುವರು. ಬುಡದಲ್ಲಿ ಸಹಾ ಕ

the people of the neighbourhood will go near this tree. So that the broken off branch strikes root into the ground, and spreads.

G. Why is that? What makes them so afraid that no one will take away even a limb or a branch that has been broken off by the wind?

A. A goblin, called Munīshwara lives in this tree. Once a year a great festival takes place in honour of it. At that time, many persons who have made vows, bring brass bells, bells of bell-metal, and iron bells, in great numbers, and tie them to the branches of this tree. They tie them

ಟ್ಟುತ್ತಾರೆ. ಈ ಮರವನ್ನು ಹತ್ತುವದಕ್ಕೆ ಒಬ್ಬರ ಕೈ
ಲಿ ಆಗದು. ಈ ಬಗ್ಯೆ ಹಿಂದಕ್ಕೆ ತುರುಕರು, ಈ ಮರ
ದಲ್ಲಿ ಏನು ಇಧೆ? ಎಂಬದಾಗಿ ಧಿಕ್ಕರಿಸಿ, ಮರವನ್ನು ಹ
ತ್ತುವದಕ್ಕೆ ಎಣಿಸಿ, ನಾಲ್ಕು ಜನವೂ ನಾಲ್ಕು ಕಡೆಗೆ
ಹಗ್ಗಗಳನ್ನು ಹಾಕಿ, ಹತ್ತುತ್ತಾ ಇರುವಲ್ಲಿ, ಒಬ್ಬನು
ಕಾಲು ಜಾರಿ, ಕೆಳಗೆ ಬಿದ್ದನು; ಒಬ್ಬನು ಹತ್ತುವ ಹಗ್ಗ
ಕಡಿದು, ಬಿದ್ದನು. ಮೂರನೇಯುವನು ನಡೂ ಹಗ್ಗದ
ಮೇಲೆ, ನಾಲ್ಕು ಆಳು ಉದ್ದದ ಮೇಲೆ, ಆ ವರಿಗೂ ಹ
ತ್ತಿ, ಮೇಲೆ ಹತ್ತುವದಕ್ಕೂ ಧೈರ್ಯವಿಲ್ಲದೆ, ಕೆಳಗೆ ಇ
ಳಿಯುವದಕ್ಕೂ ಶಕ್ತಿ ಸಾಲದೆ, ನಡಂತ್ರದಲ್ಲಿ ಕೈಕಾಲು
ಗಳು ಅದರಿ ಕೊಂಡು, ಘಟ್ಟಿಯಾಗಿ ಹಗ್ಗವನ್ನು ಪಿರಿಕಿ
ಪಟ್ಟನಿಂದ ಹಿಡಿದು ಕೊಂಡು, ಕಣ್ಣುಗಳು ಮುಚ್ಚಿ

also to the trunk. Nobody is able to climb this tree. On this subject some time ago some mussulmans made light of it, and said "Pooh! what is there in this tree?" and four of them resolving to climb the tree, threw ropes over it on four sides, and as they were climbing up, one slipped his foot and fell down. The rope that another was climbing was cut, and he fell. The third, on the middle of the rope, four men's height up, having climbed so far, had neither power to climb higher, nor strength enough to descend; but midway, his arms and legs trembling, grasped the rope with fright, and with his eyes shut, hung swinging there.

ಹೋಗಿ, ಯಾಲಾಡುತ್ತಾ ಇದ್ದನು. ನಾಲ್ಕನೇಯವನು ಹಗ್ಗದ ಕೊನೆಗೂ ಹತ್ತಿ, ಮರದ ಮೇಲೆ ಹೋಗಿ, ನಿಂತು ಕೊಂಡ ಮಾತ್ರದಲ್ಲಿಯೇ, ಎದುರಾಗಿ ಒಂದು ರೂಪವನ್ನು ಕಂಡನು. ಆ ರೂಪ ಹ್ಯಾಗಿತ್ತೆಂದರೆ;—ದೊಡ್ಡ ಗುಡಾಣ ಗಾತ್ರ ತಲೆಯೂ; ಆ ತಲೆಯ ಮೇಲೆ ಬಾರು ಬಾರುದ್ದವಾಗಿ ಸುತ್ತಿ ಕೊಂಡಿದ್ದ ಕೆಂಬಣ್ಣದ ಜಡೆಗಳು; ಮೊಳ ಉದ್ದ ಮೂಗು; ದೊಡ್ಡ ದೊಡ್ಡವಾಗಿ ಅಗಲವಾದ ಕಣ್ಣುಗಳು; ಮೊರದ ಅಗಲದ ಕಿವಿಯು; ಹುಲಿಯ ಬಾಯಿ; ಅಗಲಕ್ಕೆ ಬಾಯಿ ತೆರೆದರೆ, ಯಾಲಾಡುವ ಕೆಂಪಾದ ಮೊಳ ಉದ್ದ ನಾಲಿಗೆಯೂ; ಕೋರೆ ಹಲ್ಲುಗಳು; ಮೀಸೆಗಳು; ದೊಡ್ಡ ಗಡ್ಡವೂ; ಧಮ್ಮ್ರನಾದ ಕೊರಳು; ಕಪ್ಪಾದ ಬಂಣವು; ಉದ್ದುದ್ದವಾದ ತೋಳುಗಳು; ಅದಕ್ಕೆ ತಕ್ಕ ಎದೆಯೂ, ಬೆನ್ನು ಭಾಗವೂ; ಬಾನೆ ಬೋರಲು ಹಾಕಿದ ಹಾಗೆ ಹೊಟ್ಟೆಯೂ; ಹುಲಿ ಚ

The fourth climbed to the end of the rope, got upon the tree; and the moment he stood there, he saw a form before him. The form was thus:—The head was as big as a large caldron; upon the head were twisted red matted locks a fathom long; a nose a cubit long; huge staring eyes; ears as broad as a dust shovel; a tiger's mouth; when it gaped, a blood red wagging tongue a cubit long; large tusks; mustaches; immense bread; a thick neck; black all over; great long arms; breast and back in proportion; a belly like an invert-

ರ್ಮದ ಹೊದ್ದಿಕೆಯು ಸಹ, ಪುರುಷನಾಕೃತಿಯಾಗಿ,
ಒಂದು ಭೂತಾ ಕಾಣಿಸಲು; ಕಿರ್ರೋ ಎಂಬದಾಗಿ ಕಿರಿ
ಚಿ ಕೊಂಡು, ಬಿದ್ದು, ಮೂರ್ಛೆ ಹೋದನು. ಸಂಗಡ
ಲೇ ಈ ಹಗ್ಗದ ಮೇಲೆ ಯಾಲಾಡುತ್ತಾ ಇದ್ದವನು ಕೈ
ಪಟ್ಟು ಬಿಟ್ಟು ಹೋಗಿ, ಅವನೂ ಬಿದ್ದನು. ಅವನ ನಡು
ವು ಜಾಯಾ ಆಗಿ, ಆ ಮನುಷ್ಯನು ಗೂನು ಬೆನ್ನುಳ್ಳವ
ನು; ತೊಂಭತ್ತು ವರುಷದ ಮುದುಕನಾಗಿ, ಇನ್ನೂ ಜೀ
ವವಂತನಾಗಿ ಈ ಊರಿನಲ್ಲಿಯೇ ಇದ್ಧಾನೆ. ರೂಪವನ್ನು
ಕಂಡು, ಮೇಲೆಯಿಂದ ಕೆಳಕ್ಕೆ ಬಿದ್ದವನು ಮೂರು ದಿ
ವಸದ ವರಿವಿಗೂ ತಾನು ಕಂಡ ರೂಪವನ್ನು ಬಾಯಿ
ಯಿಂದ ಹೇಳುತ್ತಾ, ಹೇಳುತ್ತಾ, ಭಯದಿಂದ ಮೂರ್ಛೆ
ಹೋಗುತ್ತಾ, ಮೂರು ದಿವಸಗಳ ಮೇಲೆ ಪ್ರಾಣವನ್ನು

ed boiler; clothed with tiger's skin; and in the shape of a man. At sight of this goblin he screeched out, "kir-r-ro," and fell down insensible. Instantly, the one who was swinging to and fro on the rope, let go his hold, and fell too. His back was injured, and the man is hump backed; an old man of ninety, he is still alive in this village. All the people who have heard the story from the old man ninety years old, who is still living, tell how the man that saw the goblin and fell down from aloft, did nothing for three days but rave about the goblin he had seen, and faint through terror; and at the end of three days,

ಬಿಟ್ಟನೆಂಬ ವರ್ತಮಾನವನ್ನು ಆ ಬದುಕಿ ಇರುವ ತೊಂಭತ್ತು ವರುಷದ ಮುದುಕನು ಹೇಳಿದ ಮಾತು ಕೇಳಿದ ಸರ್ವ ಜನರು ಹೇಳುತ್ತಾರೆ. ಅದು ಮೊದಲು ಗೊಂಡು, ಈ ಮರದ ಗೊಡೆವೆಗೆ ಒಬ್ಬರೂ ಹೋಗುವದಿಲ್ಲ, ಎಂದು ಅಮಲದಾರ ಹೇಳಲೂ;

ಧೊ. ಅದಕ್ಕೆ ಉತ್ತರ ಆಚೆ ಹೇಳುತ್ತೇನೆ; ಈ ಮರಕ್ಕೆ ಐನೂರು ವರುಷಗಳ ಮೇಲೆ ಆಗಿರ ಬಹುದೆಂಬುವದಕ್ಕೆ ಕಾರಣವೇನು? ಅನ್ನಲು;

ಅ. ಆಲದ ಮರ ನೂರು ವರುಷಗಳಾದ ಮೇಲೆ ಊಡೆಗಳು ಬಿಡುವದು. ಅಂಥಾ ಊಡೆಗಳು ದೊಡ್ಡ ದೊಡ್ಡ ಮರಗಳಾಗಿ ಅವೆ. ಇದಲ್ಲದೆ ನೂರು ವರುಷದ ಮೇಲೆ ಹೊರ್ತು, ಆಲದ ಮರಕ್ಕೆ ತೊರ್ರೆ ಏರ್ಪಡುವದಿಲ್ಲ. ಅಂಥಾ ತೊರ್ರೆ ಎರಡು ಬಾರು ಅಗಲ ವಿಸ್ತಾರವಾ

he died. Since then nobody will meddle with this tree.

When the amildar had done, the gentleman said,

G. I will answer that bye and bye. What reason have you for saying that this tree may be more than five hundred years old?

A. The banyan tree puts forth pendents after it is a hundred years old. These pendents have now become large trees. Besides, hollows are not formed in the banyan tree until after it is a hundred years old. Such hollows having formed two

ಗಿ ಏರ್ಪಟ್ಟು ಇರುವದರಿಂದಲೂ, ಇದಲ್ಲದೆ ಈ ಮರದ
ಲ್ಲಿ ಬಿಟ್ಟು ಇರುವ ಊಡೆಗಳು ಕೆಲ ಕೆಲಕ್ಕೆ ಅದೇ ಪ್ರ
ಕಾರ ತೊರ್ರೆ ಏರ್ಪಟ್ಟು ಇರುವದ್ದರಿಂದ ಸಹಾ, ಐನೂ
ರು ಆರು ನೂರು ವರುಷದ ಮರವಾಗಿರ ಬಹುದೆಂದು,
ಈ ಮರವನ್ನು ನೋಡಿ, ನಾನು ಹೇಳುತ್ತೇನೆ,

ಎಂಬದಾಗಿ ಹೇಳಿದ ಅಮುಲುದಾರನ ಮಾತನ್ನು ಕೇ
ಳಿ, ಸರಿಯೇ, ಎಂಬದಾಗಿ ಒಡಂಬಟ್ಟು, ಆ ದೊಡ್ಡ ಮ
ನುಷ್ಯನು, ಈ ದೇಶದಲ್ಲಿ ಬಹಳ ದೆವ್ವಗಳುಂಟೆಂಬ
ಸಮಾಚಾರವಾಗಿ ಇರುವ ಭಯ ತಟ್ಟಿ, ಆ ಮನುಷ್ಯರು
ಆ ಮೇರಿಗೆ ಕೆಟ್ಟು ಹೋದರು. ಹ್ಯಾಗಾದರಾಗಲಿ; ಜನ
ಗಳ ಬಾಧೆ ಇಲ್ಲದೆ, ಈ ಮರವು ಕ್ಷೇಮವಾಗಿ ಇರುವ
ದು ನೋಡಿ, ನಮಗೆ ಸಂತೋಷವಾಗಿ ಇಧೆ. ಒಳ್ಳೇ
ಮರ, ಒಳ್ಳೇ ದೊಡ್ಡ ಮರವೆಂದು, ಆ ಆಲದ ಮರದ

fathoms broad, and several of the pendents also which this tree has put forth being hollowed in the same way,—looking at the tree, I say that it may be a tree of five or six hundred years old.

When the gentleman had heard the amildar's relation, "True," he said, agreeing with him, "but those men perished so through the common dread of many ghosts in this country." "No matter what became of them, I am glad to see that the tree is vigorous and not injured by any body. It's a fine tree, a fine large tree," the amildar re-

ಕೆಳಗೆ ಸ್ವಲ್ಪ ಹೊತ್ತು ಕುದುರೆಗಳ ಮೇಲೆಯೇ ಇದ್ದು ಕೊಂಡು, ಸಂಚಾರಾ ಮಾಡಿ, ಉಭಯತ್ರರು ಅಲ್ಲಿಂದ ಹೊರಟು, ಕೆರೇ ಕಟ್ಟೆಯ ಮೇಲೆ ಹೋಗುತ್ತಾ ಇರುವಲ್ಲಿ, ಆ ಕೆರೆಯಲ್ಲಿ ಬಹಳ ತುಂಬಾಗಿ ನೀರು ತುಂಬಿ, ಎರಡು ಕಡೆ ಕೋಡಿಗಳ ಕೊಂಡಿ ಕಟ್ಟುಗಳಿಗೆ[7] ನೀರು ಆತು ಕೊಂಡು, ತೂಬುಗಳಲ್ಲಿ ಭರಪೂರಾಗಿ ಕಾಲಿವೆಗಳಲ್ಲಿ ಹರಿಯುವ ನೀರನ್ನೂ, ಅದರ ಕೆಳಗೆ ಎಲ್ಲಿ ನೋಡಿದಾಗ್ಯೂ, ಉಳುವ ಬಿತ್ತುವ ಗದ್ದೆಗಳ ನೋಡಿ, ಬಹಳ ಸಂತೋಷ ಪಟ್ಟು ಕೊಂಡು, ಕೆರೇ ಕೆಳಗೆ ಇರುವ ದೊಡ್ಡ ಮಡುವಿನಲ್ಲಿ ಒಳ್ಳೇ ತುಂಬಾದ ಥಣ್ಣಾದ, ಕಪ್ಪಾದ, ತಿಳಿಯಾದ, ರುಚಿಯಾದ ನೀರನ್ನೂ; ಕಮಲಗಳು, ನೈದಿಲೆಗಳು, ಮುಂತಾದ ಹುವ್ವುಗಳು; ಆ ಹುವ್ವು

plied. After remaining for a short time on horseback under the tree, and going about it, they both set out thence ; and as they were going along the bank of the tank, they were delighted with the sight of the tank completely full of water ; water pressing the bank raised on the weirs on both sides, water completely filling the sluices, and running off by the channels ; and below that, wherever you look, rice lands being ploughed and sown ; good water filling a large pool below the tank, cool, dark, clear, and delicious ; lotuses, lilies, and other

7. In order to save as much water as possible, a temporary bank of earth is raised upon the top of the weir, which is washed away if the water rise too high for the safety of the tank bank, and lets off the superabundance of water.

ಗಳಲ್ಲಿ ಇರುವ ಜೇನನ್ನು ಪಾನ ಮಾಡುವದಕ್ಕಾಗಿ ಗುಂಪು ಗುಂಪಾಗಿ ಝೇಂಕಾರ ಮಾಡಿ ಕೊಂಡು ಇರುವ ತುಂಬೆಗಳನ್ನು; ಇನ್ನು ಅನೇಕವಾದ ನೀರು ಪಕ್ಷಿಗಳು, ಕಾಗಿಗಳು, ಕೋಳಿಗಳು, ಬಕಗಳು; ಇದಲ್ಲದೆ ನೀರಿನೊಳಗೆ ಸಂಚಾರ ಮಾಡುವ ನಾನಾ ವಿಧವಾದ ಧ್ವನಿಗಳಿಂದ ಕೂಗುತ್ತಿರುವ ಕಪ್ಪೆಗಳನ್ನು; ದೊಡ್ಡ ಕೈಬಾಚಿಗಳ ಹಾಗೆಯೂ ಮೊನೆಯಾಗಿ ಮುಳ್ಳಾಗಿ ಇರುವ ಕೋರೆಗಳಿಂದ, ಕಪ್ಪಗೆ, ಕೆಂಪಗೆ, ಬೆಳ್ಳಗೆ ಸಂಚಾರ ಮಾಡುವ ಏಡಿಗಳನ್ನು; ಇಂಥಾ ಏಡಿಗಳ ಮುಂತಾದವುಗಳ ಕಟಕ್ಕೆಂದು[8] ತಮ್ಮ ದಾಡೆ ಹಲ್ಲುಗಳಿಂದ ಕತ್ತರಿಸುತ್ತಾ, ನುಂಗುವ ಘಟ್ಟಿಯಾದ ಬೆನ್ನುನ್ನೂ ಹೊಟ್ಟೆಯೂ, ದೃಢವಾದ ಕಾಲುಗಳೂ, ಉದ್ದವಾದ ಕೊರಳೂ, ಬಾಯಿ, ಕುರುಚಾದ ಬಾಲವುಳ್ಳ ತಾಬೇಲಗಳನ್ನೂ; ನಾನಾ ಪ್ರಕಾರವಾದ ಸಂಚಾರಗಳು ಮಾಡುವ

flowers; large humming bees crowding to drink the honey in the flowers; also numerous aquatic birds, crows, water-hens, and cranes; frogs too that inhabit the water, croaking with many various notes; crabs black, red, white, crawling about, with nippers like adzes, sharp and pointed; turtles with their hard backs and bellies, strong legs, long necks, and mouths, and stumpy tails, that crunch such crabs and other animals with their grinders, and swallow them; birds of various

8. Imitative of the sound of cracking.

ಹಕ್ಕಿಗಳೂ; ಝುಳಕುಗಳ[9] ತೋರಿಸುವ ಮತ್ಸ್ಯಗಳ ಗುಂಪುಗಳನ್ನೂ; ಅವುಗಳ ನೋಡಿ, ನೋಡಿ, ಹೊಂಚಿ ಕೊಂಡು, ಮೇಲೆ ಸರಿಯಾಗಿ ತಿರುಗುತ್ತಾ, ತಿರುಗುತ್ತಾ, ಬುಡಕ್ಕೆಂದು ಮುಣುಗಿ, ಮತ್ಸ್ಯಗಳನ್ನು ನುಂಗುವ ನೀರು ಬುಡಗನ ಹಕ್ಕಿಗಳನ್ನೂ; ಇನ್ನು ಕಂಕಗಳೆಂಬ ಕರೀ ಹದ್ದುಗಳನ್ನೂ; ಗೃಧ್ರಗಳೆಂಬ ಬಿಳೀ ಹದ್ದುಗಳನ್ನೂ; ಮೊಕ ಬೆಳ್ಳಗೆ, ಮೈಎಲ್ಲಾ ಕೆಂಪಗೆ, ಕೇಳುವದಕ್ಕೆ ಚನ್ನಾಗಿ ಇರುವಂಥಾ ಧ್ವನಿ ಮಾಡುತ್ತಾ, ಮೇಲೆ ಸಂಚರಿಸುವ ಗರುಡ ಪಕ್ಷಿಗಳನ್ನೂ; ನೀಳ ನೀಳವಾಗಿ ನೀರಿನಲ್ಲಿ ಸಂಚಾರ ಮಾಡುವ ನೀರುಳ್ಳಿಗನೆಂಬ ಹಾವುಗಳನ್ನೂ; ಆ ಹಾವುಗಳ ನೋಡುತ್ತಾ, ನೋಡುತ್ತಾ, ಭಗ್ಗನೆ ಹಿಡಿದು, ಅಂತರಿಕ್ಷಕ್ಕೆ ಹಾರುವ ಅನೇಕವಾದ ಗರುಡಾದಿ ಪಕ್ಷಿಗಳನ್ನೂ ನೋಡಿ, ಸಂತೋಷ ಪಟ್ಟರು.

flight; shoals of glistening fish; water birds that narrowly watch them, skim lightly above them, dart under with a "plop," and swallow the fish. Besides these, *kankas* or black vultures; *grudhras* or white vultures; brahmany kites with their white heads, bodies all red, soaring above, and uttering their pleasing note; long snakes called water-snakes, that swim about in the water; and numerous kites and other birds that watch the snakes, suddenly seize and carry them off into the air.

9. Intended to imitate quick flashings.

ಮತ್ತು ಅಂಬಿಗಾರರು, ಜಂಬರರು, ಬೆಸ್ತರು[1] ಮುಂತಾದವರು ಆ ಮಡುವಿನ ಸುತ್ತು ಮುತ್ತೂ ಬೀಸು ಬಲೆಗಳು, ಗೂಡು ಬಲೆಗಳು, ಕೋಲು ಬಲೆಗಳು; ಇದಲ್ಲದೆ ಗಾಳದ ಜಳೆಗಳು ಸಹಾ, ಹಿಡಿಕೊಂಡು, ಅನೇಕವಾದ ಮತ್ಸ್ಯಗಳ ಹಿಡಿಯುತ್ತಾ, ರಾಶಿಗಳು ಹಾಕುತ್ತಾ, ಬಲೆಗಳು ಬೀಸುತ್ತಾ, ಒಡ್ಡುಗಳ ಕಟ್ಟಿ, ನೀರು ಚಲ್ಲಿ, ಕೊಡಮೆಗಳು,[2] ನೀರು ಬಲೆಗಳು, ಗೂಡು ಬಲೆಗಳು ಹಾಕಿ, ಅದರಲ್ಲಿ ಶಿಕ್ಕಿದ ಅನೇಕ ಮೀನುಗಳನ್ನು ಹಿಡಿದು, ರಾಶಿ ಹಾಕುತ್ತಾ, ಗಾಳದ ಜಳೆಗಳಿಗೆ ಧಾರವನ್ನು ಉದ್ದವಾಗಿ ಕಟ್ಟಿ, ಆ ಧಾರದ ಮಧ್ಯದಲ್ಲಿ ಒಂದು ಬೆಂಡ

But when the gentleman saw the fish catchers,—boatmen, fishermen, netters and others all round the pool with casting nets, bag nets, pole nets, fishing rods too, catching large quantities of fish; heaping them up; throwing their nets; making small dams (across the pool;) baling over the water; setting trap baskets, throwing small hand nets and bag nets; taking the numerous fish caught in them, and putting them in heaps;—they had also long lines fixed to fishing rods, a cork fixed in the middle of the line, a sharp steel hook at the

1. These are but three different castes of fishermen; their occupation the same, though translated by different words.

2. A common mode of catching very small fish that are found in pools is, to construct a small dam of earth across the pool, with the hand or a piece of a broken water pot throw the water from one side to the other, catching with the hand or small nets all on the side nearly empty; then making an opening in the dam, putting a double funnel shaped wicker basket in the opening, and letting the water run through it, and catching the fish in it, between the outer and inner funnels.

ನ್ನು[3] ಕಟ್ಟಿ, ಕೊನೆಗೆ ಒಂದು ಉಕ್ಕಿನ ಕೊಂಡಿಯನ್ನು ಮೊನೆಯಾಗಿರುವದನ್ನು ಕಟ್ಟಿ, ಆ ಉಕ್ಕಿನ ಕೊಕ್ಕಿಯ ಮುಳ್ಳಿಗೆ ಕೆಂಪಾಗಿರುವ ಮಣ್ಣಿನ ಹುಳವನ್ನು ಚುಚ್ಚಿ, ಆ ಜಳೆಯ ಧಾರವನ್ನು ನೀರಿನಲ್ಲಿ ಹಾಕಲು; ಆ ಬೆಂಡು ಇರುವ ಪರಿಯಂತರ ಧಾರಾ ಮುಣುಗಿ ಹೋಗುವದು. ಆ ಕೊನೆಯಲ್ಲಿರುವ ಹುಳುವು ತಮಗೆ ಆಹಾರವೆಂದು, ಮೀನುಗಳು ಬಂದು, ನುಂಗಲು; ಆ ಉಕ್ಕಿನ ಮುಳ್ಳು ಗಂಟ್ಲಗೆ ತಗಲಿ ಕೊಳ್ಳಲೂ; ಅದು ಒಳಕ್ಕೆ ಎಳೆಯಲೂ; ಈ ಬೆಂಡು ಮುಣುಗುವ ಸುಮಾರು ನೋಡಿ ಕೊಂಡು, ಛಳಕ್ಕೆಂದು, ಆ ಧಾರವನ್ನು ಮೇಲಕ್ಕೆ ಶಳವುದರಿಂದ,[4] ಮೀನು ಸುದಾ ಬರುವ ಚಮತ್ಕಾರದಿಂದಲೂ, ಮೀನುಗಳ ಹಿಡಿಯುವವರನ್ನು ಕಂಡು, ಈ ಸರದಾರನಿಗೆ ಕೋಪಾ ಬಂದು, ಆಮೀಲನಿಗೆ ಹೇಳುವದೇನಂದರೆ;—ಇಂಥಾ

end, a red earthworm pierced on the point of the hook ; and when they throw the fishing line into the water, the line sinks as far as the cork. The fish, thinking the worm at the end of the hook to be their food, come and swallow it ; the steel point catches in their throat ; this draws the cork under water. Judging from the sinking of the cork the fisherman draws up the line with a jerk, and the fish comes up with it. When the gentleman saw them catching fish by these devices, he was angry, and said to the amildar, "These men must not

3. A piece of pith.

4. ಶಳೆಯುವದರಿಂದ.

ಒಳ್ಳೇ ನೀರಿನ ಮಡುವಿನಲ್ಲಿ ವಾಸವಾಗಿರುವ ಮತ್ಸ್ಯಗಳನ್ನು ಇನ್ನು ಮೇಲೆ ಈ ಜನರು ಹಿಡಿಯ ಕೆಲಸವಿಲ್ಲಾ. ಬೇಕಾದರೆ, ಕೆರೆಯಲ್ಲಿ ಹಿಡಿಯಲಿ. ಈ ಮಡುವಿನಲ್ಲಿ ಇನ್ನು ಮೇಲೆ ಮತ್ಸ್ಯಗಳ ಹಿಡಿದವನಿಂದ ಭಾರಿ ಜುಲುಮಾನೆ ತೆಗದು ಕೊಂಡು, ಶಿಕ್ಷೆ ಮಾಡ ತಕ್ಕದ್ದು ಯುಕ್ತವು. ಈ ಕೆಲಸ ನಮ್ಮ ಮಾತಿನ ಮೇಲೆ ನೀವು ಮಾಡದೆ ಇದ್ದರೆ, ಸರಕಾರದ ಹುಕುಂ ಕಳುಹಿಸಿ ಕೊಡುವೆನು.

ಎಂದು ಹೇಳಲು; ಆ ಮಾತನ್ನು ಕೇಳಿದ ಮಾತ್ರದಿಂದಲೇ ಅಮಲದಾರನು, ಯಾರೋ, ಆಳುಗಳು? ಎನ್ನಲೂ; ಸಮೀಪದಲ್ಲಿದ್ದ ಜವಾನರೆಲ್ಲರು ಎದುರಾಗಿ ನಿಂತರು. ಅವರನ್ನ ನೋಡಿ, ಈ ಮೀನುಗಳ ಹಿಡಿಯುವವರ ಬಲೆಗಳನ್ನೆಲ್ಲಾ ಕಿತ್ತು ಕೊಂಡು, ಇವರೆಲ್ಲರನ್ನು ಕಚೇರೀ ಪಹರೆದಲ್ಲಿ ಇಡಿಸಿರಿ; ಈ ಮೀನುಗಳ ಎಲ್ಲವನ್ನು

hereafter catch the fish that live in a beautiful pool like this. If they like, let them fish in the tank. You ought to fine heavily and punish any one who fishes in this pool in future. If you don't do this at my request, I shall send a government order to that effect."

He spoke; and the moment the amildar heard him, he called out, "Who is there, you servants?" Immediately, the peons who were at hand all stood before him. Addressing them, he commanded, "Seize all these fishermen's nets, take all the men into custody at the office, let the water-

ನೀರುಗಂಟಿಗಳ ಕೈಯಿಂದ ಹೊರಿಸಿ ಕೊಂಡು ಹೋಗಿ, ಪೇಟೆಯಲ್ಲಿ ಏಲಂ ಹಾಕಿಸುವ ಮೇರಿಗೂ, ಕ್ರಯ ಬಂದ ಹಣವನ್ನು ಕಚೇರಿಗೆ ತಂದು, ಪರಖಾವಣೀ ಮಾಡಿ, ಶಿವಾಯಿ ಜಮೆಗೆ[5] ದಾಖಲು ಮಾಡುವ ಹಾಗೆ, ಕೊತ್ವಾಲನಿಗೆ ತಾಕೀತಿ ಮಾಡುವದೆಂದು, ಅಪ್ಪಣೆ ಕೊಡಲು; ತಕ್ಷಣದಲ್ಲಿ ಸರಕಾರದ ಆಳುಗಳು ಆ ಜನಗಳನ್ನೆಲ್ಲರನ್ನೂ ಕಚೇರಿಗೆ ತೆಗದು ಕೊಂಡು ಹೋಗಿ, ಪಹರೆದಲ್ಲಿ ಇಟ್ಟು, ಮೀನುಗಳ ಯಾವತ್ತು ಪೇಟೆಯಲ್ಲಿ ಕೊತ್ವಾಲನ ಮಾರೀಫತ್ತು ಯಾಲಂ ಹಾಕಿಸಿ, ಅದರಲ್ಲಿ ಬಂದ ಐವಜನ್ನು ಕಚೇರಿಗೆ ತಂದು, ಶಿವಾಯಿ ಜಮೆಗೆ ದಾಖಲು ಮಾಡಿಸಿದರು.

ಇಲ್ಲಿ[6] ಈ ಸರದಾರನನ್ನು ನೋಡಿ, ಅಮಲದಾರನು

men carry all these fish, and order the cutwal to have them sold by auction in the street, bring the proceeds into the office, count it, and enter it in the account of "extraordinaries." Instantly the government servants took all those people to the office, put them into custody, sold all the fish by auction in the street through the cutwal, brought the money realized into the office, and had it entered in the account of "extraordinaries."

Here, the amildar addressing the gentleman,

5. *i. e.* an account of receipts from other than the regular sources of revenue.

6. *i. e.* where the gentleman and amildar stood. This is the usual expression in returning after a digression.

ಹೇಳುವದೇನಂದರೆ;—ತಮ್ಮ ಅಪ್ಪಣೇ ಆದ ಪ್ರಕಾರ
ವೇ ಸರಕಾರದಲ್ಲಿ ಅಪ್ಪಣೆ ಆಗುತ್ತೆ. ಈ ಸಂಗತಿ ನಾ
ನೇ ಹಜೂರಿಗೆ ಅರ್ಜಿ ಮಾಡಿ, ಇನ್ನೊಂದಿಗೂ ಆ ಮಡುವಿ
ನಲ್ಲಿ ಮೀನುಗಳ ಹಿಡಿಯದ ಹಾಗೆ, ಹುಕುಂ ತರಿಸಿ, ಆ
ಹುಕುಮಿನ ಅಮಲನ್ನು ಇದೇ ಬಂಡೆಯ ಮೇಲೆ ಶಾಸ
ನ ಹೊಡಿಸಿ, ತಮ್ಮ ದಿವಸದಲ್ಲಿ ಈ ಒಳ್ಳೇ ಕೆಲಸ ನಡದಂ
ಥಾದ್ದು ಶಾಶ್ವಿತವಾಗಿ ಇರುವ ಮೇರಿಗೆ ಮಾಡುತ್ತೇನೆ,

ಎಂದು ಹೇಳುವ ಅಮುಲುದಾರನ ಶಿಯ್ಯಾದ ಮಾ
ತುಗಳನ್ನು ಕೇಳಿ, ಮನಸ್ಸಿನಲ್ಲಿ ಸಂತೋಷ ಪಡುತ್ತಾ,
ಬಾಯಿಯಿಂದಲೂ, ಸಂತೋಷಾತಿಶಯದಿಂದ ಮಾತನಾ
ಡುತ್ತಾ, ಉಭಯತ್ರರೂ ಪುನಹಾ ಊರಿಗೆ ಬಂದು, ಸ
ರದಾರನು ಬಂಗಲೆಗೆ ಹೋದನು; ಆಮಿಲನು ಕಚೇರಿ
ಗೆ ಬಂದು, ಆ ಬೆಸ್ತರು ಮುಂತಾದವರ ಕಡೆಯಿಂದ, ಇ

said, "The government will give an order according to what you have directed. I myself shall write to the Head Office to this effect, get an order that fish shall never again be caught in that pool; have the substance of the order inscribed on this rock, and perpetuate the occurrence of this good deed in your days."

Hearing the amildar's agreeable speech, the gentleman, glad at heart, and talking very pleasantly, both of them returned to the town. The gentleman went to the bungalow; the amildar came to his office, took a written agreement from

ನ್ನು ಮೇಲೆ ಸದರೀ ಮಡುವಿನಲ್ಲಿ ಮೀನುಗಳನ್ನು ಹಿಡಿದರೆ, ಸರಕಾರಕ್ಕೆ ಭಾರೀ ಗುಂನೆಗಾರಿ ಕೊಟ್ಟು, ಮಾಡಿದ ಶಿಕ್ಷೆಗೆ ಒಳಗಾಗಲುಳ್ಳವರೆಂದು, ಮುಚ್ಚಲಿಕೆಗಳು ಬರಿಸಿ ಕೊಂಡು, ಅವರವರ ಮನೆಗಳಿಗೆ ಅಪ್ಪಣೆ ಕೊಟ್ಟು, ಕಳುಹಿಸಿದನು.

the fishermen and the rest, that, "if we ever hereafter fish in the above-mentioned pool, we will pay a heavy fine to government, and subject ourselves to due punishment." He then dismissed them, and sent them to their several homes.

---

## ಒಂಭತ್ತನೇ ಸಂಭಾಷಣೆ.

### ಬ್ರಾಹ್ಮಣರ ಸಂಗಡ.

ಈ ದೊಡ್ಡ ಮನುಷ್ಯನು ಆ ದಿವಸ ಆ ಊರಿನಲ್ಲಿ ಇದ್ದು, ಮೂರನೇ ದಿವಸ ಮುಂದಕ್ಕೆ ಹೋಗಿ, ಇನ್ನೊಂದು ಊರಿನ ಬಳಿಯು ಗುಡಾರ ಹಾಕಿಸಿ ಕೊಂಡು,

## DIALOGUE IX.

### *With some Brahmans.*

The gentleman having stayed that day in the town, went forward on the third day, and as he pitched his tent and halted near the tank of another

ಇಳಿದನು. ಆ ಸಮಯದಲ್ಲಿ ಆ ಕೆರೆಗೆ ಸ್ನಾನ ಮಾಡು
ವದಕ್ಕೆ ಆ ಊರಿನಲ್ಲಿರುವ ಬ್ರಾಹ್ಮಣರು, ಹತ್ತು ಹದಿ
ನೈದು ಮಂದಿ, ಗುಂಪಾಗಿ ಬಂದರು. ಆ ಬಂದ ಬ್ರಾ
ಹ್ಮಣರನ್ನು ನೋಡಿ, ಅಯ್ಯಾ, ಬ್ರಾಹ್ಮಣರೇ, ಇಲ್ಲಿ ಬ
ನ್ನಿ, ಎಂಬದಾಗಿ ಕೈ ಸೈಗೆ ಮಾಡುತ್ತಾ, ಡೇರೇ ಬಾಗಿಲ
ಮುಂದೆ ಮರದ ನೆರಳಿನಲ್ಲಿ ಕುಳಿತು ಇರುವ ಸರದಾರ
ನನ್ನು ನೋಡಿ, ಆ ಜನಗಳಲ್ಲಿ ಸ್ವಲ್ಪ ಹಿರಿಯರಾದವರು,
ಇದು ಯಾತಕ್ಕೋ? ಈ ತಾಂಬ್ರಮುಖನು[7] ಕರೆಯು
ತ್ತಾನೆ; ಹೋಗಿ, ಬರೋಣಾ; ಬನ್ನಿ, ಎಂಬದಾಗಿ ಎಲ್ಲ
ರೂ ಕೂಡ್ಲೆ ಆ ಡೇರೆಯ ಬಳಿಗೆ ಬಂದು, ಈತನನ್ನು
ಕಂಡು, ಕೆಲವರು ಸಲಾಂ ಮಾಡಿದರು. ಕೆಲವರು, ಕ್ಷೇ
ಮವೇ ಧೊರೆಗಳಿಗೆ? ಎಂಬದಾಗಿ ಕೇಳಿದರು. ಕೆಲವ
ರು ಸುಮ್ಮನೆ ಇದ್ದರು. ಈ ಮೋರಿಗೆ ಎಲ್ಲರೂ ಆ ಮ

town, some brahmans of the town, ten or fifteen persons, came in a party to the tank to bathe. The gentleman addressing them, said, "Sirs, brahmans, come here;" and beckoned to them with his hand. Seeing the gentleman sitting on a chair, under a tree in front of the tent, some of them who were a little senior to the rest said, "What's up now? This Copper-face is calling us. Let's go and see. Come along." At once they all went to the tent; and seeing him, some made salaam. Some asked, "Is the gentleman quite well?" Others were silent.

7. An epithet of red-faced persons, or Europeans.

ರದ ನೆರಳಿನಲ್ಲಿ ಕುಳಿತು ಕೊಂಡು, ಅವರಲ್ಲಿ ಇಬ್ಬರು ಮುಂದಾಗಿ ಕುಳಿತು ಇದ್ದವರು, ಅಯ್ಯಾ, ಧೊರೆಯೇ, ನೀವು ಎಲ್ಲಿಂದ ಬಂದಿರಿ? ಮುಂದಕ್ಕೆ ಎಲ್ಲಿಗೆ ಹೋಗ ಬೇಕು? ನಮ್ಮನ್ನು ಕರೆದ ಕೆಲಸವೇನು? ಎಂದು ಕೇಳಲು;

ಧೊ. ನಾವು ಹಿಂದಣ ಊರಿನಿಂದ ಬಂದೆವು; ಮುಂದಿನ ಊರಿಗೆ ಹೋಗ ಬೇಕು. ನಿಮ್ಮ ಸಂಗಡ ಮಾತನಾಡುವದಕ್ಕಾಗಿ ನಿಮ್ಮನ್ನು ಕರೆದೆವೆಂದು ಹೇಳಲು;

ಒಳ್ಳೇ ಚಮತ್ಕಾರಿಯಾಗಿ ಇದ್ಧಾನೆಂದು, ತಿಳಿದು ಕೊಂಡು,

ಬ್ರಾ. ಸಂತೋಷ, ಆಗಲಿ; ನಾವು ಸ್ನಾನಕ್ಕಾಗಿ ಬಂದು ಇದ್ಧೇವೆ; ಸ್ನಾನವನ್ನು ಮಾಡಿ, ಮನೆಗಳಿಗೆ ಹೋಗಿ, ಭೋಜನಾದಿಗಳು ತೀರಿಸಿ ಕೊಂಡು, ಮೂರನೇ ಝಾಮದಿಂದಾ[8] ಪುನಹಾ ಬರುತ್ತೇವೆ. ಸಾವಕಾಶ

Thus they all sat down in the shade of the tree; and two of them, who sat before the rest asked, "My lord, whence have you come? Whither do you intend to proceed? Why did you call us?"

G. "I came from the town behind; I intend to go to the town before. I called you to have a talk with you," he replied.

Seeing that he was a witty man, they said,

B. "Very well; glad to hear it. We have come to bathe. We shall bathe, go home and take our meal, &c., come again after the third

8. *i. e.* after three o'clock; the third watch being from 12 to 3.

ವಾಗಿ ಸಾಯಂಕಾಲದ ಪರ್ಯಂತರ ಮಾತನಾಡ ಬಹುದು, ಎಂದು ಹೇಳಲು;

ಧೊ. ಆದರೆ ಇನ್ನೂ ಸ್ನಾನ ಭೋಜನಗಳು ಇಲ್ಲವೋ? ಅದೇ ಮೋರಿಗೆ ಸ್ನಾನ ಭೋಜನಗಳ ತೀರಿಸಿಕೊಂಡು, ಮೂರನೇ ಝಾವದಿಂದ ನೀವೆಲ್ಲರು ಇದೇ ಮೋರಿಗೆ ಬಂದರೆ, ಕೆಲ ಹೊತ್ತು ಸಂತೋಷವಾಗಿ, ಮಾತನಾಡಿ ಕೊಂಡು ಇರ ಬಹುದು. ಈ ದಿವಸ ನೀವು ಬಾರದೆ ಇದ್ದರೆ, ನಾವು ನಾಳೆ ಮುಂದಕ್ಕೆ ಹೊರಡುತ್ತೇವೆ; ನಿಮ್ಮ ಮಾತು ನಿಮ್ಮಲ್ಲೇ ಉಳಿಯುತ್ತೆ,[9]

ಎಂದು ಹೇಳುವ ಸರದಾರನ ಮಾತು ಕೇಳುತ್ತಾ, ಅದೇ ಮೋರಿಗೆ ಬರುತ್ತೇವೆ, ಮಾತನಾಡುತ್ತೇವೆಂದು, ಭರವಸಾ ಕೊಟ್ಟು, ಆ ಬ್ರಾಹ್ಮರು ಹೊರಟು, ಕೆರೆಗೆ

watch, and then we can talk at leisure till evening."

G. "What! have you not bathed and breakfasted yet? Do so; bathe and breakfast; and if you all come in this way after the third watch, we may have a little pleasant conversation. If you don't come to day, I shall set out to morrow, and your word will remain with yourselves."

Hearing the gentleman speak thus, the brahmans assured him, "We will come as we have said, and talk with you;" set out, came to the tank,

9. *i. e.* you will have told a lie; your word will not proceed to its accomplishment.

ಬಂದು, ಸ್ನಾನಾ ತೀರಿಸಿ ಕೊಂಡು, ಮನೆಗಳಿಗೆ ಹೋಗಿ, ಭೋಜನವ್ನೂ ತೀರಿಸಿ ಕೊಂಡು, ಈ ಜನಗಳೆಲ್ಲವ್ನೂ ಕೂಡಿ, ಮೂರು ಝಾವದಿಂದ ಹೊರಟು, ಕೆರೆಯ ಬಳಿಯಣ ಗುಡಾರದ ಹತ್ತರಕ್ಕೆ ಬಂದು, ಒಳಗೆ ಇರುವ ಧೊರೆಗೆ ವರ್ತಮಾನ ಹೇಳಿ ಕಳುಹಿಸಲೂ; ತಾನೇ ಡೇರೆಯಿಂದ ಹೊರಗೆ ಬಂದು, ಎಲ್ಲರೂ ಒಳಗೆ ಬರಬಹುದೆಂದು, ಅಪ್ಪಣೆ ಕೊಡಲು; ಎಲ್ಲರು ಆ ಡೇರೇ ಒಳಕ್ಕೆ ಹೋಗಿ, ಅಲ್ಲಿ ಇರುವ ಕಾಲುಮಣೆಗಳ ಮೇಲೆಯೂ, ಕುರಿಚಿಗಳ ಮೇಲೆಯೂ, ಕುಳಿತು ಕೊಂಡರು. ಕೆಲಬರು ಮುಂದು ಗಡೆ ಇದ್ದವರು ಧೊರೆಗಳಿಗಲ್ಲವೇ?[1] ತಾವು ಈಗ ಎಲ್ಲಿನ ವರಿಗೂ ದಯ ಮಾಡೋಣವಾಗುತ್ತೆ?[2] ಎನ್ನಲು;

finished their ablutions, went home, despatched their meal, and all together set out after three o'clock, came to the tent near the tank, and sent to inform the gentlemen, who was within. He himself came out of the tent, and on his saying "You may all come in," they all went into the tent, and sat down upon footstools and chairs that were there. Some who sat in front said, "Is it not to my lord (that we are about to speak?) How far may you be pleased to be going?"

1. A very polite mode of address.

2. *lit.* how far are you going to favour us? A phrase used for either coming or going; also for other things; on the principle that whatever a man of rank does, is a favour.

ಧೊ. ನಾವು ಮದರಾಸೆಂಬ ಪ್ರತಿನಾಮಧೇಯವುಳ್ಳ ಚನ್ನಪಟ್ಣದಲ್ಲಿ ಇದ್ದೆವು; ಈಗ ಈ ಶೀಮೆಗೆ ಬಂದು ಇಧೇವೆ. ನೀವೆಲ್ಲರು ಇದೇ ಊರೇನೋ?

ಬ್ರಾ. ಹೌದಯ್ಯಾ, ನಾವೆಲ್ಲರು ಇದೇ ಊರಿನವರು.

ಧೊ. ಎಲ್ಲರಿಗೂ ಈ ಊರಿನಲ್ಲಿ ಜೀವನಕ್ಕೆ ಏನು ಭಿತ್ತಿ ಉಂಟು?

ಬ್ರಾ. ಈ ಗ್ರಾಮ ಅಗ್ರಹಾರವಾಗಿ ನಡಿಯುತ್ತೆ.

ಧೊ. ಅಗ್ರಹಾರವಂದರೆ, ಸರಕಾರಕ್ಕೆ ಏನಾದರೂ ತೆರಿಗೆ ಉಂಟೋ?

ಬ್ರಾ. ಸರಕಾರಕ್ಕೆ ೪೦೦ ನಾನೂರು ವರಹಾ ತೆರುತ್ತೇವೈಯ್ಯಾ.

ಧೊ. ನಾನೂರು ವರಹಾ ಸರಕಾರಕ್ಕೆ ತೆತ್ತ ಮೇ

G. I was in Channapatnam, otherwise called Madras; and now I am come to this country. Are you all of this town?

B. Yes, Sir; we are all this townspeople.

G. What means of living does this town afford you all?

B. This village is an *agrahāra*.

G. An *agrahāra?* Does it pay any tax to Government?

B. We pay (400) four hundred pagodas to Government, Sir.

G. How can it be called an *agrahāra*, when

ಲೆ, ಅಗ್ರಹಾರವೆನ್ನುವದೇನು? ಬಹಳ ಹಣ ತೆರುತ್ತೀರಿ. ಪೂರ್ವದಿಂದಲೂ ಹೀಗೆಯೇ ಹಣ ತೆರುತ್ತಾ ಬಂತೋ?

ಬ್ರಾ. ಪೂರ್ವದಲ್ಲಿ ಸರ್ವಮಾನ್ಯವಾಗಿ ಧಣಿಗಳು ನಡಿಸಿ ಕೊಂಡು ಬಂದರು. ಈಚೆಗೆ ಟೀಪೂ ಸಾಬರ ದಿವಸದಲ್ಲಿ, ನೂರು ವರಹಾ ಜೋಡೀ ಮೊಕರೂರು ಆಯಿತು. ಅದಕ್ಕೆ ಈಚೆ ದಿವಾನ್ ಪೂರ್ಣೈಯನವರು ಮುನ್ನೂರು ವರಹಾ ಹೆಚ್ಚಾಗಿ ಕಟ್ಟಿ ಬಿಟ್ಟು ಇರುವದರಿಂದ, ಆ ಹಣವೂ ತೆತ್ತು ಕೊಂಡು, ಸ್ಥಳಾ ಬಿಟ್ಟು, ಇನ್ನೆಲ್ಲಿಗೂ ಹೋಗಲಾರದೆ, ಕೆಲವರು ಇಲ್ಲಿಯೇ ಕಚ್ಚಿ ಕೊಂಡು ಇದ್ಧೇವೆ; ಕೆಲವರು ಹಣಾ ತೆರಲಾರದೆ, ಸ್ಥಳ ಪರಸ್ಥಳವಾಗಿ ನಡದರು. ಈ ಮೋರಿಗೆ ಕಷ್ಟ ಪಟ್ಟು ಕೊಂಡು ಇದ್ಧೇವೆ. ಪೂರ್ವದಲ್ಲಿ ಸರ್ವಮಾನ್ಯವಾಗಿ ನಮಗೆ ಈ ಗ್ರಾಮ ನಡೆದು ಬಂದದ್ದಕ್ಕೆ ಹಿಂದಣ ಧೊ

you pay four hundred pagodas to Government? You pay a large sum. Has it always paid at this rate?

B. Formerly our rulers used to give it quite free. Since then, in the days of Tippu Saib, a quitrent of one hundred pagodas was fixed. Since that again, Dewan Pūrniah raised it three hundred pagodas. So some of us, unable to leave the place and go anywhere else, pay the money and stick here. Others, unable to pay the money, went elsewhere. In this way we suffer. There are copper inscriptions made and given by former sov-

ರೆಗಳು ಬರೆಸಿ ಕೊಟ್ಟ ತಾಂಬ್ರ ಶಾಸನಗಳವೆ. ಅದೇ ಅಭಿಪ್ರಾಯವನ್ನು ತೋರಿಸುವ ಶಿಲಾ ಶಾಸನವೂ ಊರು ಮುಂದೆ ಸ್ಥಿರವಾಗಿ ಆಳುದ್ದಕ್ಕೆ ನಿಂತು ಇಧೆ. ಇದು ಯಾವದುನ್ನು ಪೂರ್ವಾಪೂರ್ವ[3] ವಿಚಾರಿಸಿ ನಡಿಸುವ ಪ್ರಭುಗಳೊಬ್ಬರೂ ಕಾಣಿಸಲಿಲ್ಲ. ಅಂಥಾ ಪ್ರಭು ಯಾವಾಗ ಹುಟ್ಟುವನೋ ಎಂದು, ದೇವರ ಪ್ರಾರ್ಥನೆ ಮಾಡುತ್ತಾ, ಈ ಮೇರಿಗೆ ಬಡತನದಿಂದ ಕಾಲಕ್ಷೇಪಾ ಮಾಡುತ್ತೇವಯ್ಯಾ.

ಧೊ. ಬಹಳ ಹಣ ತೆರುತ್ತೀರಿ. ಆದರೆ ಟೀಪೂ ಸಾಬರೆಂತೂ ಬ್ರಾಂಹ್ಮರ ಅಗ್ರಹಾರಕ್ಕೆ ತಕ್ಕಷ್ಟು ಜೋಡೀ ಮಾಡಿದ್ದು ಸರಿಯಾಗಿ ತೋರುತ್ತೆ. ಅದು ಯಾಕಂದರೆ, ಆತನು ಬ್ರಾಂಹ್ಮಣನಲ್ಲ; ಆದ್ದರಿಂದ ದಿವಾನ್ ಪೂ

ereigns, to the effect that this village used formerly to be given to us free. And there is a stone inscription shewing the same thing, that stands in front of the village, as high as a man. We have not seen a sovereign to enquire into the circumstances, what they are, and act accordingly. Thus we live on in poverty, Sir, continually praying to God, and looking for the time when such a sovereign shall arise.

G. You pay a large sum. Yet it seems right enough for Tippu Saib to fix a suitable quit rent for a brahmans' *agrahāra;* because he was not a brahman. But why did Dewan Pūrniah, who was

3. Past and present.

ರ್ಣೈಯ್ಯ ಬ್ರಾಂಹ್ಮಣನಾಗಿ, ಬ್ರಾಂಹ್ಮರ ಅಗ್ರಹಾರಕ್ಕೆ ಹಣ ಹೆಚ್ಚು ಮಾಡುವದಕ್ಕೇನು ಕಾರಣ?

ಬ್ರಾ. ಪೂರ್ವೀಕರಾದ ಧೊರೆಗಳು ಮಾಡಿದ ಅಗ್ರಹಾರವೇ ಹೊರ್ತು, ಹೆಚ್ಚಾಗಿ ಅಗ್ರಹಾರಗಳು ತಾನು ಮಾಡುವದಕ್ಕೆ ಸ್ವಾತಂತ್ರ್ಯವಿಲ್ಲದ್ದರಿಂದ, ತನಗೆ ಘನ ಬರುವದಿಲ್ಲವೆಂದು ತಿಳಿದು, ಹೊಸದಾಗಿ ಅಗ್ರಹಾರಗಳೂ, ಕೆಲವು ಜೋಡೀ ಸರ್ವಮಾನ್ಯಗಳೆಂದು, ತನ್ನ ಸ್ವಂತ ಜನಗಳಿಗೆ ಮಾಡಿ ಕೊಟ್ಟನು. ಆ ಗ್ರಾಮಗಳ ಹಣಾ ಸರಕಾರಕ್ಕೆ ಕಂಮೀ ಮಾಡ ಕೂಡದ್ದರಿಂದ, ಆ ಗ್ರಾಮಗಳ ಹಣವೆಲ್ಲಾ ಪೂರ್ವೀಕರು ಮಾಡಿದ್ದ ನಮ್ಮಂಥಾ ಬಡವರ ಅಗ್ರಹಾರಗಳ ಮೇಲೆ ಹೆಚ್ಚು ಮಾಡಿ, ಲೆಖ್ಖಾ ಒಪ್ಪಿಸಿದನು. ಕುಂಫಿಣೀ ಧೊರೆಗಳಿಗೆ ಈ ವಿವರ ಚ

a brahman, increase the rent of a brahmans' *agrahāra ?*

B. Not having the power to make more *agrahāras* than had been made by former sovereigns, he thought he should not acquire renown ; so he gave some new *agrahāras,* and some quitrent and free villages to his own people. And as he could not lessen the amount of those villages to the Government, he increased all the amount of those villages upon the *agrahāras* of such poor people as we, that were established by former rulers, and delivered in his accounts. The Company's rulers not being well acquainted with this circumstance,

ನ್ನಾಗಿ ತಿಳಿಯದೆ, ಒಟ್ಟಿಗೆ ಹಣಾ ಸರಿಯಾಗಿ ಇಧೆ ಎಂಬ ಲೆಖ್ಖವೇ ಒಪ್ಪಿ ಕೊಂಡರು. ಈಚೆಗೆ ನಾವೆಲ್ಲರು ಹೋಗಿ, ತಿಳಿಸಿದಾಗ್ಯೂ, ದಿವಾನರ ದಿವಸದಲ್ಲಿ ಆದದ್ದೇ ಕಾಯಂ ಎಂಬದಾಗಿ, ಹೇಳಿ ಬಿಟ್ಟರು. ಈ ಮೇರಿಗೆ ತನಗೆ ಘನ ಸಂಪಾದಿಸಿ ಕೊಳ್ಳ ಬೇಕೆಂಬದಾಗಿ, ಒಬ್ಬರ ಅನ್ನ ಸ್ಥಿತಿಯನ್ನು ಮತ್ತೊಬ್ಬನಿಗೆ ಮಾಡಿದನು. ಈ ವಿಚಾರಣೆ ಇಲ್ಲಿ ಬೇರೆ ಆಗಲಿಲ್ಲ.[4] ಇನ್ನೆಲ್ಲಿ ಆಗುತ್ತೆಯೋ, ತಿಳಿಯಲಿಲ್ಲ.

ಧೊ. ಹೀಗಾಯಿತೇ? ಆದರೆ ಮೋಸವಾಯಿತು. ಆ ಹಣವ್ನೂ ತೆತ್ತು ಕೊಂಡು, ನೀವು ಕಾಲಕ್ಷೇಪಾ ಮಾಡುವದು ಕಷ್ಟವೇ ಸರಿ. ನಿಮ್ಮ ಜನಗಳಲ್ಲಿ ಪಂಡಿತರೂ ವಿದ್ವಾಂಸರುಂಟೋ? ಬ್ರಾಂಹ್ಮಣರು ವಿದ್ವಾಂಸರೇ ಸರಿ.

passed the accounts, which shewed that the total was correct. Since that time, though we all went and informed them, they told us that what was in the Dewan's time is fixed. Thus, in order to get credit to himself, he gave one man's livelihood to another. This matter has not been investigated here; where else it will be, we don't know.

G. Was it so? Then you've been cheated. It must indeed be very hard for you to pay the money and make a living. Are there any scholars or learned men amongst your people? Brahmans are learned, I know. But if there be any of

4. *i. e.* he has not been punished for it in this world.

ಆದರೆ ಯಾರಾದರೂ ಶಾಸ್ತ್ರ ರೀತಿಯಿಂದ ಮಾತನಾಡ ತಕ್ಕವರುಂಟಾದರೆ, ಸ್ವಲ್ಪ ಮಾತನಾಡ ಬಹುದು.

ಬ್ರಾ. ಆಗಲ್ಯೈಯ್ಯಾ; ನಮಗೆ ತಿಳಿದ ಮಟ್ಟಿಗೂ ನಾವೇ ಮಾತನಾಡುತ್ತೇವೆ.

ಧೊ. ಈ ಜಗತ್ತಿನಲ್ಲಿ ಎಲ್ಲಾ ಮನುಷ್ಯರನ್ನು ದೇವರು ಸೃಷ್ಟಿಸಿದನು. ಇದರಲ್ಲಿ ಹೆಚ್ಚು ಕಡಿಮೆ ಎಂದು, ಜನರು ನಡಿಯುವದು ಯುಕ್ತವಲ್ಲಾ. ಎಲ್ಲರೂ ಒಂದೇ ಮಾರ್ಗದಲ್ಲಿ ನಡಿಯ ಬೇಕು.

ಬ್ರಾ. ಹೌದು, ಸಹಜವೇ ಸರಿ. ಜಗತ್ತು ಎಂಬ ಒಂದಾನೊಂದು ಸಮುದ್ರದಲ್ಲಿ ದೇಶಗಳೆಂಬ ಅನೇಕ ದ್ವೀಪಾಂತರಗಳಿವೆ. ಆ ದ್ವೀಪಾಂತರಗಳಲ್ಲಿ ಒಬ್ಬ ಮನುಷ್ಯರ ಹಾಗೆ ಒಬ್ಬರೂ ಇಲ್ಲ. ಒಬ್ಬರ ಬುದ್ಧಿಯ ಹಾಗೆ ಮತ್ತೊಬ್ಬರ ಬುದ್ಧಿ ಇಲ್ಲ. ಒಬ್ಬರ ಆಯುಷ್ಯದ

you who can converse scientifically, we may have a little conversation.

B. Very well, Sir. We will converse as well as we can.

G. God created all the men in this universe. It is not right that they should pursue different paths. All ought to walk in the same way.

B. Yes, that is true. In a certain sea, the world, there are many islands or countries. In those islands, no one people is like another. The ideas of one are not like the ideas of another. The

ಮೇರಿಗೆ ಒಬ್ಬರ ಆಯುಷ್ಯವಿಲ್ಲ. ಇದೆಲ್ಲಾ ಬೇರೆ ಬೇರೆಯಾಗಿ ತೋರುತ್ತೆ; ಆದರೆ ಬುದ್ಧಿಯಿಂದಲಾದರೂ, ಒಬ್ಬರು ನಡದ ಮಾರ್ಗದಲ್ಲಿ ಒಬ್ಬರು ನಡಿಯ ಬೇಕೆಂದರೆ, ಸ್ವಾಧೀನಕ್ಕೆ ಬರುವದಿಲ್ಲ. ಆ ಬುದ್ಧಿಯನ್ನು ಸ್ವಾಧೀನಕ್ಕೆ ತಂದು ಕೊಂಬುವದಕ್ಕೆ ಮನುಷ್ಯನಿಗೆ ಸಾಮರ್ಥ್ಯವಿದ್ದಾಗ್ಯೂನ್ನೂ, ಇಲ್ಲದ ಹಾಗೆ ಒಂದೊಂದು ವೇಳೆ ಬೇರೆ ಬೇರೆ ಪರಾಧೀನವಾಗುತ್ತೆ. ಈ ಮೇರಿಗೆ ಇರುವಲ್ಲಿ, ಯಾವ ಯಾವ ದೇಶಾಂತರಿಗಳು ಯಾವ ಯಾವ ಬುದ್ಧಿಮಂತರ ಮಾರ್ಗದಲ್ಲಿ ಪೂರ್ವದಿಂದ ನಡದು ಬಂದರೋ, ಅದೇ ಮಾರ್ಗಗಳು ಅವರಿಗೆ ರುಚಿಯಾಗಿ ತೋರಿ ಇಧೆಯೋ ಹೊರ್ತು, ಮತ್ತೊಬ್ಬರು ನಡಿಯುವ ಮಾರ್ಗಕ್ಕೆ ಬುದ್ಧಿ ಪ್ರವೇಶಿಸುವದಿಲ್ಲವು.

ಧೊ. ಬುದ್ಧಿವಂತರಾದ ಪೂರ್ವೀಕರು ನಡದ ಮಾ

life of one is not (of the same length) as the life of another. All these are manifestly diverse. But if one has even the will to walk in the same way as another, he cannot govern the will. Though a man have power to subject the will, it will sometimes be influenced by other things, as though he had no power over it at all. In these circumstances, what nation soever has long adhered to the practice of any philosopher, will delight in such practices only, and not be disposed to adopt the ways of o hers.

G. If the way of the ancient philosophers be

ರ್ಗ ಒಳ್ಳೇದಾಗಿ ಇದ್ದರೆ, ಸಹಜವಾಗಿ ನಡಿಯ ಬಹುದು; ಸುಮಾರ್ಗವೆಂದೆಣಿಸಲೂ ಬಹುದು. ಆ ಮಾರ್ಗದಲ್ಲಿ ಕಲ್ಲುಗಳು, ಮುಳ್ಳುಗಳು, ಹಳ್ಳ ಕೊಳ್ಳಗಳು, ಇದಲ್ಲದೆ ಮತ್ತು ಕಳ್ಳರ ಉಪದ್ರವಗಳು, ಹುಲಿ ಕರಡೀ ಬಾಧೆಗಳು, ಹಾವು ಚೇಳುಗಳ ವೇಧೆಗಳು, ಕುಡಿಯುವದಕ್ಕೆ ನೀರೇ ಇಲ್ಲದೆ, ನಿಲ್ಲುವದಕ್ಕೆ ನೆರಳೇ ಇಲ್ಲದೆ, ಎಲ್ಲಿ ಕುಳಿತರಲ್ಲಿ[5] ನೆಗ್ಗಲಿ ಮುಳ್ಳುಗಳು ಕೈಗೂ ಮೈಗೂ ಕಾಲುಗಳಿಗೂ ತುಂಬಿಕೊಂಡರೆ, ಅಂಥಾ ಮಾರ್ಗದಲ್ಲಿ, ಇದು ಪೂರ್ವೀಕರು ನಡದ ಮಾರ್ಗವೆಂದು, ದುರಭಿಮಾನದಿಂದ ಅದನ್ನೇ ಕಟ್ಟಿ ಕೊಂಡು, ನಡದರೆ, ಸೌಖ್ಯವಾಗಲರಿಯದೆಂದು,[6] ತಿಳಿಯ ಬೇಕು.

ಬ್ರಾ. ಹೌದು, ಬಹಳ ದೂರವಾಗಿರುವ ಪಟ್ಣವನ್ನು

good, we may certainly walk in it; and may regard it as a good way. But if in that way, there be stones, thorns, holes, ruts; and besides these, molestation from robbers, danger from tigers and bears, annoyance from snakes and scorpions; no water to drink, no shade to rest under; and wherever you sit down you get your hands, body and feet full of sharp thorns;—we must think that if any one obstinately takes such a road, and walks in it, simply because it is the way our ancestors walked in, he cannot find any comfort in it.

B. Yes; when persons wishing to set out in

5. ಕುಳಿತರೆ ಅಲ್ಲಿ. 6. ಸೌಖ್ಯ ಆಗ (inf.) ಅರಿಯದು ಎಂದು.

ಶೇರುವದಕ್ಕೆ ಬುದ್ಧಿವಂತರಾದ ಪೂರ್ವೀಕರು ಏರ್ಪಡಿಸಿದ ಆ ಮಾರ್ಗದಲ್ಲಿ ಹೊರಟು, ಆ ಪಟ್ಣವನ್ನು ಶೇರಿ, ಅಲ್ಲಿ ಇರುವ ಆಶ್ಚರ್ಯಗಳನ್ನೂ ವಿಶೇಷಗಳನ್ನೂ ತಿಳಿಯಬೇಕೆಂಬ ಇಚ್ಛೆಯುಳ್ಳ ಜನಗಳು ಆ ಮಾರ್ಗದಲ್ಲಿ ಪ್ರವೇಶಿಸಿ, ನಡಿಯುವಲ್ಲಿ, ಕಲ್ಲುಗಳು ಇದ್ದರೆ, ತಪ್ಪಿಸಿ, ಹೆಜ್ಜೆ ಇಟ್ಟು; ಮುಳ್ಳುಗಳು ಇದ್ದರೆ, ತುಳಿಯದೆ; ಗುಣಿಗಳು ಇದ್ದರೆ, ದಾಟ ಕೊಂಡು; ಗುಂಡುಗಳು ಇದ್ದರೆ, ತಾಕಿಸಿ ಕೊಳ್ಳದೆ; ಮಾರ್ಗವನ್ನೇ ನೋಡುತ್ತಾ, ದಿಕ್ಕುಗಳನ್ನೂ ಆಕಾಶವನ್ನೂ ನೋಡದೆ ನಡೆಯುವದಲ್ಲದೆ, ಕಳ್ಳರ ಉಪದ್ರವಗಳ ತಿಳಿದು, ಒಳ್ಳೆ ಸಹಾಯ ಗೂಡಿ, ಹುಲಿ ಕರಡಿಗಳ ಬಾಧೆಗಳಿದ್ದರೆ, ಹೊತ್ತರಿತು,[7] ನಡೆದು,

the road made by our wise ancestors in order to go to a very distant city, to reach the city, and acquaint themselves with the wonders and curiosities there,—enter upon and walk in that road,—if there be stones, they must step aside; if there be thorns, they must avoid treading upon them; if there be holes, they must pass by them; if there be large stones, they must not knock against them; but walk on keeping their eye fixed upon the road, and not looking about them or up at the clouds. In addition to this, being aware of the molestation of robbers, they must take good help; if there be any danger from tigers and bears, they must travel at a proper time; if there be any an-

7. ಹೊತ್ತು ಅರಿತು.

ಹಾವು ಚೇಳುಗಳ ವೇಧೆಗಳಿದ್ದರೆ, ಅದಕ್ಕೆ ತಕ್ಕ ಮಂತ್ರೌಷಧಗಳ[8] ಸಂಪಾದಿಸಿ ಕೊಂಡು, ಕುಡಿಯುವದಕ್ಕೆ ನೀರಿಗೆ ಕಷ್ಟವಾಗಿದ್ದರೆ, ಹೂಜೆಗಳಲ್ಲಿಯೂ, ಗಿಂಡಿಗಳಲ್ಲಿಯೂ ತಂಣಾನ ನೀರುಗಳು ತುಂಬಿ, ಕೈಲಿ ಹಿಡಿ ಕೊಂಡು, ನೆರಳು ಇಲ್ಲದೆ ಇದ್ದರೆ, ಕೊಡೆಗಳು ಸಂಪಾದಿಸಿ ಕೊಂಡು, ನೆಗ್ಗಲಿ ಮುಳ್ಳುಗಳು ಬಹಳವಾದರೆ, ಪಾದರಕ್ಷೆಗಳ ಹಾಕಿ ಕೊಂಡು, ಮಾರ್ಗಸ್ಥರು ಜಾಗರೂಕರಾಗಿಯೇ ನಡೆಯ ಬೇಕು. ಯಾವ ಪ್ರಯಾಸವೂ ನನಗೆ ಬೇಡ; ನಾನು ಮನೆಯೊಳಗೆ ಇರುತ್ತೇನೆ, ಎಂಬುವವನಿಗೆ ದೇಶದ ಲಕ್ಷಣವೂ, ಮಾರ್ಗದ ಲಕ್ಷಣವೂ, ಮಾರ್ಗದಲ್ಲಿ ಹೊರಟು ಶೇರುವ ಪಟ್ಣದ ಲಕ್ಷಣವೂ, ಏನೂ ತಿಳಿಯದೆ, ಮೂಢನಾಗಿ ಇರುವನು. ತಿರುಗುವವನೇ ಕ

noyance from snakes and scorpions, they must provide themselves with suitable charms and remedies; if there be any difficulty in procuring water to drink, they must take in their hands goglets and vessels filled with cool water; if there be no shade, they must provide themselves with umbrellas; if prickly thorns abound, they must put on sandals; and the travellers must walk carefully. He who says, "I don't want any trouble, I'll stay at home," will be a booby, knowing nothing whatever of the nature of the country, the nature of the road, or the nature of the city to which the road leads. The traveller undergoes trouble,

8. ಮಂತ್ರ ಔಷಧ.

ಷ್ಟವೂ ಪಟ್ಟು, ಸಂತೋಷವನ್ನೂ ಸೌಖ್ಯವನ್ನೂ ಅನುಭವಿಸ್ಯಾನು. ಆದದರಿಂದ ಪೂರ್ವೀಕರ ಮಾರ್ಗವೇ ಬಹು ಜನಗಳು ಸಂಚಾರಾ ಮಾಡಿ,[9] ಸುಪಥವಾಗಿ ಇಧೆಯೋ ಹೊರ್ತು, ಅನ್ಯ ಮಾರ್ಗವೂ ಎಷ್ಟು ಮಾತ್ರವೂ ಸನ್ಮಾರ್ಗವಲ್ಲವು ಎಂಬುವ ಹಾಗೆ ತೋರುತ್ತದೆ. ಆದ್ದರಿಂದ ಇದೇ ಸಿದ್ಧಾಂತವು.

ಧೊ. ಆದರೆ ಪೂರ್ವೀಕರು ನಡದ ಮಾರ್ಗ ಕೆಟ್ಟದ್ದಾದಾಗ್ಯೂನ್ನೂ, ಅದೇ ಮಾರ್ಗದಲ್ಲೇ ನಡೆಯ ಬೇಕೆಂಬ ಪಕ್ಷವಾಯಿತಲ್ಲಾ?

ಬ್ರಾ. ಪೂರ್ವೀಕರ ಮಾರ್ಗ ಕೆಟ್ಟದ್ದಲ್ಲ; ನಡೆಯಲಾರದವನಿಗೆ ಕಷ್ಟವಾಗಿರುವದು. ಮಾರ್ಗದಲ್ಲಿ ನಡೆಯಬೇಕೆಂಬ ಉದ್ಯೋಗಶಾಲಿಗೆ ಕಷ್ಟ ತೋರಿ, ಮಹಾ ಸೌಖ್ಯ ತೋರುವದು. ಬಾಲಕರಿಗ ವಿದ್ಯಾಭ್ಯಾಸ ಮ

and reaps pleasure and happiness. So it is evident that, many people having walked in the way of the forefathers, that alone is the good way, and no other way can be good at all. This is certain.

G. Then, we are bound to walk in the way of the forefathers, though that way be a bad one, eh?

B. The way of the forefathers is not a bad one; it is difficult only to one who cannot walk in it. One who sets out resolved to walk in the way, meets with difficulties, and then meets with great happiness. Study appears very difficult to child-

9. For ಮಾಡಿದ್ದರಿಂದ.

ಹಾ ಪ್ರಯಾಸವಾಗಿ ತೋರಿ, ವಿದ್ಯಾಭಿರುಚಿ[1] ತಿಳಿಯುತ್ತಾ, ತಿಳಿಯುತ್ತಾ, ದಿನ ದಿನಕ್ಕೂ ವಿವೇಕ ಉಂಟಾಗುವ ರೀತಿಯಾಗಿ ಇರುವದು. ಅಭ್ಯಾಸ ಮಾಡದವನಿಗೆ ಶಾಸ್ತ್ರಾರ್ಥಗಳು ವಿಷದ ಹಾಗೆ ತೋರುವದು; ಅಭ್ಯಾಸಿಸಿದವನಿಗೆ ಹಾಲಿನ ಹಾಗೂ, ಜೇನಿನ ಹಾಗೂ, ಸಕ್ಕರೆಯ ಹಾಗೂ, ಇಷ್ಟು ಸ್ವರಸಗಳು ಕೂಡಿದ ಅಮೃತದ ಹಾಗೂ ರುಚಿಕರವಾಗಿ ಸೌಖ್ಯ ದಾಯಕವಾಗಿ ಇರುವದು.

ಧೊ. ಪೂರ್ವಿಕರು ಬುದ್ಧಿವಂತರಾಗುವದಕ್ಕಿಂತ ಮುಂಚಿತವಾಗಿ ಬುದ್ಧಿಹೀನ ಕೆಲಸವನ್ನು ಮಾಡಿ ಇದ್ದರೆ, ಅದೇ ನಿಮಗೆ ಪ್ರಮಾಣವಾಗಿ ಹಾಗೆ ನಡಿಯ ಬೇಕೋ?

ಬ್ರಾ. ಬೆಳೆಯುವ ಪೈರು ಮೊಳೆಯಲ್ಲೇ ಕಾಣುತ್ತೆ, ಎಂಬುವ ಹಾಗೆ, ಇನ್ನು ಮೇಲೆ ಬುದ್ಧಿವಂತನಾಗ ತಕ್ಕ

ren; but as they gradually taste (the sweets of) knowledge, it daily brings wisdom. Science appears like poison to one who has never studied; but to a student, it is delicious and pleasant as milk, as honey, as sugar; yea, as nectar that combines all these sweets.

G. If your forefathers did foolish things before they became wise, are you bound to do the same?

B. The growing crop appears in the shoot, they say. So one who is destined to become wise

1. ವಿದ್ಯ ಅಭಿರುಚಿ.

ವನು ಬಾಲ್ಯಾರಭ್ಯ ಬುದ್ಧಿವಂತನ ಹಾಗೆ ತೋರಿ, ತೋ
ರಿದಷ್ಟು ಒಳ್ಳೇ ಕೆಲಸಗಳೇ ಮಾಡುವನೇ ಹೊರ್ತು,
ಬುದ್ಧಿಹೀನ ಕೆಲಸವನ್ನು ಯಾಕೆ ಮಾಡ್ಯಾನು? ಮಾಡಿ
ದನೆಂದು, ಎರಡನೇ ಜನಗಳಿಗೆ ತೋರುವದೇ ಹೊರ್ತು,
ಅವನು ಮಾಡುವದು ಇಲ್ಲ. ಅಥವಾ ಮಾಡಿದನೆಂದರೆ,
ಆ ಹೀನತನವೂ ಅವನಿಗೆ ಹೊಂದುವದು ಇಲ್ಲ. ಭಂಗಾ
ರದ ಗಟ್ಟಿ ತಾನಾಗಿ ಇದ್ದ ಕಡೆಯಿಂದ ಕೆಸರಿನಲ್ಲಿ ಬಿ
ದ್ದಾಗ್ಯೂ, ಒಬ್ಬರು ಹಾಕಿದಾಗ್ಯೂ, ಆ ಕೆಸರಿನ ಮಾ
ಲಿನ್ಯ ಲೇಶವೂ ಭಂಗಾರಕ್ಕೆ ಹೊಂದದ ಹಾಗೆ ತಿಳಿಯ
ಬೇಕು.

ಧೊ. ಭಂಗಾರಕ್ಕೂ ಮನುಷ್ಯನಿಗೂ ಸಾಮ್ಯ ಹೇ
ಳುವ ನಿಮಿತ್ತವಿಲ್ಲ. ಭಂಗಾರವು ಅಚೇತನ ವಸ್ತುವು,
ಮನುಷ್ಯನು ಚೈತನ್ಯವುಳ್ಳವನು; ಭಂಗಾರ ಮೊದಲಿನಿಂ
ದ ಹ್ಯಾಗೆ ಇರುತ್ತೋ, ಎಲ್ಲಿ ಇದ್ದಾಗ್ಯೂ, ಅದೇ ಮೋ

hereafter, will display wisdom from childhood, and to the extent of his knowledge, will do virtuous deeds only. Why should he act foolishly? He may appear to others to do so, but he will not do it. Or if one say he has done it, the disgrace will not cleave to him. Though an ingot of gold fall from its place, or some one cast it, into the dirt, we know that the gold is not polluted by the dirt.

G. There is no ground for comparing gold to man. Gold is an inanimate thing; man is animate. What gold is from the first, it will be the

ರೀಗೆ ಇರುತ್ತೆ. ಮನುಷ್ಯನು ಬಾಲ್ಯ, ಯೌವ್ವನ, ಕೌಮಾರ, ವಾರ್ಧಿಕ್ಯಗಳೆಂಬ ದೆಶೆಗಳುಳ್ಳವನು. ಇವನು ಬುದ್ಧಿಹೀನನಾಗಿಯೂ ಇರ ಬಹುದು; ಬುದ್ಧಿಯುಳ್ಳವನಾಗಿಯೂ ಇರ ಬಹುದು. ಅಂಥಾ ಬುದ್ಧಿಹೀನರಾದ ಪೂರ್ವೀಕರು ನಡದ ಕೆಲಸಗಳನ್ನು ಬುದ್ಧಿವಂತರ ಕೆಲಸವೆಂದು ಅಭಿಮಾನಿಸಿ, ನಡೆಯುವದು ನೆಟ್ಟಗೆ ತೋರಲಿಲ್ಲ.

ಬ್ರಾ. ಸ್ವಲ್ಪ ಕ್ರಯವುಳ್ಳ ಭಂಗಾರವು ಪುಟಗಳು ಹಾಕುವದರಿಂದಲೂ, ಒಳ್ಳೇ ಭಂಗಾರ ಬೆರೆಯುವದರಿಂದಲೂ ಕುಂದಣವೆಂಬ ಹೆಚ್ಚು ಕ್ರಯವುಳ್ಳದ್ದಾಗುತ್ತೆ. ಅಂಥಾ ಕುಂದಣವೂ ತಾಂಬ್ರಾದಿಗಳಲ್ಲಿ ಬೆರದರೆ, ತನ್ನ ಸ್ವರೂಪ ಕಡಿಮೆಯಾಗಿ ತೋರುತ್ತೆ. ಅದೇ ಮೋರಿಗೆ ಮನುಷ್ಯನು ಒಳ್ಳೇ ಸಹವಾಸದಿಂದ ಘನವೂ, ನೀಚರಿಂದ ಅಲ್ಪ ಬುದ್ಧಿಯೂ ಹೊಂದುತ್ತಾನೆ. ಅದರಿಂದ ಅ

same wherever it be Man is subject to the states of childhood, boyhood, youth and old age. He may be foolish, or he may be wise. And to esteem the actions of such foolish ancestors as actions of the wise, and do them, does not seem reasonable.

B. Gold of inferior value, by successive refinings and mixing with good gold, becomes pure gold of great value. If such pure gold be mixed with copper, &c., its quality is lowered. In like manner, a man by virtuous associations obtains honor; from the worthless, folly. Therefore I do

ಚೇತನವಾದ ಭಂಗಾರಕ್ಕೂ ಚೈತನ್ಯವುಳ್ಳ ಮನುಷ್ಯನಿಗೂ ಸಾಮ್ಯ ಹೇಳುವದಕ್ಕೇನೂ ಅಭ್ಯಂತರ ಕಾಣಿಸಲಿಲ್ಲ.

ಧೊ. ಭಂಗಾರ ಕೆಸರಿನಲ್ಲಿದ್ದರೆ, ಕೆಸರಿನ ಮಾಲಿನ್ಯ ಭಂಗಾರಕ್ಕೆ ಬಾರದೆನ್ನುವದಕ್ಕಾಗಿ, ಪೂರ್ವದ ಬುದ್ಧಿಮಂತರ ಮಾತುಗಳು ಅವಿವೇಕರ ಬಾಯಿಗೆ ಬಿದ್ದರೆ, ಅವಿವೇಕತೆಗಳನ್ನು ಹೊಂದಲಾರದೆಂದು ಹೇಳಲ್ಪಟ್ಟಿತು.[2] ಒಳ್ಳೇ ಕೆಲಸಗಳಾಗಲಿ, ಅಲ್ಲದ ಕೆಲಸಗಳಾಗಲಿ ನೇಮಿಸಿ ಹೇಳುವಲ್ಲಿ, ಅದಕ್ಕೆ ತಕ್ಕ ಬುದ್ಧಿಯೂ, ಅದಕ್ಕೆ ತಕ್ಕ ವಿವೇಕವೂ ಆವಾಗ್ಯೆ ಸರಿಯಾಗಿಯೇ ಉಂಟಾಗಿರುತ್ತೆ. ಆದಾಗ್ಯೂ ಕಾಲಾಂತರಗಳಲ್ಲಿ ಕಾರ್ಯಕಾರಿಯಾಗದೆ ಕೆಟ್ಟು ಹೋಗುತ್ತೆ. ಆ ಮೇರಿಗೆ ನಿಮ್ಮಲ್ಲಿ ನೇಮಿಸಿ ಇರುವ ಪೂರ್ವೀಕರ ಪದ್ಧತಿಗಳು ವಿಚಾರಿಸ ಬೇ

not see any thing to hinder our comparing animate man to inanimate gold.

G. You have said that as gold, though in dirt, is not polluted by the dirt, so the sayings of the wise of ancient times are not affected by folly, though they fall into the mouth of fools. When any one commands works to be done, whether good or bad, the mind and judgment assent at the time. But afterwards they refuse, and the command is useless. Just so, when the time comes to enquire into the customs of your ances-

2. *i. e.* said by you.

ಕೆಂಬ ಕಾಲಾಂತರಗಳು ಬಂದಾಗ್ಯೆ, ನೆಟ್ಟಗೆ ತೋರುವದಿಲ್ಲ.

ಬ್ರಾ. ಹಾಗೆಯೇ ಸರಿ. ಯಾವ ಕಾಲಕ್ಕೆ ಯಾವ ಮಾರ್ಗ ನೆಟ್ಟಗೆ ಇಥೆ ಎಂದು, ಜನ ಬಾಹುಳ್ಯದಿಂದಲೂ, ಪ್ರಬಲತನದಿಂದಲೂ ತಿಳಿಸಲ್ಪಡುತ್ತದೆಯೋ, ಅದೇ ಮಾರ್ಗಗಳು ಆ ಯಾ ಕಾಲಕ್ಕೆ ಸರಿ ಎಂದು ಹೇಳುತ್ತಾರೆ. ಹೇಳಿದಾಗ್ಯೂ, ಪೂರ್ವ ಪದ್ಧತಿಗಳು ಮರೆತು ಹೋಗುವದಿಲ್ಲ. ಈ ಭೂಮಿಯನ್ನು ಬಹು ಜನಗಳು, ನನ್ನದು, ತನ್ನದು, ಎಂಬದಾಗಿ ಆಳಿಕೇ ಬಲದಿಂದ ಶಾಸನಗಳು ಬರೆಸಿ, ಇಡುತ್ತಾರೆ. ಆವಾಗ್ಯೆ ಆ ಶಾಸನ ಪ್ರಕಾರ ಅವರದೇ ಸರಿ ಅನ್ನುವ ಹಾಗೆ ತೋರುತ್ತೆ. ಮತ್ತೊಬ್ಬರಿಗೂ ಆ ಮೇರಿಗೆ ಆಗುತ್ತೆ. ಎಷ್ಟಾದಾಗ್ಯೂ, ಪೂರ್ವದ ಮೇರಿಗೆ ಸ್ಥಿರವಾಗಿಯೇ ಇಥೆಯೇ ಹೊರ್ತು,

tors, established among you, they will not appear to be right.

B. True ; so it is. Whatsoever way is at any time, by the adoption of the majority, and by its celebrity, acknowledged to be right, such ways are said to be suitable for those times. Yet though said to be so, the ancient customs are not forgotten. Many persons, by their right of possession, have charters inscribed to the effect that such and such land is theirs. And at the time it is acknowledged to be theirs according to the charter. In like manner it comes to others. No matter how many

ಒಬ್ಬರಾದರೂ ತಕ್ಕೊಂಡು ಹೋಗಲಾರರು. ಹಾಗೆಯೇ ಪೂರ್ವ ಪದ್ಧತಿಗಳು ಹೋಗಲಾರವು.

ಧೊ. ಆದರೆ ನಿಮ್ಮ ಮಾರ್ಗವೇ ನೀವು ಸರಿ ಎಂದು ಎಣಿಸುತ್ತೀರಲ್ಲದೆ, ನಾವು ಹೇಳುವ ಮಾರ್ಗದಲ್ಲಿ ನಡೆಯುವದಕ್ಕೆ ನಿಮಗೆ ಮನಸ್ಸು ಇಲ್ಲ.

ಬ್ರಾ. ನಮ್ಮ ಮಾರ್ಗದಲ್ಲಿ ನಡೆಯ ಬಾರದ ಕೆಲಸಗಳು ಬಹಳವಾಗಿದ್ದು, ನೀವು ಹೇಳುವ ಮಾರ್ಗದಲ್ಲಿ ಬಹಳವಾಗಿ ನಡಿಯ ತಕ್ಕ ಕೆಲಸಗಳೇ ಇದ್ದಲ್ಲಿ, ಈ ಮಾರ್ಗ ಬಿಟ್ಟು, ಆ ಮಾರ್ಗದಲ್ಲಿ ನಡಿಯ ಬಹುದು. ಏನೂ ಪ್ರಯೋಜನವಿಲ್ಲದೆ, ಇದ್ದ ಊರು ಬಿಟ್ಟು, ಊರೂರು[3] ತಿರುಗುತ್ತಾ ಇದ್ದರೆ, ಇದ್ದ ಸ್ಥಳವೂ ತಪ್ಪಿ ಹೋಗುತ್ತೆ; ತಿರುಗುವ ಸ್ಥಳಗಳಲ್ಲಿಯೂ ನೆಲೆಗಾಣುವದಿಲ್ಲ.[4] ಹೀಗೂ

(own it,) not one of them can take it away, but it remains fixed as it ever did. So old customs cannot pass away.

G. Then you think your way alone to be right, and have no wish to walk in the way that I advise.

B. If in our way there were many things that ought not to be done, and in the way you mention many things that ought to be done, one might leave this way, and follow that. But if for no profit one forsake his native town and wander from town to town, he loses his home, and finds no abode in the places where he wanders. In

3. ಊರು ಊರು. 4. ನೆಲೆ ಕಾಣುವದಿಲ್ಲ.

ಹಾಗೂ ಉಭಯು ಭ್ರಷ್ಟತ್ವ ಪ್ರಾಪ್ತವಾಗುತ್ತೆ. ಆದದ ರಿಂದ, ಬಿಡುವದಕ್ಕೆ ಆಗಲೇ ಆಗದು.

ಧೊ. ಆದರೆ ಏನೂ ಪ್ರಯೋಜನವಿಲ್ಲದೆ, ಯಾವ ಕೆಲಸವೂ ಮಾಡುವದಿಲ್ಲವೋ?

ಬ್ರಾ. ತನಗೆ ಪ್ರಯೋಜನವಿಲ್ಲದ್ದಾದಾಗ್ಯೂ, ಲೋಕೋಪಕಾರವಾದರೂ[5] ಆದರೆ, ಅಂಥಾ ಕೆಲಸವನ್ನು ಮಾಡ ತಕ್ಕವನು ಒಳ್ಳೇ ಮನುಷ್ಯನೆಂದು ಹೇಳ ಬಹುದು. ಈ ಮರವು ತಾನು ಬಿಸಿಲಿನಲ್ಲಿದ್ದು ಕೊಂಡು, ಬಂದ ಮಾರ್ಗಸ್ಥರಿಗೆ ನೆರಳು ಕೊಡುತ್ತೆ. ಆ ಮಟ್ಟಿಗಾದರೂ ಲೋಕೋಪಕಾರ ಮಾಡುವದೆಂದು, ಹೇಳುವರು.

ಧೊ. ಆ ಮರವೆಲ್ಲಿಂದ ಹುಟ್ಟಿತು?

ಬ್ರಾ. ಆ ಮರವು ಬೀಜದಿಂದ ಹುಟ್ಟಿತು.

one way and another he misses both. Therefore one must not forsake it on any account.

G. Then do you do nothing profitless?

B. Though a thing be profitless to one's self, yet if it be at all beneficial to the public, a man who does such a deed, may be called a good man. This tree, itself standing in the sun, affords shade to travellers. To that extent at least, one must benefit the public, they say.

G. Where did that tree spring from?

B. That tree sprung from a seed.

5. ಲೋಕ ಉಪಕಾರ.

ಧೊ. ಬೀಜವೆಲ್ಲಿಂದ ಹುಟ್ಟಿತು?

ಬ್ರಾ. ಮರದಲ್ಲಿಯೇ ಹುಟ್ಟಿತು. ಇವುಗಳೆರಡನ್ನು ನಿರ್ಮಿಸುವವನು ದೇವರು.

ಧೊ. ದೇವರ ಗುಣಗಳೆಂಥಾವೆಂದು, ನಿಮ್ಮ ಶಾಸ್ತ್ರಗಳಲ್ಲಿ ಹೇಳುತ್ತೆ?

ಬ್ರಾ. ಮನಸ್ಸಿನಿಂದ ಎಣಿಸುವದಕ್ಕೂ, ಬಾಯಿಯಿಂದ ಹೇಳುವದಕ್ಕೂ ಕೂಡದ್ದಾದ ಮಹಾ ಗುಣಗಳೆಂದು ಹೇಳುತ್ತೇವೆ.

ಧೊ. ಮಹಾ ಗುಣಗಳಂದರೆ, ಅದರ ಅರ್ಥವೇನು?

ಬ್ರಾ. ಮಹತ್ತು ಉಳ್ಳ ಗುಣಗಳೇ ಮಹಾ ಗುಣಗಳು.

ಧೊ. ಯಾವ ವಿಷಯವಾದ ಮಹತ್ತು ಉಳ್ಳದ್ದು?

ಬ್ರಾ. ಸಕಲ ವಿಷಯದ ಮಹತ್ತು ಉಳ್ಳದ್ದು.

ಧೊ. ಸಕಲ ವಿಷಯವಂದರೇನು?

G. Where did the seed spring from?

B. It sprung from a tree. He who creates both these, is God.

G. What are the attributes of God according to your shastras?

B. We say that they are attributes too great for the mind to conceive, or the mouth to utter.

G. What do you mean by great attributes?

B. Glorious attributes are great attributes.

G. Glorious in what respect?

B. Glorious in every respect.

G. What do you mean by every respect?

ಬ್ರಾ. ಲೋಕದ ವ್ಯಾಪಾರಂಗಳೆಲ್ಲಾ.

ಧೊ. ಲೋಕದಲ್ಲಿ ಕೆಟ್ಟ ವ್ಯಾಪಾರಂಗಳಿಲ್ಲವೋ?

ಬ್ರಾ. ಕೆಟ್ಟ ವ್ಯಾಪಾರಂಗಳು ಮಾಡಿದ ಮನುಷ್ಯರ ದೇ; ಒಳ್ಳೆ ವ್ಯಾಪಾರಂಗಳೆಲ್ಲಾ ದೇವರದಾಗಿ ಇಧೆ.

ಧೊ. ಒಳ್ಳೇ ವ್ಯಾಪಾರವ್ಯಾವದು?[6] ಕೆಟ್ಟ ವ್ಯಾಪಾರ ವ್ಯಾವದು?

ಬ್ರಾ. ಪರೋಪಕಾರವೇ ಒಳ್ಳೇ ವ್ಯಾಪಾರ; ತನ್ನ ಸಾಖ್ಯಕ್ಕಾಗಿ ಪರಪೀಡೆ ಮಾಡುವದೇ ದುರ್ವ್ಯಾಪಾರವು.

ಧೊ. ಪರರಿಗೆ ಪೀಡೆಯನ್ನು ಮಾಡಿದರೆ, ಮಾಡಿದವನು ಸಾಖ್ಯವನ್ನು ಹೊಂದುವನೋ?

B. All the transactions of the world.

G. Are there no bad transactions in the world?

B. The bad transactions are the men's who have committed them; all the good transactions are God's.

G. What is a good transaction? and what is a bad transaction?

B. Kindness to others is a good transaction; affliction of others for one's own pleasure is a bad transaction.

G. If one afflict others, will the afflicter obtain happiness?

6. ವ್ಯಾಪಾರವು ಯಾವದು.

ಬ್ರಾ. ಪ್ರಕೃತಕ್ಕೆ ಸೌಖ್ಯ ಹೊಂದಿದವನ ಹಾಗೆಯೇ ಇರುವನು.

ಗೊ. ಪ್ರಕೃತವಂದರೇನು?

ಬ್ರಾ. ತತ್ಕಾಲವೇ ಪ್ರಕೃತ.

ಗೊ. ಆಚೆ ಏನಾಗುವದು?

ಬ್ರಾ. ಅರಸುಗಳು ಕೇಳಿದರೆ, ಇಹಲೋಕದಲ್ಲಿಯೇ ದಂಡನೆಯು ಹೊಂದುವನು. ಅರಸುಗಳಿಗೆ ತಿಳಿಯದೆ ಪರಹಿಂಸೆ ಮಾಡಿದರೆ, ಪರಲೋಕದಲ್ಲಿ ಯಮ ದಂಡನೆಗೆ ಒಳಗಾಗುವನು.

ಗೊ. ಯಮನೆಂಬುವನ್ಯಾರು?

ಬ್ರಾ. ನರಕ ಲೋಕಕ್ಕೆ ಅಧಿಪತಿಯಾದವನೇ ಯಮನು.

ಗೊ. ನರಕಲೋಕಕ್ಕೆ ಹೋಗ ತಕ್ಕವರೂ, ಹೋಗದವರೂ ಎಂದು, ಮನುಷ್ಯರಲ್ಲಿ ಎರಡು ಬಗೆ ಉಂಟೋ?

B. For the present he will appear to obtain happiness.

G. What do you mean by "the present?"

B. The present is the time (of doing it.)

G. What after that ?

B. If the king hear of it, he will receive punishment in this world. If, unknown to the king, he afflict others, he will be punished by *Yama* in the next world.

G. Who is *Yama ?*

B. The ruler of hell is *Yama.*

G. Are there two kinds of men, those who go to hell, and those who do not go ?

ಬ್ರಾ. ಮನುಷ್ಯರೆಲ್ಲರು ನರಕ ಲೋಕವಾದ ಯಮ ಪಟ್ಟಣವನ್ನು ನೋಡ ತಕ್ಕವರೇ. ಆದರೆ ಒಳ್ಳೇ ಕೆಲಸಗಳಾದ ಪರೋಪಕಾರವನ್ನು ಮಾಡಿದವರಿಗೆ ಆ ಲೋಕವೇ ಸ್ವರ್ಗವು. ಅಲ್ಲದ ಕೆಲಸವಾದ ಪರಹಿಂಸೆಯನ್ನು ಮಾಡಿದವರಿಗೆ ಅಗ್ನಿಯು ಹಾಗೆ ಉರಿಯು ಮಾಡುವ ಲೋಕವು ನರಕ ಲೋಕವು.

ಧೊ. ಪುಣ್ಯವಂತರಿಗೆ[7] ಸವುಖ್ಯ ಕೊಡುವ ಲೋಕ ಬೇರೆ ಯಾಕೆ ಇರ ಬಾರದು?

ಬ್ರಾ. ಒಂದೇ ಪಟ್ಟಣದಲ್ಲಿ ಭಾಗ್ಯವಂತನೂ[8] ನಿರ್ಭಾಗ್ಯನೂ[9] ಯಾಕೆ ಇರ ಬಾರದು?

ಧೊ. ಹಾಗೋ? ಅಹುದು.

ಈ ಮೇರಿಗೆ ಬಹಳ ಮಾತುಗಳಾಡುತ್ತಾ, ಸಾಯಂ

B. All men must see hell, the city of *Yama*. But that world is paradise to those who have done good works, such as kindness to others. To those who have done bad works, such as afflicting others, hell is a world flaming like fire.

G. Why cannot there be a separate place of happiness for the good?

B. Why cannot the good and the bad be in the same city?

G. So? Yes, (indeed.)

As they thus talked on many subjects, evening

7. Those who have gained merit by charitable and other good deeds.

8. The meritorious as above. 9. A sinful man who lacks merit.

ಕಾಲವಾಗುವದುಸ್ನು—ಸಾಯಂಕಾಲವಾಯಿತು; ನಾಳೇ ದಿನವೂ ತಾವು ಇಲ್ಲಿಯೇ ದಯ ಮಾಡಿ ಇರೋಣವಾದರೆ, ಇನ್ನೂ ಸಂಭಾಷಣೆ ಮಾಡ ಬಹುದು. ಈಗ ಮನೆಗೆ ಅಪ್ಪಣೆ[1] ಕೊಡುತ್ತೀರೋ? ಎಂದು ಕೇಳಿದ ಬ್ರಾಂಹ್ಮಣರನ್ನು ನೋಡಿ, ನಿಮ್ಮ ಮಾತುಗಳನ್ನು ಕೇಳಿ, ಸಂತೋಷವಾಯಿತು. ಇನ್ನು ಮಾತನಾಡುವದಕ್ಕೆ ಸಾಯಂಕಾಲವಾಯಿತು. ನಾಳೇ ಉದಯಕ್ಕೆ ನಾವು ಮುಂದಕ್ಕೆ ಹೊರಟು ಬರುತ್ತೇವೆ. ಈಗ ಮನೆಗಳಿಗೆ ನೀವು ಹೋಗಿ ಬರ ಬಹುದೆಂದು, ಅಪ್ಪಣೆ ಕೊಟ್ಟು, ಸಲಾಂ ಮಾಡಿದ ಆ ಧೊರೆಗೆ ಬದುಲಾಗಿ ಸಲಾಂ ಮಾಡಿ, ಬ್ರಾಂಹ್ಮರು ಮನೆಗಳಿಗೆ ಬಂದರು.

drew on, when the brahmans said, "It is now evening; if you will do us the pleasure of staying here to morrow, we may hold further conversation. Do you permit us to go home now?" The gentleman replied, "I have been gratified by your conversation. It is too late to talk more. To morrow morning I proceed on my journey. You can now return home." When he had thus given them leave and made salaam, the brahmans returned the gentleman's salaam, and came home.

1. A command; the visitor being regarded as at the disposal of the person he visits, for the time being.

## ಹತ್ತನೇ ಸಂಭಾಷಣೆ.

### ಮುದುಕನ ಸಂಗಡ.

ಆ ಸರದಾರನು ಮರು ದಿನ ಸೂರ್ಯೋದಯಕ್ಕೆ[2] ಮುಂದಕ್ಕೆ ಹೊರಟನು. ಹೊರಟು, ಆ ಗ್ರಾಮಕ್ಕೆ ಪೂರ್ವ ಭಾಗವಾದ ಮೂಡ್ಲ ಕಡೆಗೆ ಕೆಲಮಂಗಲವೆಂಬ ಒಂದು ಗ್ರಾಮವಿತ್ತು. ಆ ಗ್ರಾಮದ ಸಮೀಪಕ್ಕೆ ಹೋಗುವ ವೇಳೆಗೆ ಒಂಭತ್ತು ಘಂಟೆ ಆಯಿತು. ಆಗುವದುನ್ನು, ಆ ಊರು ಮುಂದೆ ತೋಪಿನಲ್ಲಿ ಗುಡಾರ ಹಾಕಿಸಿ, ಅಲ್ಲಿ ಇಳಿದು, ಅಶನವನ್ನು ಮಾಡಿ, ಬಿಸಲು ಹೊತ್ತಿನಲ್ಲಿ ಸ್ವಲ್ಪ ನಿದ್ರೆ ಮಾಡಿ, ಆ ತರುವಾಯ ಡೇರೆಗೆ ಈಚೆ ಕುರ್ಚಿ ಹಾಕಿಸಿ ಕೊಂಡು, ಕುಳಿತು ಇ

## DIALOGUE X.

### *With an Old Man.*

The gentleman set out next day at sunrise. As he proceeded, there was a village to the East, called Kelamangala. It was nine o'clock when he approached the village; so he had his tent pitched in a grove in front of the village, halted there, breakfasted, and slept a little during the heat of the day. After this, he had a chair placed outside the tent, and was sitting there, when an

2. ಸೂರ್ಯ ಉದಯಕ್ಕೆ.

ರುವಲ್ಲಿ, ಆ ಊರಿಂದ ಒಬ್ಬ ಮುದುಕನು ಕೋಲೂರಿ[3]
ಕೊಂಡು, ನಡುವು ಬಗ್ಗಿಸಿ ಕೊಂಡು, ಆ ತೋಪಿನ
ಮಾರ್ಗವಾಗಿ ಹೊರಟು, ಆಚೆ ಹೊಲಕ್ಕೋ, ಗದ್ದೆ
ಗೋ, ಭಾವಿಗೋ, ಹೋಗುತ್ತಾ ಇದ್ದವನ ಕಂಡು,
ಅಯ್ಯಾ, ಮುದುಕಾ, ಇಲ್ಲಿ ಬಾ ಎಂದು, ಈ ಸರದಾ
ರನು ಕರೆಯಲು; ಬಲಗಡೆ ತಿರಿಗಿ ನೋಡಿದನು. ಅಲ್ಲಿ
ನಡೀ ತೋಪಿನಲ್ಲಿ ಡೇರೇ ಮುಂದು ಗಡೆ ಕುರಿಚೀ
ಮೇಲೆ ಕುಳಿತು ಇರುವ ತಾಂಬ್ರಮುಖನ ಕಂಡು, ಈ
ತನಾರೋ, ಸರದಾರ ಬಂದು ಇದ್ಧಾನೆ. ನನ್ನೇ[4] ಕೂ
ಗಿದನೋ? ಇನ್ಯಾರನ್ನಾದರೂ ಕೂಗಿದನೋ? ಎಂಬ
ಅನುಮಾನದಿಂದ ತನ್ನ ಕಡೇ ಮುಖವಾಗಿ ನಿಂತು ಇ
ರುವ ಆ ಮುದುಕನನ್ನು ನೋಡಿ, ಅಯ್ಯಾ, ಯಜಮಾ

old man, leaning upon a stick and stooping, came out of the village by way of the grove, and was going to some field, or rice ground, or well beyond. The gentleman seeing him, called, "Ho, old man, come here." The old man turned and looked to the right, and seeing there the Copper-face sitting on a chair before the tent in the middle of the grove, said to himself, "Who can this be? Some nobleman has come. Did he call me, or somebody else, I wonder?" The gentleman seeing the old man standing in doubt, with his face

3. ಕೋಲು ಊರಿ.

4. For ನನ್ನನ್ನೇ.

ನರೇ, ಬನ್ನಿ; ನಾವು ನಿಮ್ಮನ್ನೇ ಕೂಗಿದ್ದು ಎಂದು, ಪುನಹಾ ಮಾತನಾಡಿಸಲು;

ಈ ವೃದ್ಧನು ಕೋಲೂರಿ ಕೊಂಡು, ಬಂದು, ಸಮೀಪದಲ್ಲಿ ನಿಂತು, ಸಲಾಂ ಮಾಡಿದನು. ಬದಲಾಗಿ ಸಲಾಂ ಮಾಡಿ, ಕೂತು ಕೊಳ್ಳಿರೈಯ್ಯಾ, ಎಂದು ಹೇಳಲು; ಅಲ್ಲಿ ಒಂದು ಮಾವಿನ ಮರದ ಬುಡದಲ್ಲಿ ಒಂದು ಬೇರು ಅಗಲವಾಗಿ ಹರಡಿ ಕೊಂಡು ಇತ್ತು. ಆ ಬೇರಿನ ಮೇಲೆ ಕುಳಿತು, ಆ ಮರವನ್ನು ಬೆನ್ನಾಸರೆ[5] ಮಾಡಿ ಕೊಂಡು,

ಮು. ಧೊರೆಗಳು ಎಲ್ಲಿಂದಾ ದಯ ಮಾಡುವದಾಯಿತು?

ಧೊ. ನಾವು ಬೆಂಗಳೂರಿಂದ ಬಂದೆವು.[6]

towards him, again addressed him, "Ho, old man, it was you I called."

On which the old man came leaning on his stick, stood near, and made salaam. Returning his salaam, the gentleman said, "Be seated, Sir." There was there at the foot of a mango tree, a wide spreading root. So sitting down upon the root, and supporting his back against the tree, he began :—

O. Whence has the gentleman been pleased to favour us?

G. I came from Bangalore.

5. ಬೆನ್ನು ಆಸರೆ.

6. The discrepancy between this and the statement at page 183 is not to be regarded; as the former was said to deceive the brahmans!

ಮು. ಮುಂದೆ ಎಲ್ಲಿ ವರಿವಿಗೂ ಸ್ವಾರೀ ಬೆಳಯುತ್ತಿದೆಯೋ?

ಧೊ. ಮುಂದೆ ಶೇಲಂ; ಆಪ್ರಾಂತ್ಯಕ್ಕೆ ಹೋಗ ಬೇಕು.

ಅನ್ನಲು; ಕೇಳಿ, ಸುಮ್ಮನೆ ಇದ್ದ ಮುದುಕನನ್ನು ಕುರಿತು,

ಧೊ. ಮುದುಕನೇ, ನೀನು ಈ ಊರಿನಲ್ಲೇ ಇರುತ್ತೀಯೋ?

ಮು. ಹೌದಯ್ಯಾ, ಈ ಊರಿನಲ್ಲೇ ಇರುತ್ತೇನೆ.

ಧೊ. ನಿನ್ನ ಹೆಸರೇನು?

ಮು. ನನ್ನ ಹೆಸರು ಸರ್ವೈಯನು.

ಧೊ. ಸರ್ವೈಯನಂದರೆ, ಯಾವ ದೇವರ ಹೆಸರು?

ಮು. ಸರ್ವ ಜಗತ್ತಿಗೂ ಅಯ್ಯನು, ತಂದೆಯಾದವನೇ ಸರ್ವಯ್ಯನು. ಅವನೇ ದೇವರು. ಆ ದೇವರ ಹೆಸರು.

O. How much further does your journey extend?

G. Further on is Salem. I am going to that district.

The old man listened and was silent. So the gentleman said to him,

G. Old man, do you live in this town?

O. Yes, Sir; I live in this town.

G. What is your name?

O. My name is Sarvayya.

G. Sarvayya? What god's name is that?

O. The Sire or parent of the whole universe is Sarvayya. He is God. This is that God's name.

ಧೊ. ದೇವರ ಹೆಸರು ಮನುಷ್ಯರು ಇಟ್ಟು ಕೊಳ್ಳ ಬಹುದೋ?

ಮು. ದೇವರ ಹೆಸರಲ್ಲದೆ, ಮನುಷ್ಯರ ಹೆಸರು ಬ್ಯಾರೆ ಉಂಟೋ?

ಧೊ. ಮನುಷ್ಯರ ಹೆಸರುಗಳು ಬ್ಯಾರೆ; ಮನುಷ್ಯರ ನಡತೆಗಳು ಬೇರೆ; ದೇವರ ಹೆಸರು ಒಂದೇ; ಬೇರೆಯಾಗಿ ಇರುವದು. ಆ ಬೇರೆಯಾಗಿ ಇರುವ ದೇವರು ಯಾವ ಹೆಸರನ್ನು ಹೊಂದಿ ಇರುವನೋ, ನೀನು ಹೇಳು. ಬಹಳ ದಿವಸದ ಮುದುಕನಾಗಿದ್ದೀ.

ಮು. ನಾನು ಮುದುಕನಾದ ಮಾತ್ರದಿಂದ ನನಗೆ ತಿಳಿಯದು; ನಿಮ್ಮಂಥಾ ಬುದ್ಧಿವಂತರು ಶಾಸ್ತ್ರಗಳನ್ನು ಪರಿಶೋಧಿಸಿ, ತಿಳಿದು, ಹೇಳ ತಕ್ಕ ಮಾತಿದು.[7]

G. Is it right for men to take God's name?

O. Is there a name of men separate from the name of God?

G. Men's names and ways are various. God's name is one, and different (from men's.) Do you tell me by what name that separate God is called. You are an old man of many days.

O. I don't know it merely because I am an old man. This is a matter to be settled by clever people like yourself, who have examined and understand the shastras.

7. ಮಾತು ಇದು.

ಘೊ. ಶಾಸ್ತ್ರಗಳಲ್ಲಿ ಹುಡಿಕಿದರೆ, ದೇವರ ಹೆಸರು ಶಿಕ್ಕುವದೋ?

ಮು. ಹುಡುಕಿದವರಿಗೂ ಹುಡುಕಲಾರದವರಿಗೂ ಸಹಾ ದೇವರು ದೇವರು ಎಂಬ ಹೆಸರು ಒಂದೆಂತೂ ಎಲ್ಲರಿಗೂ ತಿಳಿದು ಇದೆಯುಷ್ಟೆ. ಇದರ ಮೇಲೆ ಹುಡುಕುತ್ತಾ, ಹುಡುಕುತ್ತಾ, ಇನ್ನು ಇಂಥಾ ಹೆಸರು, ಇಂಥಾ ಮಹಿಮೆ, ಇಂಥಾ ಚರಿತ್ರೆ ಉಳ್ಳವನೆಂದು ಶಿಕ್ಕುತ್ತದೆಯೋ, ನೋಡ ಬೇಕು.

ಘೊ. ದೇವರ ಹೆಸರೂ ಮಹಿಮೆಯೂ ಚರಿತ್ರವೂ ಶಿಕ್ಕುವ ಶಾಸ್ತ್ರ ನಿನ್ನಲ್ಲಿ ಉಂಟೋ?

ಮು. ನನ್ನಲ್ಲಿ ಇಲ್ಲದೆ ಇದ್ದರೂ, ನಮ್ಮ ಗುರುವುಗಳಲ್ಯಾದರೂ ಇದ್ದೀತು.

G. Is God's name to be found by searching the shastras?

O. One name at any rate, "God, God," is known to everybody, you know; both to those who search the shastras, and to those who are unable to search them. Beyond this, by repeatedly searching, we must see whether we can find that God possesses, in addition, such and such names, such and such greatness, such and such virtues.

G. Have you a shastra that contains God's name, and greatness, and virtues?

O. Though I have not, most likely some of our priests have.

ಧೊ. ನಿಮ್ಮ ಗುರುಗಳು ಯಾರು?

ಮು. ಒಳ್ಳೇ ಮಾತನ್ನೇ ತಿಳಿಸುವವರೇ.

ಧೊ. ಅವರ್ಯಾರು?

ಮು. ಬ್ರಾಂಹ್ಮಣರು.

ಧೊ. ಬ್ರಾಂಹ್ಮಣರು ಒಳ್ಳೇ ಮಾತುಗಳು ತಿಳಿಸುವರೋ?

ಮು. ಅವರು ತಿಳಿಸುವದೇ ಒಳ್ಳೇ ಮಾತು.

ಧೊ. ಕೆಟ್ಟ ಮಾತು ಅವರಲ್ಲಿ ಇಲ್ಲವೋ?

ಮು. ಕೆಟ್ಟ ಮಾತುಗಳು ಯಾಕೆ ಇದ್ದೀತು?

ಧೊ. ಇದ್ದಾಗ್ಯುನ್ನೂ, ಆ ಮಾತು ನಿಮಗೆ ತಿಳಿಸಲಾರರೋ?

ಮು. ಕೆಟ್ಟ ಮಾತುಗಳು ಯಾಕೆ ತಿಳಿಸ್ಯಾರು? ಎಷ್ಟು ಮಟ್ಟಿಗೂ ತಿಳಿಸರು.

G. Who are your priests?
O. Those who teach us good things.
G. Who are they?
O. Brahmans.
G. Do the brahmans teach you good things?
O. What they teach is good.
G. Are there no wicked things in them?
O. Why should there be wicked things?
G. If there be, cannot they teach it to you?
O. Why should they teach us wicked things? On no account do they teach them.

ಧೊ. ನೀನು ಕುಲದಲ್ಲಿ ಯಾರು?

ಮು. ನಮ್ಮ ಕುಲ ಪದ್ಮಸಾಲೆಯುವರು.

ಧೊ. ಪದ್ಮಸಾಲೆಯುವರಾದರೆ, ಮಾಡುವ ಕೆಲಸವೇನು?

ಮು. ವಸ್ತ್ರಗಳು ನೇಯುವವರು.

ಧೊ. ನೇಯುವವರೇ? ಆದರೆ ನೀವು ಯಾವ ದೇವರನ್ನು ಭಜಿಸುತ್ತೀರಿ?

ಮು. ನಮ್ಮ ನೇಯುವ ಪಡಿಗಿನ ಮೇಲೆ ಬಾಲ ರೂಪದಿಂದ ಯಾವ ದೇವರು ಕುಣಿದು, ನಮ್ಮ ಪೂರ್ವೀಕರಿಗೆ ಪ್ರತ್ಯಕ್ಷವಾಗಿ, ಮೋಕ್ಷವನ್ನು ಕೊಟ್ಟು ಇದ್ಧಾನೋ, ಆ ದೇವರನ್ನು ಭಜಿಸುತ್ತೇವೆ.

ಧೊ. ಆ ದೇವರ್ಯಾರು?

ಮು. ಶ್ರೀ ಕೃಷ್ಣಸ್ವಾಮಿ.

G. To what caste do you belong?

O. Our caste are weavers.

G. If weavers, what is your business?

O. We are (cotton) cloth weavers

G. Weavers, are you! Then what god do you worship?

O. The god that danced on our warps in the form of a boy, that appeared to our forefathers and gave them everlasting happiness, he is the god we worship.

G. Who is that god?

O. Shrì Krishna Swāmy.

ಧೊ. ಕೃಷ್ಣನೋ?

ಮು. ಹೌದು.

ಧೊ. ಕೃಷ್ಣನು ವಿಷ್ಣುವಿನ ಅವತಾರವೋ?

ಮು. ಹೌದು.

ಧೊ. ಕೃಷ್ಣನು ದೇವರಾಗಿ, ನಿಮ್ಮ ಪೂರ್ವೀಕರಿಗೆ ಮೋಕ್ಷವನ್ನು ಕೊಟ್ಟನೋ?

ಮು. ಹೌದಯ್ಯಾ, ಕೊಟ್ಟು ಇದ್ದಾನೆ.

ಧೊ. ನೀನು ನೋಡಿ ಇದ್ದೀಯೋ?

ಮು. ನಾನು ನೋಡದೆ ಇದ್ದಾಗ್ಯೂ, ಹಿರಿಯರಾದ ವಿದ್ವಾಂಸರು ನೋಡಿ, ನಡದ ವರ್ತಮಾನಗಳು ಪ್ರಸಿದ್ಧವಾಗಿ ಗ್ರಂಥಗಳು ಮಾಡಿ ಇದ್ದಾರೆ.

ಧೊ. ಆ ಗ್ರಂಥದ ಹೆಸರೇನು?

G. Krishna?

O. Yes.

G. Was Krishna an incarnation of Vishnu?

O. Yes.

G. Was Krishna a god, and gave everlasting happiness to your forefathers?

O. Yes, Sir, he gave it.

G. Did you see it?

O. Though I did not see it, learned men of old saw it, and have written books declaring all that took place.

G. What is the name of that book?

ಮು. ಗೀತ ಗೋವಿಂದವೆಂಬ ಗ್ರಂಥವು.

ಧೊ. ಆ ಗ್ರಂಥವನ್ನು ಮಾಡಿ ಬರೆದವನ್ಯಾರು?

ಮು. ಪದ್ಮಾವತಿಗೆ ಪತಿಯಾದ ಜಯದೇವ ಕವಿ.

ಧೊ. ಆತನ್ಯಾರು?

ಮು. ಬ್ರಾಂಹ್ಮಣನು, ವಿದ್ವಾಂಸನು.

ಧೊ. ವಿದ್ವಾಂಸನಾದರೆ, ಸುಳ್ಳು ಮಾತುಗಳು ಕಲ್ಪಿಸಿ ಬರೆಯ ಕೂಡದೋ?

ಮು. ವಿದ್ವಾಂಸರ ಮಾತುಗಳು ಸುಳ್ಳು ಎಂಬುವದಕ್ಕೆ ಅವರಿಗಿಂತ ನಾವು ದೊಡ್ಡ ವಿದ್ವಾಂಸರು ಆದ ಕಾಲಕ್ಕೆ ಅನ್ನ ಬಹುದು.

ಧೊ. ಈಗಿನ ವಿದ್ವಾಂಸರಲ್ಲಿ ಆ ಕವಿಗಿಂತಲೂ ದೊಡ್ಡ ವಿದ್ವಾಂಸನಿಲ್ಲವೋ?

O. The book called Gìta Govinda.

G. Who wrote that book?

O. The poet Jaya Deva, the husband of Padmāvati.

G. Who was he?

O. A brahman, a learned man.

G. Though a learned man, couldn't he invent and write lies?

O. When we are more learned than they, we may pronounce the words of the learned to be lies.

G. Amongst the learned men of the present day, is there none cleverer than that poet?

ಮು. ನಾನು ಇಧೇನೆ, ಎನ್ನುವ ವಿದ್ವಾಂಸನನ್ನು ನಾನು ಇದು ವರಿಗೆ ಕಾಣೆನು, ಕೇಳಲೂ ಇಲ್ಲ. ಇನ್ನು ಮೇಲೆ ಉಂಟಾದರೆ, ನಾನಾಗಲಿ, ಇನ್ನು ಇರುವ ಜನಗಳಾಗಲಿ, ಜೀವಂತರು ಕಾಣ ಬಹುದು.

ಧೊ. ಕಂಡು, ಕೇಳಿದ್ದರಿಂದ ಏನು ಪ್ರಯೋಜನ?

ಮು. ಅವರ ಯೋಗ್ಯತೆಯನ್ನು ವಿಚಾರಿಸುವದೇ ಪ್ರಯೋಜನವು.

ಧೊ. ಅವರ ಯೋಗ್ಯತೆಯನ್ನು ನೀನು ವಿಚಾರಿಸುತ್ತೀಯಾ?

ಮು. ನನಗೆ ತೋರಿದ ಮಟ್ಟಿಗೆ ನಾನು ವಿಚಾರಿಸುವೆನು. ಇನ್ನೂ ವಿಚಾರಿಸುವವರು ಬಹಳವಾಗಿ ಇರುವರು.

ಧೊ. ಅವರು ಎಲ್ಲಿ ಇದ್ಧಾರೆ?

O. I never yet saw a learned man that said he was; nor heard of one either. If, at some future time, one should arise, either I or those who come after me, those who are living, may see him.

G. What would be the use of seeing or hearing of him?

O. It would be of use to test his ability.

G. Would you test his ability?

O. I should test him to the extent of my ability; and there are many who would test him further.

G. Where are they?

ಮು. ಅನೇಕ ಸ್ಥಳಗಳಲ್ಲಿ ಇದ್ಧಾರೆ.

ಧೊ. ನೀನು ದೇವರೆಂದು ಹೇಳುವ ಕೃಷ್ಣನು ದೇವರಲ್ಲಾ, ಅರಸು.

ಮು. ಆರಸು ಆದರೆ, ಅರಸುಗಳ ಹಾಗೆ ರಾಜ್ಯಾಧಿಕಾರ[8] ಮಾಡ ತಕ್ಕದ್ದು ಸರಿ. ಮೂರು ವರುಷದ ಹುಡುಗನಾಗಿ, ಸಾಕಿದ ತಾಯಿಯು ಎದುರಿಗೆ ಬಾಯಿ ತೆರೆದು, ಆ ಬಾಯಿಯೊಳಗೆ ಈ ಬ್ರಂಹಾಂಡವಾದ್ಯಂತವನ್ನು[9] ಕಾಣ ಬರುವ ಹಾಗೆ ತೋರಿದ್ದು ಅದೇನು?

ಧೊ. ಬಾಯಿಯಲ್ಲಿ ಎಲ್ಲಾ ಜಗತ್ತು ಕಾಣಿಸಿತೋ?

ಮು. ಕಾಣಿಸಿತು.

ಧೊ. ಆದರೆ ದೊಡ್ಡ ಬಾಯಿ. ಮೂರು ವರುಷದ ಹುಡುಗನ ಬಾಯಿ ಬಹಳ ಚಿಕ್ಕದಾಗಿ ಇರುವದು.

O. In many places.

G. Krishna, whom you call God, was not God; he was a king.

O. If he were a king, he might rule like other kings. But how was it that when a boy of three years old, he opened his mouth before his foster mother, and showed her the whole of this universe in his mouth?

G. Did the whole universe appear in his mouth?

O. It did.

G. Then it must have been a large mouth. The mouth of a boy three years old is very small.

8. ರಾಜ್ಯ ಅಧಿಕಾರ.

9. ಬ್ರಂಹಾಂಡವು ಆದಿ ಅಂತ್ಯ, that is, all.

ಅಂಥಾ ಬಾಯಿಯೊಳಗೆ ಈ ಜಗತ್ತು ಹ್ಯಾಗೆ ಕಾಣಿಸಿತೋ, ತಿಳಿಯ ಬೇಕು.

ಮು. ಚಿಕ್ಕ ಕನ್ನಡಿಯಲ್ಲಿ ದೊಡ್ಡ ಆನೆಯೂ ಅದರ ಅವಯವಗಳೂ ಸಹಾ ಹ್ಯಾಗೆ ಕಾಣಿಸುವದೋ, ಅದೇ ಪ್ರಕಾರ ಕಾಣಿಸಿತು.

ಧೊ. ಸಾಮ್ಯ ಒಳ್ಳೆ ಸಾಮ್ಯವೇ ಹೇಳಿದಿ; ನಡೆದ ಕೆಲಸ ಅನುಮಾನವಾಗಿ ತೋರುತ್ತೆ.

ಮು. ದೇವರು ಮಾಡುವ ಕೆಲಸಗಳೂ ಹಾಗೆಯೇ ಮನುಷ್ಯರಿಗೆ ತಿಳಿಯುವದಕ್ಕೆ ಅನುಮಾನವಾಗಿಯೂ, ಹೇಳುವದಕ್ಕೆ ಅತ್ಯದ್ಭುತವಾಗಿಯೂ,[1] ಇರುವದು.

ಧೊ. ಈ ಕೃಷ್ಣನು ದೇವರ ಅವತಾರವಾದರೆ, ಮನುಷ್ಯನ ಹಾಗೆಯೇ ಲೋಕ ವ್ಯವಹಾರಾದಿಗಳು[2] ಯಾಕೆ ಮಾಡಿದನು?

I want to know how this universe appeared in such a mouth as that.

O. As a large elephant, with all its limbs, appears in a small looking glass, so it appeared.

G. The illustration you have given is a good one; but the circumstance seems incredible.

O. The actions of God are thus incredible to men to understand, and most wonderful to relate.

G. If this Krishna were an incarnation of God, why did he follow the practices of the world like a man?

1. ಅತಿ ಅದ್ಭುತವಾಗಿ. 2. ವ್ಯವಹಾರ ಆದಿ.

ಮು. ಮನುಷ್ಯಾವತಾರವನ್ನೆತ್ತಿದ್ದರಿಂದ,[3] ಮನುಷ್ಯನ ಹಾಗೆಯೇ ವ್ಯವಹರಿಸಿದನು.

ಧೊ. ದೇವರು ಮನುಷ್ಯಾವತಾರವನ್ನೆತ್ತಿದರೆ, ತಾನು ನಡೆದ ನಡತೆಗಳು ಒಳ್ಳೇದಾಗಿ, ಸರ್ವ ಜನಗಳಿಗೂ ಕೇಳುವದಕ್ಕೂ ಹೇಳುವದಕ್ಕೂ ನಾಚಿಕೆ ತೋರದ ಹಾಗೆ ಇರ ಬೇಕು.

ಮು. ಆತನ ನಡತೆಗಳು ಕೇಳ ಹೇಳ ನಾಚಿಕೆ ತೋರುವದೋ?

ಧೊ. ಮಾನಸ್ಥರಾದವರಿಗೆ ಹೇಳುವದಕ್ಕೂ ಭಯವು, ಕೇಳುವದಕ್ಕೂ ನಾಚಿಕೆಯೇ.

ಮು. ಅಂಥಾ ಜನರು ಇನ್ನೂ ಜ್ಞಾನವಂತರಲ್ಲವೆಂದು,[4] ತಿಳಿಯ ಬೇಕು.

O. He acted like a man, *because* he was incarnate as a man.

G. If God become incarnate as a man, all his actions should be good, and so that every body may hear and speak of them without being ashamed.

O. Can there be any shame in hearing and speaking of his actions?

G. Respectable people are afraid to speak, and ashamed to hear.

O. Such people must be regarded as not yet wise.

3. ಮನುಷ್ಯ ಅವತಾರವನ್ನು ಎತ್ತಿದ್ದರಿಂದ.
4. Those who have not obtained spiritual wisdom.

ಧೊ. ನಾಚಿಕೆಯೂ ಭಯವೂ ಬಿಟ್ಟರೇನೋ ಜ್ಞಾನವಂತರು?

ಮು. ಉತ್ತಮೋತ್ತಮವಾದ[5] ಕೃಷ್ಣನ ಕಥೆಯನ್ನು ಕೇಳ ಹೇಳುವದಕ್ಕೆ ನಾಚಿಕೆಯೂ ಭಯವೂ ಪಟ್ಟರೆ, ಮತ್ತೆ ಇನ್ನೇನನ್ನ[6] ಬೇಕು?

ಧೊ. ಆ ಕಥೆಯು ಅರ್ಥವನ್ನು ವಿವರಿಸಿ ಹೇಳುವವರೂ ಕೇಳುವವರೂ ಸಹ, ನಾಚಿಕೆಯೂ ಭಯವೂ ಈ ಎರಡನ್ನು ಬಿಟ್ಟವರ ಹಾಗೆ ಕಾಣುತ್ತೆ.

ಮು. ಕೇಳುವ ಹೇಳುವ ಜನರ ಹೊಂದಿದ ಮಹಾಪಾಪಗಳಿಗೆ ಈ ಮನುಷ್ಯರಲ್ಲಿ ನಾವಿರ ಬಾರದೆಂಬ ಭಯವೂ, ಇಷ್ಟು ದಿವಸವೂ ಇದ್ದು, ವ್ಯರ್ಥವಾದವೆಂಬ ನಾಚಿಕೆಯೂ ತೋರ ಬಹುದು.

G. Then the wise have abandoned shame and fear?

O. What else can be said of them, if they are ashamed or afraid of hearing and repeating the excellent story of Krishna?

G. Those who explain that story, and those who listen to it, do seem to have abandoned both shame and fear.

O. The great Sins that have possessed those who listen to and repeat that story, may be afraid because they can no longer remain in those men; and ashamed that their remaining so long has been to no purpose.

5. ಉತ್ತಮ ಉತ್ತಮವಾದ. 6. ಇನ್ನು ಏನು ಅನ್ನ.

ಧೊ. ಪಾಪಗಳಿಗೆ ಆ ಮೇರಿಗೆ ತೋರುವದಕ್ಕೆ ಕಾರಣವೇನು?

ಮು. ಕೃಷ್ಣ ಕಥೆಯು ಕೇಳುವ ಹೇಳುವ ಮನುಷ್ಯರ ಹೃದಯದಲ್ಲಿ ಆವಾಸ ಮಾಡ ಕೂಡದೆ, ಓಡಬೇಕು; ಅದೇ ಪಾಪಗಳಿಗೆ ಭಯವು. ಬಂದದ್ದಕ್ಕೆ ಅವರಿಗೆ ಶಿಕ್ಷೆ ಮಾಡುವ ವರಿಗೆ ಇದ್ದರೆ, ಆ ಪಾಪಗಳಿಗೆ ಘನವು. ನಡಿವಿಯೇ ಹೋಗುವ ಸಂಗತಿ ಘಟಿಸಿದರೆ, ಅದೇ ನಾಚಿಕೆ.

ಧೊ. ಕಥೆ ಕೇಳಿದ ಮಾತ್ರದಿಂದಲೇ ಪಾಪ ಹೋಗುವದೋ?

ಮು. ಸೂರ್ಯನು ಹುಟ್ಟಿದ ಮೇಲೆ ಕತ್ತಲೆ ಇರುವದೋ?

ಧೊ. ಗುಹೆಗಳಲ್ಲಿ ಇರುವದು.

G. Why should the sins be so?

O. Sins are afraid, because they cannot remain in the heart of those who hear and repeat the story of Krishna, but must flee. Having taken possession, it is the honor of sins to stay until they have punished their possessors. If they are obliged to depart in the mean time, that is a disgrace.

G. Will sin depart by merely hearing the story?

O. Will darkness remain after the sun has risen?

G. In caves it will.

ಮು. ಇದನ್ನು ವಿಶ್ವಾಸವಿಲ್ಲದವರ ಮನಸ್ಸೆಂಬ[7] ಗುಹೆಯಲ್ಲಿ ಪಾಪಗಳೆಂಬ ಕತ್ತಲೆ ಇರಲಿ.

ಧೊ. ವಿಶ್ವಾಸವೆಂಬುವದೇನು?

ಮು. ಕೃಷ್ಣನಲ್ಲದೆ ಬೇರೆ ಮತ್ತೊಬ್ಬ ದೇವರಿಲ್ಲವೆಂದು, ಭಕ್ತಿಯಿಂದ ಇರುವದೇ, ವಿಶ್ವಾಸವು.

ಧೊ. ಆದರೆ ದೇವರುಗಳೆಂಬವರು ಬಹಳ ಮಂದಿಯೋ?

ಮು. ದೇವತೆಗಳು ಬಹಳ ಮಂದಿ ಇದ್ದಾರೆ. ಅವರಲ್ಲೆಲ್ಲಾ ಕೃಷ್ಣಮೂರ್ತಿಯಾದ ವಿಷ್ಣುವೇ ಶ್ರೇಷ್ಠನು.

ಧೊ. ಶಿವನೇ ಶ್ರೇಷ್ಠನೆಂದು ಮತ್ತೊಬ್ಬ ಹೇಳುತ್ತಾನಲ್ಲಾ?

ಮು. ಅನ್ನಲಿ; ಅಂದಮಾತ್ರದಿಂದಲೇ ಹ್ಯಾಗಾಗುತ್ತೆ?

O. Let the darkness of sins remain in the cave-minds of those who have no faith in this.

G. What is faith?

O. Faith is the devout conviction that besides Krishna, there is no God.

G. Then are those who are called gods numerous?

O. The gods are numerous; but the greatest of them all is Vishnu in the form of Krishna.

G. Another man says that Shiva is the greatest, doesn't he?

O. Let him say so. How can it be merely by his saying so?

7. ಮನಸ್ಸು ಎಂಬ.

ಧೊ. ಅದೇಕೆ ನಿನ್ನ ಮಾತು ಮಾತ್ರ ಆಗ ಬಹು
ಮ? ಅವನ ಮಾತು ಆಗ ಬಾರದೆಂಬುವದಕ್ಕೆ ನಿಮಿತ್ತ
ವೇನು?

ಮು. ಅವನಿಗೂ ಇಪನಿಗೂ[8] ಮಾತು ಬಂದಾಗ,
ಆ ಪರಿಕ್ಷೆ ತಿಳಿಯುತ್ತೆ. ಈಗ ನೀವು ಮಾತನಾಡಿಸುವಾ
ಗ, ಆ ಪ್ರಸ್ತಾಪವೇಕೆ?

ಧೊ. ಅವನ ಮಾತೇ ನಾನು ಮಾತಾಡುತ್ತೇನೆ.

ಮು. ಈ ಮೋರಿಗೆ ನೀವು ಕೇಳಿದರೆ, ಉತ್ತರ ಕೊ
ಡುವದು ಕಷ್ಟ.

ಧೊ. ಅದೇಕೆ ಉತ್ತರ ಕೊಡ ಕೂಡದು?

ಮು. ನೀವು ಧೊರೆಗಳು, ನಾವು ಬಡವರು. ಖಂಡಿ
ತವಾಗಿ ಮಾತಾಡಿದರೆ, ಕೋಪಗಳು ಬಂದೀತು. ಯಾ

G. Why is it that your word only is to be taken? What reason is there for not taking his word?

O. You may find that out when they are arguing. Why raise that question now whilst you are conversing with me?

G. I will take his part.

O. If you question me in this way, it will be difficult to answer.

G. Why cannot you answer?

O. You are a gentleman; we are poor people. If I speak positively, you will perhaps get angry.

8. *i. e.* the two holding different opinions.

ಕೆ ಬೇಕಾಗಿಧೆ? ಅಪ್ಪಣೆ ಕೊಟ್ಟರೆ, ಮನೆಗೆ ಹೋಗುತ್ತೇನೆ.

ಧೊ. ಉತ್ತರ ಹೇಳುವದಕ್ಕೆ ತೋರದೆ, ಇದೊಂದು ಉಪಾಯ ತೆಗದೆಯೋ?

ಮು. ಹೌದಯ್ಯಾ, ಮಾತಿಗೆ ಮಾತು ಸರಿಯಾಗಿ ಹೇಳುತ್ತಾ ಬಂದರೆ, ಸಹಜವಾಗಿ ಎಣಿಸಿದರೆ, ಸರಿ. ಅಸಹಜವೆಂದೆಣಿಸಿ, ಕೋಪಗೊಂಡರೆ, ನಾವೇನು ಮಾಡತಕ್ಕದ್ದು?

ಧೊ. ಅಸಹಜ ಸಹಜವೆನ್ನುವದು ಮಾತನಾಡುವಾಗ ತಿಳಿಯ ಬೇಕು. ಸಹಜವಾದರೆ, ಸಹಜವಾಗುತ್ತೆ. ಅಸಹಜವಾದರೆ, ಸರಿಯಾದ ಉತ್ತರ ಅಲ್ಲವೆಂದು ಹೇಳೇವೇ ಹೊರ್ತು, ಕೋಪ ಮಾಡುವದಕ್ಕೆ ಏನು ಆಕರ?

What need is there for that? If you give me permission, I will go home.

G. Have you taken this plan because you are at a loss to answer?

O. Yes, Sir; if I answer each point correctly, and you think I am right, all well. But if you think me wrong, and get angry, what can I do?

G. We must find out in conversation whether a thing be right or wrong. If right, it will be right; if wrong, I shall merely say, "that is not a proper answer;" what ground is there for being

ನಿನಗೆ ಮಾತನಾಡುವದಕ್ಕೆ ಬೇಸರ ತೋರಿದರೆ, ಮನೆಗೆ ಹೋಗಪ್ಪಾ.

ಮು. ನನಗೆ ಬೇಸರಿಕೆ ಇಲ್ಲವೈಯ್ಯಾ; ಇನ್ನೂ ಮೂರು ದಿವಸ ಈ ಮೋರಿಗೆ ಕೇಳಿದರೂ, ಉತ್ತರಗಳು ತೋರಿದ ಮಟ್ಟಿಗೂ ಹೇಳೇನು. ಯಾಕಂದರೆ ಧೊರೆಗಳ ಸಂಗಡ ಮಾತನಾಡುವಲ್ಲಿ ಆ ಮೋರಿಗೆ ಮುಂದೆಚ್ಚತ್ತು ಇರ ಬೇಕು.[9] ಅದಕ್ಕಾಗಿ ತಮಗೆ ತಿಳಿಸಿದೆನು. ಸಾಯಂಕಾಲವಾಯಿತು. ಅಪ್ಪಣೆ ಆದರೆ, ಮನೆಗೆ ಹೋಗುತ್ತೇನೆಂದು,

ಆ ಮುದುಕನು ಮನೆಗೆ ಬಂದನು.

ಅಲ್ಲಿ ಆ ಸರದಾರನು ಸವುಖ್ಯವಾಗಿ ಆ ರಾತ್ರಿ ಕಳೆದು, ಬೆಳಗ್ಯೆ ಮುಂದೆ ಪ್ರಯಾಣವಾಗಿ ಹೊರಟು, ಆ ವರಿಗೆ

angry? If, however, it be disagreeable to you to talk, you may go home, Sir.

O. It is not disagreeable to me, Sir. If you question me in this way for three days longer, I shall answer you as well as I can. But when talking with gentlemen, one must take precautions in that way. On this account I said so to you. It is now evening. If you give me leave, I shall go home.

With this, the old man returned home.

The gentleman having passed the night there comfortably, in the morning proceeded on his

9. *i. e.* must get them to promise not to be angry if they do not agree with one.

ಎಂಟು ಹತ್ತು ದಿವಸಗಳಾಗುವದುನ್ನೂ, ಹಿಂದಿರಿಗಿ, ಯು
ಥಾ ಪ್ರಕಾರ ತನ್ನ ಸ್ಥಳಕ್ಕೆ ಬಂದು, ಶೇರಿ, ಸುಖವಾಗಿ
ಇದ್ದನು.

ಸಮಾಪ್ತಿ.

journey; and having, by this time, been eight or ten days absent, he returned, reached home as before, and lived happily.

END.

1922 G 7115. C.

# CANARESE WORKS

PUBLISHED AT THE

# WESLEYAN MISSION PRESS.

| | R. | A. | P. |
|---|---|---|---|
| ALPHABET; with all the combinations of vowels and consonants, in very large type. In one sheet $3\frac{1}{2}$ ft. by 2 ft. 2 inches .. | 0 | 4 | 0 |
| READING LESSONS, No. I. .. .. | 0 | 2 | 0 |
| Do. do. No. II. .. .. | 0 | 3 | 0 |
| Do. do. No. III. .. .. | 0 | 3 | 0 |
| GRAMMAR, IN CANARESE .. .. | 0 | 3 | 0 |
| GRADUATED READING LESSONS. .. | 0 | 4 | 0 |
| SEVENTY STORIES .. .. .. | 0 | 8 | 0 |
| KATHA MANJARI .. .. .. | 0 | 12 | 0 |
| PHRASE BOOK IN ENGLISH AND CANARESE, 4th edt., pp. 296. .. .. | 1 | 0 | 0 |
| ENGLISH AND CANARESE DICTIONARY, pp 568.. .. .. .. | 4 | 0 | 0 |
| SPELLING WITH MEANINGS, IN ENGLISH AND CANARESE .. .. | 0 | 6 | 0 |
| VOCABULARY IN ENGLISH & CANARESE. | 1 | 0 | 0 |

**PREPARING FOR PUBLICATION.**

A LARGE CANARESE AND ENGLISH DICTIONARY, 8vo.

A CANARESE GRAMMAR, IN ENGLISH.

# DIALOGUES

IN

# CANARESE,

BY MUNSHI SHRINIVASIAH.

WITH AN

# ENGLISH TRANSLATION,

BY

RICHARD G. HODSON.

REVISED

BY THE REV. D. SANDERSON.

BANGALORE:

PRINTED AND PUBLISHED AT THE WESLEYAN MISSION PRESS.
BY B. RUNGIAH, *Printer.*
1857.